लोकहितार्थ सत्यनिष्ठा
Dedicated to Truth in Public Interest

# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ

# ಕರ್ನಾಟಕದಲ್ಲಿ ನಗರ ಪ್ರದೇಶದ ಬಡವರಿಗೆ ವಸತಿ ಯೋಜನೆಗಳ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ



ಕರ್ನಾಟಕ ಸರ್ಕಾರ

2022ನೇ ವರ್ಷದ ವರದಿ ಸಂಖ್ಯೆ 4

# ಭಾರತದ ಲೆಕ್ಕನಿಯಂತ್ರಕರು ಮತ್ತು
# ಮಹಾಲೆಕ್ಕಪರಿಶೋಧಕರ ವರದಿ

## ಕರ್ನಾಟಕದಲ್ಲಿ ನಗರ ಪ್ರದೇಶದ ಬಡವರಿಗೆ ವಸತಿ ಯೋಜನೆಗಳ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ

**ಕರ್ನಾಟಕ ಸರ್ಕಾರ**

**2022ನೇ ವರ್ಷದ ವರದಿ ಸಂಖ್ಯೆ – 4**

## ವಿಷಯಸೂಚಿ


| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| | ಮುನ್ನುಡಿ | v |
| | ಕಾರ್ಯನಿರ್ವಹಣಾ ಸಾರಾಂಶ | vii |
| **ಅಧ್ಯಾಯ–I** | **ಪರಿಚಯ** | |
| 1.1 | ಆಡಳಿತ ಮತ್ತು ಅನುಷ್ಠಾನ ರಚನೆ | 1 |
| 1.2 | ಲೆಕ್ಕಪರಿಶೋಧನಾ ಉದ್ದೇಶಗಳು | 2 |
| 1.3 | ಲೆಕ್ಕಪರಿಶೋಧನಾ ಮಾನದಂಡ | 3 |
| 1.4 | ಲೆಕ್ಕಪರಿಶೋಧನಾ ವ್ಯಾಪ್ತಿ | 3 |
| 1.5 | ಲೆಕ್ಕಪರಿಶೋಧನಾ ವಿಧಾನ | 3 |
| 1.6 | ಕೃತಜ್ಞತೆ | 4 |
| 1.7 | ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು | 4 |
| **ಅಧ್ಯಾಯ–II** | **ಫಲಾನುಭವಿಗಳ ಆಯ್ಕೆ ಮತ್ತು ಯೋಜನೆ** | |
| 2.1 | ಫಲಾನುಭವಿಗಳ ಆಯ್ಕೆ | 5 |
| 2.2 | ಯೋಜನೆಗಳಿಗೆ ಫಲಾನುಭವಿಗಳ ಜೋಡಣೆ | 8 |
| 2.3 | ಬೇಡಿಕೆ ಸಮೀಕ್ಷೆಯ ಹೊರಗಿನ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದು | 10 |
| 2.4 | ಕೌಶಲ್ಯ ಯೋಜನೆ ಮತ್ತು ವಾರ್ಷಿಕ ಯೋಜನೆಗಳ ತಯಾರಿಕೆಯಲ್ಲಿ ವಿಳಂಬ | 14 |
| 2.5 | ವಸತಿ ಕ್ಷೇತ್ರದ ಬೆಳವಣಿಗೆಗೆ ಕಡ್ಡಾಯವಾಗಿರುವ ಸುಧಾರಣೆಗಳನ್ನು ಮಾಡದಿರುವುದು | 16 |
| **ಅಧ್ಯಾಯ–III** | **ಪಾಲುದಾರಿಕೆಯಲ್ಲಿ ಕೈಗೆಟುಕುವ ವಸತಿ** | |
| 3.1 | ಪರಿಚಯ | 19 |
| 3.2 | ಆರ್ಥಿಕ ಸಂಪನ್ಮೂಲಗಳಲ್ಲಿ ಕೊರತೆ | 19 |
| 3.3 | ಎಹೆಚ್‌ಪಿ ಯೋಜನೆಗಳ ಕಾರ್ಯಗತಗೊಳಿಸುವಿಕೆಯಲ್ಲಿ ಕೊರತೆ | 23 |
| **ಅಧ್ಯಾಯ–IV** | **ಫಲಾನುಭವಿ ನೇತೃತ್ವದ ವೈಯಕ್ತಿಕ ವಸತಿ ನಿರ್ಮಾಣ** | |
| 4.1 | ಪರಿಚಯ | 29 |
| 4.2 | ಫಲಾನುಭವಿಗಳನ್ನು ಲಗತ್ತಿಸುವ ಕೊರತೆಯಿಂದಾಗಿ ಕೇಂದ್ರದ ನೆರವನ್ನು ಬಿಡುಗಡೆ ಮಾಡದಿರುವುದು | 30 |

| | | |
|---|---|---|
| 4.3 | ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ಬಿಡುಗಡೆ ಮಾಡದಿರುವುದು | 30 |
| 4.4 | ಅಪೂರ್ಣ ಮನೆಗಳ ಮೇಲೆ ಫಲಪ್ರದವಲ್ಲದ ವೆಚ್ಚ | 32 |
| 4.5 | ನೇರ ಪ್ರಯೋಜನ ವರ್ಗಾವಣೆ | 33 |
| **ಅಧ್ಯಾಯ–V** | **ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ** | |
| 5.1 | ಪರಿಚಯ | 35 |
| 5.2 | ಭೌತಿಕ ಮೇಲ್ವಿಚಾರಣೆಯ ಕೊರತೆಯು ನಕಲಿ ಪಾವತಿಗಳಲ್ಲಿ ಪರಿಣಮಿಸಿತು | 35 |
| 5.3 | ಜಿಯೋ–ಟ್ಯಾಗಿಂಗ್ ಮೂಲಕ ಮನೆಗಳ ಮೇಲ್ವಿಚಾರಣೆ | 36 |
| 5.4 | ಟಿಪಿಕ್ಯೂಎಮ್ಎ ಕಾರ್ಯವೈಖರಿ | 40 |
| 5.5 | ಸಿಎಲ್‌ಟಿಸಿಯ ಕಾರ್ಯವೈಖರಿ | 41 |
| 5.6 | ಸಾಮಾಜಿಕ ಲೆಕ್ಕಪರಿಶೋಧನೆ | 41 |
| **ಅಧ್ಯಾಯ–VI** | **ಫಲಿತಾಂಶ ಮತ್ತು ಶಿಫಾರಸುಗಳು** | |
| 6.1 | **ಫಲಿತಾಂಶ** | 43 |
| 6.2 | ಶಿಫಾರಸುಗಳು | 45 |
| | ಅನುಬಂಧಗಳು | 49 |
| | ಶಬ್ಧಕೋಶ | 71 |

## ಅನುಬಂಧಗಳ ಪಟ್ಟಿ



| ಅನುಬಂಧ ಸಂಖ್ಯೆ | ವಿವರಗಳು | ಪುಟ ಸಂಖ್ಯೆ |
|---|---|---|
| 1.1 | ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಗೆ ಆಯ್ಕೆ ಮಾಡಿದ ಮಾದರಿಗಳ ವಿವರಗಳು | 49 |
| 2.1 | ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಪ್ರಯೋಜನಗಳನ್ನು ಪಡೆದ ಫಲಾನುಭವಿಗಳ ಪಟ್ಟಿ | 50–51 |
| 2.2 | ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸಿದ ಎಹೆಚ್‌ಪಿ ಯೋಜನೆಗಳಡಿಯಲ್ಲಿ ಬಹು ಪ್ರಯೋಜನಗಳನ್ನು ಪಡೆದ ಫಲಾನುಭವಿಗಳ ಪಟ್ಟಿ | 52–54 |
| 2.3 | ವಿವಿಧ ಘಟಕಗಳಡಿಯಲ್ಲಿ ಫಲಾನುಭವಿ ಮತ್ತು ಪತಿ/ಪತ್ನಿ ಇಬ್ಬರೂ ಪ್ರಯೋಜನಗಳನ್ನು ಪಡೆದ ವಿವರಗಳು | 55 |
| 2.4 | ಬೇಡಿಕೆಯ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗಿಂತ ಅನುಮೋದಿತ ವಸತಿ ಘಟಕಗಳು ಹೆಚ್ಚಿರುವ ನಗರ ಸ್ಥಳೀಯ ಸಂಸ್ಥೆಗಳನ್ನು ತೋರಿಸುವ ತ:ಖ್ತೆ | 56 |
| 3.1 | ಸಿಎಸ್‌ಎಮ್‌ಸಿ ನಿಗದಿಪಡಿಸಿದ ಷರತ್ತುಗಳನ್ನು ಅನುಸರಣೆ ಮಾಡದಿರುವುದು | 57–58 |
| 3.2 | ಫಲಾನುಭವಿಯ ಪಾಲನ್ನು ವಂತಿಗೆ ನೀಡದ ಕಾರಣ ವಸತಿ ಘಟಕಗಳನ್ನು ಪ್ರಾರಂಭಿಸದಿರುವುದನ್ನು ತೋರಿಸುವ ತ:ಖ್ತೆ | 59 |
| 3.3 | ಯೋಜನೆಗಳ ಅನುಮೋದನೆ/ಕಾರ್ಯಗತಗೊಳಿಸುವಿಕೆಯಲ್ಲಿನ ವಿಳಂಬದ ಕಾರಣ ಹಣಕಾಸಿನ ಪರಿಣಾಮ | 60–61 |
| 3.4 | ಅಸ್ತಿತ್ವದಲ್ಲಿರುವ ರಚನೆಗಳನ್ನು ನೆಲಸಮ ಮಾಡಲು ಗುತ್ತಿಗೆದಾರರಿಗೆ ಮಾಡಿದ ಪಾವತಿಗಳನ್ನು ತೋರಿಸುವ ತ:ಖ್ತೆ | 62–63 |
| 4.1 | ಫಲಾನುಭವಿಗಳಿಗೆ ಮಾಡಿರುವ ಕೇಂದ್ರದ ನೆರವಿನ ಎರಡುಬಾರಿಯ ಪಾವತಿಗಳನ್ನು ತೋರಿಸುವ ತ:ಖ್ತೆ | 64–67 |
| 4.2 | ಫಲಾನುಭವಿಗಳಿಗೆ ಮಾಡಿರುವ ರಾಜ್ಯ ನೆರವಿನ ಎರಡುಬಾರಿಯ ಪಾವತಿಗಳನ್ನು ತೋರಿಸುವ ತ:ಖ್ತೆ | 68–69 |
| 5.1 | ಸಾಧಿಸಿದ ಪ್ರಗತಿಗೆ ಅಸಮನಾದ ಅಧಿಕ ಪಾವತಿಗಳನ್ನು ಸ್ವೀಕರಿಸಿದ ಫಲಾನುಭವಿಗಳನ್ನು ತೋರಿಸುವ ತ:ಖ್ತೆ | 70 |

## ಮುನ್ನುಡಿ

1. 31 ಮಾರ್ಚ್ 2021ಕ್ಕೆ ಕೊನೆಗೊಂಡ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ಭಾರತದ ಸಂವಿಧಾನದ 151(2)ನೇ ವಿಧಿಯಡಿಯಲ್ಲಿ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲು ಕರ್ನಾಟಕ ಸರ್ಕಾರದ ರಾಜ್ಯಪಾಲರಿಗೆ ಸಲ್ಲಿಸುವುದಕ್ಕೆ ತಯಾರಿಸಲಾಗಿದೆ.
2. 2015–21ನ್ನು ವ್ಯಾಪಿಸುವ ಈ ವರದಿಯು ಕರ್ನಾಟಕದಲ್ಲಿ ನಗರ ಪ್ರದೇಶದ ಬಡವರಿಗೆ ವಸತಿ ಯೋಜನೆಗಳ ಅನುಷ್ಠಾನದ ಮೇಲಿನ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.
3. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳಿಗೆ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.
4. ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

## ಕಾರ್ಯನಿರ್ವಹಣಾ ಸಾರಾಂಶ

ಭಾರತ ಸರ್ಕಾರವು 2022ರ ವೇಳೆಗೆ 'ಎಲ್ಲರಿಗೂ ವಸತಿ' ಒದಗಿಸುವ ಪರಿಕಲ್ಪನೆಯೊಂದಿಗೆ ಜೂನ್ 2015ರಲ್ಲಿ 'ಪ್ರಧಾನ ಮಂತ್ರಿ ಆವಾಸ್ ಯೋಜನೆ–ಎಲ್ಲರಿಗೂ ವಸತಿ (ನಗರ)' [ಪಿಎಮ್‌ಎವೈ(ಯು)] ಯೋಜನೆಯನ್ನು ಪ್ರಾರಂಭಿಸಿತು. ಕರ್ನಾಟಕ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆಯೊಂದಿಗೆ ಹೊಂದಾಣಿಕೆಯಾಗುವ ಕರ್ನಾಟಕ ಕೈಗೆಟುಕುವ ವಸತಿ ನೀತಿ, 2016ನ್ನು (ಕೆಎಹೆಚ್‌ಪಿ) ಅಧಿಸೂಚಿಸಿತು, ಮತ್ತು ಪಿಎಮ್‌ಎವೈ(ಯು) ನೊಂದಿಗೆ, ಅಸ್ತಿತ್ವದಲ್ಲಿರುವ ರಾಜ್ಯ ವಲಯದ ವಸತಿ ಯೋಜನೆಗಳನ್ನು ಸೇರಿಸಿತು.

ಪಿಎಮ್‌ಎವೈ(ಯು) ಯೋಜನೆಯಡಿ, ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯು ಅರ್ಹ ವ್ಯಕ್ತಿಗಳ ಸೇರ್ಪಡೆಯನ್ನು ಖಚಿತಪಡಿಸುತ್ತದೆಯೇ ಮತ್ತು ನಗರ ಪ್ರದೇಶದ ಬಡವರಿಗೆ ವಸತಿ ಸವಾಲುಗಳನ್ನು ಎದುರಿಸಲು ಸಮಗ್ರ ಯೋಜನೆಗಳನ್ನು ತಯಾರಿಸಲಾಗಿತ್ತೇ ಎಂಬುದನ್ನು ನಿರ್ಣಯಿಸಲು 2015–16ರಿಂದ 2020–21ರ ಅವಧಿಗೆ 'ಕರ್ನಾಟಕದಲ್ಲಿ ನಗರ ಪ್ರದೇಶದ ಬಡವರಿಗೆ ವಸತಿ ಯೋಜನೆಗಳ ಅನುಷ್ಠಾನ' ಕುರಿತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು. ಯೋಜನೆಯ ನಾಲ್ಕು ಘಟಕಗಳಲ್ಲಿ, ಕರ್ನಾಟಕ ಸರ್ಕಾರದ ವಸತಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಕೈಗೆಟುಕುವ ಬೆಲೆಯಲ್ಲಿ ವಸತಿ (ಎಹೆಚ್‌ಪಿ) ಮತ್ತು ಫಲಾನುಭವಿ ನೇತೃತ್ವದ ವೈಯಕ್ತಿಕ ವಸತಿ ನಿರ್ಮಾಣ (ಬಿಎಲ್‌ಸಿ) ಘಟಕಗಳನ್ನು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಾಗಿ ಆಯ್ಕೆ ಮಾಡಲಾಯಿತು. ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತವು (ಆರ್‌ಜಿಹೆಚ್‌ಸಿಎಲ್) ರಾಜ್ಯದಲ್ಲಿ ಪಿಎಮ್‌ಎವೈ(ಯು)ಗೆ ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯಾಗಿ (ಎಸ್‌ಎಲ್‌ಎನ್‌ಎ) ಕಾರ್ಯನಿರ್ವಹಿಸುತ್ತಿತ್ತು ಮತ್ತು ಯೋಜನೆಯಡಿಯಲ್ಲಿನ ಯೋಜನೆಗಳನ್ನು ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ (ಕೆಎಸ್‌ಡಿಬಿ) ಮತ್ತು ನಗರ ಸ್ಥಳೀಯ ಸಂಸ್ಥೆಗಳ (ಯುಎಲ್‌ಬಿ) ಮೂಲಕ ಜಾರಿಗೊಳಿಸಲಾಯಿತು.

ಮಾರ್ಚ್ 2021ರಲ್ಲಿದ್ದಂತೆ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ, ಬೇಡಿಕೆ ಸಮೀಕ್ಷೆಯ ಮೂಲಕ ಗುರುತಿಸಲಾದ 13,71,592 ನಿರೀಕ್ಷಿತ ಫಲಾನುಭವಿಗಳಲ್ಲಿ 5,17,531 ಫಲಾನುಭವಿಗಳಿಗೆ ಮಾತ್ರ (ಶೇಕಡಾ 38) ಯೋಜನೆಗಳನ್ನು ತೆಗೆದುಕೊಳ್ಳಲಾಗಿತ್ತು. ಅನುಮೋದಿತ 5,17,531 ವಸತಿ ಘಟಕಗಳಿಗೆ ಪ್ರತಿಯಾಗಿ ಮಾರ್ಚ್ 2021ರಲ್ಲಿದ್ದಂತೆ ಕೇವಲ 88,395 ವಸತಿ ಘಟಕಗಳು (ಶೇಕಡಾ 17) ಪೂರ್ಣಗೊಂಡಿದ್ದವು. 3,28,499 ವಸತಿ ಘಟಕಗಳ (ಶೇಕಡಾ 63) ನಿರ್ಮಾಣವು ಇನ್ನೂ ಪ್ರಾರಂಭವಾಗಬೇಕಿದ್ದು (ಮಾರ್ಚ್ 2021). ಇದು 2022ರ ವೇಳೆಗೆ 'ಎಲ್ಲರಿಗೂ ವಸತಿ' ಎನ್ನುವ ಯೋಜನೆಯ ಗುರಿಯನ್ನು ಸಾಧಿಸುವುದು ಕಷ್ಟವೆಂಬುದನ್ನು ಸೂಚಿಸುತ್ತಿತ್ತು. ಯೋಜನೆಯ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳ ಅನುಷ್ಠಾನದಲ್ಲಿನ ವಿವಿಧ ನ್ಯೂನತೆಗಳನ್ನು ಕೆಳಗಿನ ಕಂಡಿಕೆಗಳಲ್ಲಿ ಹೊರತರಲಾಗಿದೆ.

- ಕೆಎಹೆಚ್‌ಪಿ, 2016ರಲ್ಲಿ ಪ್ರಕ್ಷೇಪಿಸಲಾಗಿದ್ದ ಕೈಗೆಟುಕುವ ಬೆಲೆಯಲ್ಲಿ ವಸತಿ ಅಗತ್ಯವಿರುವ 20.35 ಲಕ್ಷ ಜನರಿಗೆ ಸಮೀಕ್ಷೆಯಲ್ಲಿ ಕೇವಲ 13.72 ಲಕ್ಷ ನಿರೀಕ್ಷಿತ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ನಗರ ಪ್ರದೇಶದ ಬಡವರಿಗೆ ವಸತಿ ಅಗತ್ಯತೆಯನ್ನು ನಿರ್ಣಯಿಸುವ ಬೇಡಿಕೆ ಸಮೀಕ್ಷೆಯು ಪರಿಣಾಮಕಾರಿಯಾಗಿರಲಿಲ್ಲ ಮತ್ತು ಅರ್ಹ ಫಲಾನುಭವಿಗಳನ್ನು ಹೊರಗಿಡುವ ಅಪಾಯವನ್ನು ಹೊಂದಿತ್ತು. ನಿಗದಿತ ಕೊನೆಯ ದಿನಾಂಕದೊಳಗೆ ಬೇಡಿಕೆ ಸಮೀಕ್ಷೆಯನ್ನು ಪೂರ್ಣಗೊಳಿಸಿರಲಿಲ್ಲ ಮತ್ತು ನಂತರ ಸುಮಾರು ಶೇಕಡಾ 49ರಷ್ಟು ಫಲಾನುಭವಿಗಳನ್ನು ಸಮೀಕ್ಷೆ ಪಟ್ಟಿಗೆ ಸೇರಿಸಲಾಗಿದ್ದು, ಇದು ಕಾರ್ಯತಂತ್ರ ಯೋಜನೆ, ವಾರ್ಷಿಕ ಗುರಿಗಳನ್ನು ನಿಗದಿಪಡಿಸುವುದು ಮತ್ತು ಸಂಪನ್ಮೂಲಗಳ ಹಂಚಿಕೆಯ ಮೇಲೆ ಪರಿಣಾಮ ಬೀರಿತ್ತು.

**(ಅಧ್ಯಾಯ–2: ಕಂಡಿಕೆ–2.1.1)**

- ಅನುಮೋದಿತ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಿಗೆ 5.17 ಲಕ್ಷ ಫಲಾನುಭವಿಗಳಲ್ಲಿ ಕೇವಲ 3.43 ಲಕ್ಷ ಮಂದಿಯನ್ನು ಮಾತ್ರ ವಿಶಿಷ್ಟ ಗುರುತಿನ ಸಂಖ್ಯೆಗಳನ್ನು ಬಳಸಿಕೊಂಡು ದೃಢೀಕರಿಸಿದ ನಂತರ ಲಗತ್ತಿಸಲಾಗಿತ್ತು. ಇದು ಫಲಾನುಭವಿಗಳು ಒಂದೇ/ವಿಭಿನ್ನ ಘಟಕಗಳಡಿಯಲ್ಲಿ ಬಹು ಪ್ರಯೋಜನಗಳನ್ನು ಪಡೆಯುವಲ್ಲಿ ಪರಿಣಮಿಸಿತು.

**(ಅಧ್ಯಾಯ–2: ಕಂಡಿಕೆ– 2.2)**

- ಅನುಮೋದಿತ ಸವಿವರ ಯೋಜನಾ ವರದಿಗಳ (ಡಿಪಿಆರ್) ಭಾಗವಾಗಿರುವ ಫಲಾನುಭವಿಗಳಲ್ಲಿ ಕೇವಲ ಶೇಕಡಾ 12ರಷ್ಟು ಫಲಾನುಭವಿಗಳಿಗೆ ಮಾತ್ರ ವಾಸ್ತವಿಕ ಪ್ರಯೋಜನಗಳನ್ನು ವಿಸ್ತರಿಸಲಾಗಿತ್ತು ಮತ್ತು ಶೇಕಡಾ 44ರಷ್ಟು ಫಲಾನುಭವಿಗಳು ನಿರೀಕ್ಷಿತ ಫಲಾನುಭವಿಗಳ ಪಟ್ಟಿಯ ಭಾಗವೂ ಸಹ ಆಗಿರಲಿಲ್ಲ ಎಂಬುದನ್ನು ಪರೀಕ್ಷಾ–ತನಿಖೆ ನಡೆಸಿದ ಎಹೆಚ್‌ಪಿ ಯೋಜನೆಗಳ ವಿಶ್ಲೇಷಣೆಯು ತಿಳಿಯಪಡಿಸಿತು. ಇದು ₹ಮೂರು ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿರುವವರು ಮತ್ತು ಈಗಾಗಲೇ ಪಕ್ಕಾ ಮನೆಗಳನ್ನು ಹೊಂದಿರುವಂತಹ ಅನರ್ಹ ಫಲಾನುಭವಿಗಳಿಗೆ ಯೋಜನೆಯ ಪ್ರಯೋಜನಗಳನ್ನು ವಿಸ್ತರಿಸುವಲ್ಲಿ ಪರಿಣಮಿಸಿತು. ಯೋಜನೆಯಡಿ ನಿರ್ಮಿಸಲಾದ ಮನೆಗಳ ಜಂಟಿ ಪರಿಶೀಲನೆಯು ಭೇಟಿ ನೀಡಿದ ಮನೆಗಳಲ್ಲಿ ಶೇಕಡಾ 41ರಷ್ಟು ಮನೆಗಳು 30 ಚದರ ಮೀಟರ್‌ಗಿಂತ ಹೆಚ್ಚು ಕಾರ್ಪೆಟ್ ವಿಸ್ತೀರ್ಣವನ್ನು ಹೊಂದಿರುವ ದುಬಾರಿ ಬಹುಮಹಡಿ ಕಟ್ಟಡಗಳಾಗಿದ್ದವು ಮತ್ತು ಯೋಜನೆಯಡಿ ನಿಗದಿಪಡಿಸಿದ ₹5 ಲಕ್ಷದ ಘಟಕ ವೆಚ್ಚದೊಳಗೆ ಬರುವುದಿಲ್ಲ.

**(ಅಧ್ಯಾಯ–2: ಕಂಡಿಕೆ– 2.3)**

- ಯೋಜನೆಯ ಅನುಷ್ಠಾನಕ್ಕಾಗಿ ಕಾರ್ಯತಂತ್ರದ ಯೋಜನೆ ದಾಖಲೆಯಾಗಿರುವ 'ಎಲ್ಲರಿಗೂ ವಸತಿ ಕಾರ್ಯಯೋಜನೆಯನ್ನು (ಹೆಚ್‌ಎಫ್‌ಎಪಿಒಎ) ಯೋಜನೆಯ ಪ್ರಾರಂಭಿಸಿದ 5 ವರ್ಷಗಳ ನಂತರ 2020ರಲ್ಲಿ ಅಂತಿಮಗೊಳಿಸಲಾಯಿತು. ಯೋಜನೆಯ ಅಂತ್ಯದಲ್ಲಿ ಕಾರ್ಯತಂತ್ರದ ಯೋಜನೆಯನ್ನು ಅಂತಿಮಗೊಳಿಸುವಿಕೆಯು ಕೇವಲ ದಾಖಲಾತಿಯ ಉದ್ದೇಶವನ್ನು ಪೂರೈಸಿತು ಮತ್ತು ಯೋಜನೆಯ ಸಮರ್ಪಕವಾಗಿ ಕಾರ್ಯಗತಗೊಳಿಸಲು ಸಹಾಯ ಮಾಡಲಿಲ್ಲ.

**(ಅಧ್ಯಾಯ–2: ಕಂಡಿಕೆ– 2.4)**

- ಖಾಸಗಿ ಸಹಭಾಗಿತ್ವದ ಮೂಲಕ ಕೈಗೆಟುಕುವ ದರದ ವಸತಿ ಕ್ಷೇತ್ರದ ಬೆಳವಣಿಗೆಗೆ ಅನುಕೂಲವಾಗುವಂತೆ ಆಡಳಿತಾತ್ಮಕ ಮತ್ತು ನಿಯಂತ್ರಕ ಅಡಚಣೆಗಳನ್ನು ನಿವಾರಿಸಲು ಯೋಜನೆ ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಆರು ಕಡ್ಡಾಯ ಸುಧಾರಣೆಗಳಲ್ಲಿ ನಾಲ್ಕನ್ನು ರಾಜ್ಯ ಸರ್ಕಾರವು ಇನ್ನೂ ಪೂರ್ಣಗೊಳಿಸಿಲ್ಲ. ಇದು ಯೋಜನೆಯಡಿಯಲ್ಲಿ ಕಲ್ಪಿಸಲಾದ ಖಾಸಗಿ ಸಹಭಾಗಿತ್ವದೊಂದಿಗಿನ ಐಎಸ್‌ಎಸ್‌ಆರ್ ಮತ್ತು ಎಹೆಚ್‌ಪಿ ಘಟಕಗಳನ್ನು ಕಾರ್ಯಗತ ಗೊಳಿಸದಿರುವಲ್ಲಿ ಪರಿಣಮಿಸಿತು.

**(ಅಧ್ಯಾಯ–2: ಕಂಡಿಕೆ–2.5)**

- ₹8360.78 ಕೋಟಿ ಮೊತ್ತದ ಫಲಾನುಭವಿ ವಂತಿಗೆ ಹಾಗೂ ಯುಎಲ್‌ಬಿ ಪಾಲಿನ ಕಡಿಮೆ ಸಂಗ್ರಹಣೆಯಿಂದಾಗಿ ಮತ್ತು ರಾಜ್ಯ ಸರ್ಕಾರವು ನಿಗದಿತ ಷರತ್ತುಗಳನ್ನು ಪೂರೈಸದ ಕಾರಣ ಭಾರತ ಸರ್ಕಾರವು ₹1003.55 ಕೋಟಿ ಮೊತ್ತವನ್ನು ತಡೆಹಿಡಿದಿದ್ದರಿಂದ ಎಹೆಚ್‌ಪಿ ಘಟಕದಡಿಯಲ್ಲಿ ಆರ್ಥಿಕ ಸಂಪನ್ಮೂಲಗಳ ಕೊರತೆಯಲ್ಲಿ ಪರಿಣಮಿಸಿತು. ಇದು ಎಎಚ್‌ಪಿ ಯೋಜನೆಗಳ ರದ್ದತಿಗೆ ಕಾರಣವಾಯಿತು ಮತ್ತು ಯೋಜನೆಯ ಅಡಿಯಲ್ಲಿ ನಿರ್ಮಿಸಲಾದ ಮನೆಗಳಿಗೆ ನಾಗರಿಕ ಮೂಲಸೌಕರ್ಯಗಳನ್ನು ಒದಗಿಸದಿರುವುದರಲ್ಲಿ ಪರಿಣಮಿಸಿತು.

**(ಅಧ್ಯಾಯ–3: ಕಂಡಿಕೆ–3.2)**

- ಎಹೆಚ್‌ಪಿ ಘಟಕದಡಿಯಲ್ಲಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ (ಕೆಎಸ್‌ಡಿಬಿ) ಕೈಗೆತ್ತಿಕೊಂಡ ಮನೆಗಳಲ್ಲಿ ಕೇವಲ ಶೇಕಡಾ 14ರಷ್ಟು ಮನೆಗಳನ್ನು ಗುಂಪು ಮನೆಗಳಾಗಿ ನಿರ್ಮಿಸಿ ಉಳಿದ ಮನೆಗಳನ್ನು ಚದುರಿದ ರೀತಿಯಲ್ಲಿ ಪ್ರತ್ಯೇಕವಾಗಿ ತೆಗೆದುಕೊಂಡಿದ್ದರಿಂದ ಎಹೆಚ್‌ಪಿ ಘಟಕದಡಿಯಲ್ಲಿ ಮೂಲಸೌಕರ್ಯ ಸೌಲಭ್ಯಗಳೊಂದಿಗೆ ಗುಂಪು ವಸತಿ ಒದಗಿಸುವ ಯೋಜನೆಯ ಉದ್ದೇಶವು ಈಡೇರಲಿಲ್ಲ. ಯೋಜನೆಯ ಮಾರ್ಗಸೂಚಿಗಳಡಿಯಲ್ಲಿ ಸೂಚಿಸಲಾದ ನೀರು ಸರಬರಾಜು, ಒಳಚರಂಡಿ, ರಸ್ತೆಗಳು, ವಿದ್ಯುತ್ ಮುಂತಾದ ನಾಗರಿಕ ಮೂಲಸೌಕರ್ಯಗಳನ್ನು ಒದಗಿಸದೆ ಈ ಯೋಜನೆಗಳನ್ನು ಕೈಗೊಳ್ಳಲಾಗಿತ್ತು.

**(ಅಧ್ಯಾಯ–3: ಕಂಡಿಕೆ–3.3)**

- ಯೋಜನೆಗಳಿಗೆ ಫಲಾನುಭವಿಗಳ ಲಗತ್ತಿಸುವಿಕೆಯಲ್ಲಿನ ಕೊರತೆಯಿಂದಾಗಿ ಭಾರತ ಸರ್ಕಾರವು ಬಿಎಲ್‌ಸಿ ಯೋಜನೆಯಡಿಯಲ್ಲಿ ₹569.56 ಕೋಟಿಯ ಮೊದಲ ಕಂತಿನ ಬಿಡುಗಡೆಯನ್ನು ತಡೆಹಿಡಿದಿದೆ.

**(ಅಧ್ಯಾಯ–4: ಕಂಡಿಕೆ–4.2)**

- ಫಲಾನುಭವಿಗಳು ಮನೆಗಳ ನಿರ್ಮಾಣದಲ್ಲಿ ನಿಗದಿತ ಹಂತದ ಪ್ರಗತಿಯನ್ನು ಸಾಧಿಸಿದ್ದರೂ ಸಹ ಬಿಎಲ್‌ಸಿ ಘಟಕದಡಿಯಲ್ಲಿ ಪಾವತಿಗಳನ್ನು ಬಿಡುಗಡೆ ಮಾಡುವಲ್ಲಿ ಅಸಾಮಾನ್ಯ ವಿಳಂಬವಾಗಿದ್ದಿತು. ಇದು ಕಾಮಗಾರಿ ಸ್ಥಗಿತಗೊಳ್ಳುವಲ್ಲಿ ಪರಿಣಮಿಸಿ ಯೋಜನೆ ಪ್ರಗತಿಗೆ ಅಡ್ಡಿಯಾಯಿತು.

**(ಅಧ್ಯಾಯ–4: ಕಂಡಿಕೆ–4.3)**

- 62,648 ಬಿಎಲ್‌ಸಿ ಫಲಾನುಭವಿಗಳಲ್ಲಿ 12,757 ಫಲಾನುಭವಿಗಳಿಗೆ ಪಾವತಿ ಮಾಡಿದ ₹172.64 ಕೋಟಿ ಮೊತ್ತದ ನೇರ ಪ್ರಯೋಜನೆ ವರ್ಗಾವಣೆ (ಡಿಬಿಟಿ) ಪಾವತಿಗಳ ಪ್ರಾಥಮಿಕ ನಿಯಂತ್ರಣವಾಗಿದ್ದ ವಿಶಿಷ್ಟ ಗುರುತಿನ (ಆಧಾರ್) ಮೂಲಕ ದೃಢೀಕರಣವನ್ನು ಮಾಡಿರಲಿಲ್ಲ. ಮೇಲಿನ ಪ್ರಮುಖ ಆಂತರಿಕ ನಿಯಂತ್ರಣವನ್ನು ಉಪೇಕ್ಷೆ ಮಾಡಿದ ಕಾರಣದಿಂದ 111 ಪ್ರಕರಣಗಳಲ್ಲಿ ₹1.30 ಕೋಟಿಯ ದ್ವಿಪಾವತಿಗಳನ್ನು ಲೆಕ್ಕಪರಿಶೋಧನಾ ವಿಶ್ಲೇಷಣೆಯು ತಿಳಿಯಪಡಿಸಿತು.

**(ಅಧ್ಯಾಯ–4: ಕಂಡಿಕೆ–4.5)**

- ಎಸ್‌ಎಲ್‌ಎನ್‌ಎ ಮೂಲಕ ಸಾಲ ಆಧಾರಿತ ಸಹಾಯಧನ ಯೋಜನೆ (ಸಿಎಲ್‌ಎಸ್‌ಎಸ್) ಅಡಿಯಲ್ಲಿ ಮಾಡಿದ ಪಾವತಿಗಳ ಕಡ್ಡಾಯ ಮೇಲ್ವಿಚಾರಣೆಯಲ್ಲಿನ ಲೋಪಗಳು ಸಿಎಲ್‌ಎಸ್‌ಎಸ್ ಅಡಿಯಲ್ಲಿ ನೆರವನ್ನು ಪಡೆದ 471 ಫಲಾನುಭವಿಗಳು ಬಿಎಲ್‌ಸಿ ಮತ್ತು ಎಹೆಚ್‌ಪಿ ಘಟಕಗಳಡಿಯಲ್ಲಿಯೂ ಸಹ ಮತ್ತೆ ಪ್ರಯೋಜನಗಳನ್ನು ಪಡೆಯುವಲ್ಲಿ ಪರಿಣಮಿಸಿತು.

**(ಅಧ್ಯಾಯ–5: ಕಂಡಿಕೆ–5.2)**

- ಬಿಎಲ್‌ಸಿ ಫಲಾನುಭವಿಗಳ ಜಿಯೋ ಟ್ಯಾಗಿಂಗ್ ಮೂಲಕದ ಮನೆ ನಿರ್ಮಾಣದ ಮೇಲ್ವಿಚಾರಣೆಯನ್ನು, ನಿಗದಿಪಡಸಿದ್ದ ಭುವನ್ ಅಪ್ಲಿಕೇಶನ್ ಬದಲಿಗೆ, ಇಂದಿರಾ ಮನೆ ಅಪ್ಲಿಕೇಶನ್ ಮೂಲಕ ನಡೆಸಲಾಯಿತು. ಇದು ಪ್ರಕ್ರಿಯೆಯನ್ನು ₹0.79 ಕೋಟಿ ಹೆಚ್ಚುವರಿ ವೆಚ್ಚದಲ್ಲಿ ನಕಲು ಮಾಡುವಲ್ಲಿ ಅಗತ್ಯತೆಯಲ್ಲಿ ಪರಿಣಮಿಸಿತು. ಕೆಎಸ್‌ಡಿಬಿಯಿಂದ ಕೈಗೆತ್ತಿಕೊಂಡ ಎಹೆಚ್‌ಪಿ ಯೋಜನೆಗಳ ಜಿಯೋ–ಟ್ಯಾಗಿಂಗ್ ನಿಗದಿತ ತಾಂತ್ರಿಕ ವಿಶಿಷ್ಟತೆಗಳನ್ನು ಪೂರೈಸಲು ವಿಫಲವಾಯಿತು ಮತ್ತು ತತ್ಪರಿಣಾಮವಾಗಿ ಎಹೆಚ್‌ಪಿ ಘಟಕದಡಿಯಲ್ಲಿ ತೆಗೆದುಕೊಳ್ಳಲಾದ ಮನೆಗಳಿಗೆ ಜಿಯೋ–ಟ್ಯಾಗಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಲಿಲ್ಲ.

**(ಅಧ್ಯಾಯ–5: ಕಂಡಿಕೆ–5.3)**

# ಅಧ್ಯಾಯ-I

## ಪರಿಚಯ

ಜೂನ್ 2015 ರಲ್ಲಿ ಪ್ರಾರಂಭಿಸಿದ ಪ್ರಧಾನ ಮಂತ್ರಿ ಆವಾಸ್ ಯೋಜನೆಯು–ಎಲ್ಲರಿಗೂ ವಸತಿ (ನಗರ) [ಪಿಎಮ್ಎವೈ (ಯು)] ಏಳು ವರ್ಷಗಳ ಅವಧಿಯಲ್ಲಿ ನಗರ ಪ್ರದೇಶದ ಎಲ್ಲಾ ಬಡವರಿಗೆ ವಸತಿ ಒದಗಿಸುವುದನ್ನು ಆಲೋಚಿಸಿತ್ತು. ಕರ್ನಾಟಕ ಸರ್ಕಾರವು ಪ್ರಧಾನ ಮಂತ್ರಿ ಆವಾಸ್ ಯೋಜನೆಯೊಂದಿಗೆ ಹೊಂದಾಣಿಕೆಯಾಗುವ ಕರ್ನಾಟಕ ಕೈಗೆಟಕುವ ವಸತಿ ನೀತಿ (ಕರ್ನಾಟಕ ಅಫೋರ್ಡಬಲ್ ಹೌಸಿಂಗ್ ಪಾಲಿಸಿ), 2016ನ್ನು ಅಧಿಸೂಚಿಸಿತು (ಮೇ 2016) ಮತ್ತು ಅಸ್ತಿತ್ವದಲ್ಲಿರುವ ರಾಜ್ಯ ವಲಯ ವಸತಿ ಯೋಜನೆಗಳನ್ನು[1] ಈ ಯೋಜನೆಯಲ್ಲಿ ಸೇರಿಸಿತು. ಯೋಜನೆಯು ಕೆಳಗಿನ ನಾಲ್ಕು ಘಟಕಗಳನ್ನು ಒಳಗೊಂಡಿತ್ತು:

- ಕೊಳೆಗೇರಿಗಳನ್ನು ಅವುಗಳ ಮೂಲ ಸ್ಥಾನದಲ್ಲಿ ಪುನರ್ ಅಭಿವೃದ್ಧಿಪಡಿಸುವುದು (ಐಎಸ್ಎಸ್ಆರ್)– ಭೂಮಿಯನ್ನು ಸಂಪನ್ಮೂಲವಾಗಿ ಬಳಸಿಕೊಂಡು ಖಾಸಗಿ ಅಭಿವೃದ್ಧಿದಾರರ ಸಹಭಾಗಿತ್ವದಲ್ಲಿ ಕೊಳೆಗೇರಿ ನಿವಾಸಿಗಳ ಪುನರ್ವಸತಿ
- ಸಾಲ ಆಧಾರಿತ ಸಹಾಯಧನ ಯೋಜನೆ (ಸಿಎಲ್ಎಸ್ಎಸ್)–ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್)/ಕಡಿಮೆ ಆದಾಯವಿರುವ/ಮಧ್ಯಮ ಆದಾಯವಿರುವವರಿಗೆ ಸಾಲ ಆಧಾರಿತ ಸಹಾಯಧನ ಯೋಜನೆಯಲ್ಲಿ ವಸತಿಯನ್ನು ಒದಗಿಸುವುದು.
- ಪಾಲುದಾರಿಕೆಯಲ್ಲಿ ಕೈಗೆಟಕುವ ಬೆಲೆಯಲ್ಲಿ ವಸತಿ (ಎಹೆಚ್‌ಪಿ) – ಸಾರ್ವಜನಿಕ ಅಥವಾ ಖಾಸಗಿ ವಲಯದ ಸಹಭಾಗಿತ್ವದ ಮೂಲಕ ಪ್ರತಿಯೊಂದು ಆರ್ಥಿಕವಾಗಿ ಹಿಂದುಳಿದ ವರ್ಗದ ಮನೆಗೆ ₹1.50 ಲಕ್ಷ ಕೇಂದ್ರದ ಅನುದಾನದೊಂದಿಗೆ ಪೂರಕ ನೆರವು.
- ಫಲಾನುಭವಿ ನೇತೃತ್ವದ ವೈಯಕ್ತಿಕ ವಸತಿ ನಿರ್ಮಾಣ (ಬಿಎಲ್‌ಸಿ)– ಹೊಸ ಮನೆ ಅಥವಾ ಅಭಿವೃದ್ಧಿಗಾಗಿ ಪ್ರತಿ ಇಡಬ್ಲ್ಯುಎಸ್ ಮನೆಗೆ ₹1.50 ಲಕ್ಷ ಕೇಂದ್ರದ ನೆರವು.

ಕರ್ನಾಟಕ ಸರ್ಕಾರದ ವಸತಿ ಇಲಾಖೆಯು ಅನುಷ್ಠಾನಗೊಳಿಸಿದ ಯೋಜನೆಗಳಾದ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

### 1.1 ಆಡಳಿತ ಮತ್ತು ಅನುಷ್ಠಾನ ರಚನೆ

ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ (ಎಮ್‌ಒಹೆಚ್‌ಯುಎ[2]) ಕಾರ್ಯದರ್ಶಿಯವರ ನೇತೃತ್ವದ ಕೇಂದ್ರ ಮಂಜೂರಾತಿ ಮತ್ತು ಮೇಲ್ವಿಚಾರಣಾ ಸಮಿತಿಯು (ಸಿಎಸ್ಎಮ್‌ಸಿ) ಭಾರತ ಸರ್ಕಾರದ ಮಟ್ಟದಲ್ಲಿ ಯೋಜನೆಯ ಉನ್ನತಾಧಿಕಾರ ಸಂಸ್ಥೆಯಾಗಿದೆ. ಕರ್ನಾಟಕ ಸರ್ಕಾರವು ಮುಖ್ಯ ಕಾರ್ಯದರ್ಶಿಗಳು ಮತ್ತು ಕರ್ನಾಟಕ ಸರ್ಕಾರದ ವಸತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಅನುಕ್ರಮವಾಗಿ ರಾಜ್ಯ ಮಟ್ಟದ ಮಂಜೂರಾತಿ ಮತ್ತು ಮೇಲ್ವಿಚಾರಣಾ ಸಮಿತಿ (ಎಸ್ಎಲ್ಎಸ್ಎಮ್‌ಸಿ) ಹಾಗೂ ರಾಜ್ಯ ಮಟ್ಟದ ಮೌಲ್ಯಮಾಪನ ಸಮಿತಿಗಳನ್ನು (ಎಸ್ಎಲ್ಎಸಿ) ರಚಿಸಿತು (ಜನವರಿ 2016) ಮತ್ತು ಯೋಜನೆಯಡಿಯ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳ ಅನುಷ್ಠಾನಕ್ಕಾಗಿ ರಾಜೀವ್‌ಗಾಂಧಿ

[1] ಡಾ.ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ, ದೇವರಾಜ್ ಅರಸ್ ವಸತಿ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆ

[2] ನಗರಾಭಿವೃದ್ಧಿ ಸಚಿವಾಲಯ ಮತ್ತು ವಸತಿ ಮತ್ತು ನಗರ ಬಡತನ ನಿರ್ಮೂಲನಾ ಮಂತ್ರಾಲಯದೊಂದಿಗೆ 6–7–2017ರಂದು ಮಿಲನಗೊಂಡು ಸ್ಥಾಪಿತವಾದ ಮಂತ್ರಾಲಯ

ವಸತಿ ನಿಗಮ ನಿಯಮಿತವನ್ನು (ಆರ್‌ಜಿಹೆಚ್‌ಸಿಎಲ್) ರಾಜ್ಯಮಟ್ಟದ ನೋಡಲ್ ಏಜೆನ್ಸಿಯನ್ನಾಗಿ ನೇಮಿಸಿತು.

ಯೋಜನೆಯ ಅನುಷ್ಠಾನದಲ್ಲಿ ಭಾಗಿಗಳಾಗಿರುವ ವಿವಿಧ ಸಂಸ್ಥೆಗಳ ಪಾತ್ರಗಳನ್ನು **ನಕ್ಷೆ–1.1**ರಲ್ಲಿ ನೀಡಲಾಗಿದೆ:

**ನಕ್ಷೆ–1.1: ಪಿಎಮ್‌ಎವೈ (ಯು) ಯೋಜನೆಯ ಅನುಷ್ಠಾನ ರಚನೆ**




ಎಸ್‌ಎಲ್‌ಟಿಸಿ – ರಾಜ್ಯ ಮಟ್ಟದ ತಾಂತ್ರಿಕ ಸಮಿತಿ
ಹೆಚ್‌ಎಫ್‌ಎಪಿಓಎ – ಎಲ್ಲರಿಗೂ ವಸತಿ ಕಾರ್ಯ ಯೋಜನೆ
ಎಐಪಿ – ವಾರ್ಷಿಕ ಅನುಷ್ಠಾನ ಯೋಜನೆ
ಡಿಪಿಆರ್ – ಸವಿವರ ಯೋಜನಾ ವರದಿ
ಸಿಎಲ್‌ಟಿಸಿ – ನಗರ ಮಟ್ಟದ ತಾಂತ್ರಿಕ ಸಮಿತಿ
ಕೆಎಸ್‌ಡಿಬಿ – ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ
ಯುಎಲ್‌ಬಿ – ನಗರ ಸ್ಥಳೀಯ ಸಂಸ್ಥೆ

## 1.2 ಲೆಕ್ಕಪರಿಶೋಧನಾ ಉದ್ದೇಶಗಳು

ಈ ಕೆಳಗಿನವು ಕಾರ್ಯನಿರ್ವಹಣ ಲೆಕ್ಕಪರಿಶೋಧನೆಗಳ ಉದ್ದೇಶಗಳಾಗಿದ್ದವು:

- ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಉದ್ದೇಶಿತ ಫಲಾನುಭವಿಗಳನ್ನು ಗುರುತಿಸುವ ವ್ಯವಸ್ಥೆಯು ಸಾಕಷ್ಟಿದ್ದಿತೇ, ಪರಿಣಾಮಕಾರಿಯಾಗಿದ್ದಿತೇ ಮತ್ತು ಎಲ್ಲಾ ಅರ್ಹ ಫಲಾನುಭವಿಗಳ ಸೇರ್ಪಡೆ ಮತ್ತು ಅನರ್ಹ ಫಲಾನುಭವಿಗಳ ಹೊರಗಿಡುವಿಕೆಯನ್ನು ಖಚಿತಪಡಿಸಿತ್ತೇ;

- 2022ರ ವೇಳೆಗೆ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಯೋಜನೆಗಳನ್ನು ಎಲ್ಲಾ ನಗರ ಬಡವರಿಗೆ ವಸತಿ ಒದಗಿಸಲು ಸಮಗ್ರವಾಗಿ ಯೋಜಿಸಲಾಗಿತ್ತೇ ಮತ್ತು ಕಾರ್ಯಗತಗೊಳಿಸಲಾಗಿತ್ತೇ;
- ಅಂತರ್ಗತ ಮೇಲ್ವಿಚಾರಣಾ ಮತ್ತು ಮೌಲ್ಯಮಾಪನ ಕಾರ್ಯವಿಧಾನವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿತ್ತೇ.

## 1.3 ಲೆಕ್ಕಪರಿಶೋಧನಾ ಮಾನದಂಡಗಳು

ಈ ಕೆಳಗಿನವುಗಳು ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ಮಾನದಂಡಗಳಾಗಿದ್ದವು:

- ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) ಮಾರ್ಗಸೂಚಿಗಳು;
- ಕರ್ನಾಟಕ ಕೈಗೆಟಕುವ ವಸತಿ ನೀತಿ, 2016, ಕರ್ನಾಟಕ ಕೊಳೆಗೇರಿ ಪ್ರದೇಶಗಳ ಅಭಿವೃದ್ಧಿ ನೀತಿ, 2016 ಮತ್ತು ರಾಜ್ಯ ವಲಯ ನಗರ ವಸತಿ ಯೋಜನೆಗಳ ಮಾರ್ಗಸೂಚಿಗಳು;
- ಪಿಎಮ್‌ಎವೈ ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಮ್‌ಐಎಸ್) ಬಳಕೆದಾರರ ಕೈಪಿಡಿ, 2016.

## 1.4 ಲೆಕ್ಕಪರಿಶೋಧನಾ ವ್ಯಾಪ್ತಿ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಅಕ್ಟೋಬರ್ 2020ರಿಂದ ಜುಲೈ 2021ರವರೆಗೆ ನಡೆಸಲಾಯಿತು ಮತ್ತು ಇದು 2015–2021ರ ಅವಧಿಯಲ್ಲಿ ಕರ್ನಾಟಕದಲ್ಲಿ ಪಿಎಮ್‌ಎವೈ ಯೋಜನೆಯ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳ ಅನುಷ್ಠಾನವನ್ನು ಒಳಗೊಂಡಿದೆ. ಇದು ಸಚಿವಾಲಯ, ಆರ್‌ಜಿಹೆಚ್‌ಸಿಎಲ್, ಕೆಎಸ್‌ಡಿಬಿ, ಜಿಲ್ಲಾ ನಗರಾಭಿವೃದ್ಧಿ ಕೋಶ ಮತ್ತು 36 ನಗರ ಸ್ಥಳೀಯ ಸಂಸ್ಥೆಗಳಲ್ಲಿನ ದಾಖಲೆಗಳ ಪರಿಶೀಲನೆಯನ್ನು ಒಳಗೊಂಡಿತ್ತು ಮತ್ತು ಅವುಗಳನ್ನು ಬಹುಹಂತದ ಶ್ರೇಣೀಕೃತ ಮಾದರಿಯನ್ನು ಅಳವಡಿಸಿಕೊಳ್ಳುವ ಮೂಲಕ ಆಯ್ಕೆಮಾಡಲಾಗಿತ್ತು. ಇದಲ್ಲದೆ, ಫಲಾನುಭವಿಗಳ ಸಮೀಕ್ಷೆಯನ್ನು ನಡೆಸಲು 803 ಫಲಾನುಭವಿಗಳನ್ನು (ಎಸ್‌ಸಿ/ಎಸ್‌ಟಿ/ಸಾಮಾನ್ಯರ ಅನುಪಾತದ ಪ್ರಾತಿನಿಧ್ಯದೊಂದಿಗೆ ಪ್ರತಿ ಯೋಜನೆಗೆ ಕನಿಷ್ಠ ನಾಲ್ಕು) ಯಾದೃಚ್ಛಿಕವಾಗಿ ಆಯ್ಕೆ ಮಾಡಲಾಗಿತ್ತು. ಆಯ್ದ ಜಿಲ್ಲೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ಮಾದರಿ ಯೋಜನೆಗಳ ವಿವರಗಳನ್ನು **ಅನುಬಂಧ–1.1 ರಲ್ಲಿ** ಒದಗಿಸಲಾಗಿದೆ .

## 1.5 ಲೆಕ್ಕಪರಿಶೋಧನಾ ವಿಧಾನ

9 ಅಕ್ಟೋಬರ್ 2020ರಂದು ವಸತಿ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಪ್ರವೇಶ ಸಭೆಯನ್ನು ನಡೆಸಲಾಯಿತು. ಅದರಲ್ಲಿ ಲೆಕ್ಕಪರಿಶೋಧನಾ ವಿಧಾನ, ವ್ಯಾಪ್ತಿ, ಉದ್ದೇಶಗಳು ಮತ್ತು ಮಾನದಂಡಗಳನ್ನು ವಿವರಿಸಲಾಯಿತು. ಲೆಕ್ಕಪರಿಶೋಧನಾ ವಿಧಾನವು ದಾಖಲೆಗಳ ವಿಶ್ಲೇಷಣೆ, ಲೆಕ್ಕಪರಿಶೋಧನಾ ಪ್ರಶ್ನೆಗಳಿಗೆ ಪ್ರತಿಕ್ರಿಯೆಗಳು, ಕೆಎಸ್‌ಡಿಬಿ/ನಗರ ಸ್ಥಳೀಯ ಸಂಸ್ಥೆಗಳ (ಯುಎಲ್‌ಬಿ) ಅಧಿಕಾರಿಗಳೊಂದಿಗೆ ಜಂಟಿ ಭೌತಿಕ ಪರಿಶೀಲನೆ, ಛಾಯಾಚಿತ್ರ ಸಾಕ್ಷ್ಯಗಳ ಸಂಗ್ರಹ ಮತ್ತು ಫಲಾನುಭವಿ ಸಮೀಕ್ಷೆಗಳನ್ನು ಒಳಗೊಂಡಿತ್ತು. 16 ಸೆಪ್ಟೆಂಬರ್ 2021ರಂದು ನಡೆದ ನಿರ್ಗಮನ ಸಭೆಯಲ್ಲಿ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ವಸತಿ ಇಲಾಖೆಯ ಕಾರ್ಯದರ್ಶಿಗಳೊಂದಿಗೆ ಚರ್ಚಿಸಲಾಯಿತು. ರಾಜ್ಯ ಸರ್ಕಾರದ ಪ್ರತಿಕ್ರಿಯೆಯನ್ನು 16 ಸೆಪ್ಟೆಂಬರ್ 2021ರಂದು ಸ್ವೀಕರಿಸಲಾಗಿದೆ ಮತ್ತು ಸೂಕ್ತವಾಗಿ ಅಳವಡಿಸಿಕೊಳ್ಳಲಾಗಿದೆ.

## 1.6 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಕೈಗೊಳ್ಳುವಲ್ಲಿ ಸಹಕಾರ ಮತ್ತು ನೆರವು ನೀಡಿದ ರಾಜ್ಯ ಸರ್ಕಾರ, ರಾಜೀವ್‌ಗಾಂಧಿ ವಸತಿ ನಿಗಮ ನಿಯಮಿತ, ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ನಿಗಮ ಮತ್ತು ಎಲ್ಲ ಯುಎಲ್‌ಬಿಗಳನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

## 1.7 ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು

ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು ನಾಲ್ಕು ಅಧ್ಯಾಯಗಳಲ್ಲಿ ಆಯೋಜಿಸಲಾಗಿದೆ– ಫಲಾನುಭವಿಗಳ ಆಯ್ಕೆ ಮತ್ತು ಯೋಜನೆ, ಪಾಲುದಾರಿಕೆಯಲ್ಲಿ ಕೈಗೆಟುಕುವ ವಸತಿ, ಫಲಾನುಭವಿ ನೇತೃತ್ವದ ವೈಯಕ್ತಿಕ ವಸತಿ ನಿರ್ಮಾಣ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ.

# ಅಧ್ಯಾಯ–II

# ಫಲಾನುಭವಿಗಳ ಆಯ್ಕೆ ಮತ್ತು ಯೋಜನೆ

## 2.1 ಫಲಾನುಭವಿಗಳ ಆಯ್ಕೆ

ಯೋಜನೆಯಡಿ ವಿಧಾನಸಭಾ ಕ್ಷೇತ್ರದ ಸ್ಥಳೀಯ ಶಾಸಕರ ನೇತೃತ್ವದಲ್ಲಿನ ನಗರ ಆಶ್ರಯ ಸಮಿತಿಗಳ[3] ಮೂಲಕ ಫಲಾನುಭವಿಗಳ ಆಯ್ಕೆಯನ್ನು ನಡೆಸಲಾಯಿತು. ಮನೆಯಿಲ್ಲದ ಎಲ್ಲರಿಗೂ ಮನೆಗಳನ್ನು ಖಚಿತಪಡಿಸಿಕೊಳ್ಳಲು ಯೋಜನೆಯು ವಿಫಲವಾಯಿತು ಮತ್ತು ಈ ಕೆಳಗೆ ವಿವರಿಸಿದಂತೆ ಹಲವಾರು ಅನರ್ಹ ಫಲಾನುಭವಿಗಳಿಗೆ ಯೋಜನೆಯಡಿಯಲ್ಲಿ ಪ್ರಯೋಜನವನ್ನು ಒದಗಿಸಲಾಗಿದ್ದರಿಂದ ಫಲಾನುಭವಿಗಳ ಆಯ್ಕೆಯ ಕಾರ್ಯವಿಧಾನವು ಪರಿಣಾಮಕಾರಿಯಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### 2.1.1 ಬೇಡಿಕೆ ಸಮೀಕ್ಷೆ ನಡೆಸುವುದು

ಪಿಎಮ್ಎವೈ(ಯು) ಮಾರ್ಗಸೂಚಿಗಳ ಅನ್ವಯ ಬೇಡಿಕೆ ಸಮೀಕ್ಷೆಯನ್ನು ನಡೆಸುವುದು ಯೋಜನೆಯ ಅನುಷ್ಠಾನದ ಮೊದಲ ಹಂತವಾಗಿದೆ. ಯೋಜನಾ ಮಾರ್ಗಸೂಚಿಗಳ ಕಂಡಿಕೆ–8.3ರ ಅನ್ವಯ ನಗರಗಳು ವಸತಿಗಳ ವಾಸ್ತವಿಕ ಬೇಡಿಕೆಯನ್ನು ನಿರ್ಣಯಿಸಲು ಬೇಡಿಕೆ ಸಮೀಕ್ಷೆಯನ್ನು ಕೈಗೊಳ್ಳಬೇಕು ಹಾಗೂ ಇದು ಎಲ್ಲರಿಗೂ ವಸತಿಯ ಕಾರ್ಯಯೋಜನೆಯನ್ನು ತಯಾರಿಸಲು ಆಧಾರವಾಗುತ್ತದೆ. ಯೋಜನೆಯ ವಾಸ್ತವಿಕ ಫಲಾನುಭವಿಗಳನ್ನು ಬೇಡಿಕೆ ಸಮೀಕ್ಷೆಯ ಮೂಲಕ ಸಿದ್ಧಪಡಿಸಿದ ನಿರೀಕ್ಷಿತ ಫಲಾನುಭವಿಗಳ ಪಟ್ಟಿಯಿಂದ ಪಡೆಯಲಾಗುತ್ತದೆ. ಸಮೀಕ್ಷೆಯ ನಿರ್ವಹಣೆಯಲ್ಲಿ ಕಂಡುಬರುವ ನ್ಯೂನತೆಗಳನ್ನು ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ:

#### *2.1.1.1 ನಿಗದಿತ ವಿಧಾನವನ್ನು ಅನುಸರಿಸಲಿಲ್ಲ*

ಬೇಡಿಕೆ ಸಮೀಕ್ಷೆ ನಡೆಸಲು ರಾಜ್ಯ ಸರ್ಕಾರ ವಿವರವಾದ ಸೂಚನೆಗಳನ್ನು ನೀಡಿದೆ (ಜೂನ್ 2016). ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಹಂತಗಳನ್ನು **ನಕ್ಷೆ–2.1**ರಲ್ಲಿ ನೀಡಲಾಗಿದೆ:

**ನಕ್ಷೆ–2.1: ಬೇಡಿಕೆ ಸಮೀಕ್ಷೆಗಾಗಿನ ಪ್ರಕ್ರಿಯೆ**

**ಹಂತ 1**
- ಎಸ್ಇಸಿಸಿ 2011ರಲ್ಲಿ ಒಳಗೊಂಡಿರುವ ಮನೆ ರಹಿತ/ಕಚ್ಚಾ ಮನೆಗಳ ಪಟ್ಟಿ ಮತ್ತು ಸಂಭಾವ್ಯ ಫಲಾನುಭವಿಗಳಿಂದ ಸ್ವೀಕರಿಸಿದ ಹೊಸ ಅರ್ಜಿಗಳನ್ನು, ಈ ಉದ್ದೇಶಕ್ಕಾಗಿ ನೇಮಿಸಿದ ಮತ್ತು ತರಬೇತಿ ಪಡೆದ ಗಣತಿದಾರರಿಂದ ಮನೆ ಮನೆ ಸಮೀಕ್ಷೆಯ ಮೂಲಕ ಪರಿಶೀಲಿಸಬೇಕು.
- ಮನೆ–ಮನೆ ಸಮೀಕ್ಷೆಯು 15 ದಿನಗಳಲ್ಲಿ ಪೂರ್ಣಗೊಳ್ಳಬೇಕಿತ್ತು.

**ಹಂತ 2**
- ಮನೆ–ಮನೆಗೆ ಸಮೀಕ್ಷೆಯ ಆಧಾರದ ಮೇಲೆ ಕೊಳೆಗೇರಿ ಮತ್ತು ಕೊಳೆಗೇರಿಯೇತರ ಪ್ರದೇಶಗಳಿಗೆ ಏಳು ದಿನಗಳ ನಂತರ ಕರಡು ಸಮೀಕ್ಷೆ ಪಟ್ಟಿಯನ್ನು ತಯಾರಿಸಬೇಕು.

**ಹಂತ 3**
- ಕರಡು ಸಮೀಕ್ಷೆ ಪಟ್ಟಿಯನ್ನು ತಯಾರಿಸಿದ ಏಳು ದಿನಗಳಲ್ಲಿ ಆಕ್ಷೇಪಣೆ ಕರೆ/ವಿಚಾರಣೆಯನ್ನು ನಡೆಸಬೇಕು.

**ಹಂತ 4**
- ಆಕ್ಷೇಪಣೆ/ವಿಚಾರಣೆಗೆ ಕರೆದ ಏಳು ದಿನಗಳೊಳಗೆ ಅಂತಿಮ ಫಲಾನುಭವಿ ಪಟ್ಟಿಯನ್ನು ತಯಾರಿಸಬೇಕು.

---

[3] ಬೇಡಿಕೆ ಸಮೀಕ್ಷೆಯ ಮೂಲಕ ಯುಎಲ್‌ಬಿಗಳು ಗುರುತಿಸಿದ ಫಲಾನುಭವಿಗಳ ಪಟ್ಟಿಯನ್ನು ಅಂತಿಮವಾಗಿ ಅನುಮೋದಿಸುವ ಅಧಿಕೃತ ಮತ್ತು ಅನಧಿಕೃತ ಸದಸ್ಯರನ್ನು ಒಳಗೊಂಡ ಸಮಿತಿ.

273ರಲ್ಲಿ 47 ಯುಎಲ್‌ಬಿಗಳು ಬೇಡಿಕೆ ಸಮೀಕ್ಷೆಯನ್ನು ನಡೆಸಲು ಯಾವುದೇ ವೆಚ್ಚ ಭರಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಈ ಯುಎಲ್‌ಬಿಗಳು ಸಮೀಕ್ಷೆ ನಡೆಸಲು ಒಂದು ಬಾರಿಗೆ ಬಿಡುಗಡೆಯಾದ ₹2.56 ಕೋಟಿಯ ಅನುದಾನವನ್ನು ಎಸ್‌ಎಲ್‌ಎನ್‌ಎಗೆ ಹಿಂತಿರುಗಿಸಿದ್ದವು. ಲಿಂಗಸುಗೂರು ನಗರ ಸ್ಥಳೀಯ ಸಂಸ್ಥೆಗೆ ಸಂಬಂಧಿಸಿದಂತೆ ಬಿಡುಗಡೆಯಾದ ₹5.25 ಲಕ್ಷ (ಜನವರಿ 2017) ಮೊತ್ತವನ್ನು ಖಾಸಗಿ ವ್ಯಕ್ತಿಯ ಖಾತೆಗೆ ತಪ್ಪಾಗಿ ಜಮಾ ಮಾಡಲಾಗಿತ್ತು. ಈ ಮೊತ್ತವನ್ನು ಇನ್ನೂ ವಸೂಲಿ ಮಾಡಬೇಕಾಗಿದೆ (ಸೆಪ್ಟೆಂಬರ್ 2021).

ಪರೀಕ್ಷಾ–ತನಿಖೆ ನಡೆಸಿದ 36 ಯುಎಲ್‌ಬಿಗಳು ನಿರ್ವಹಿಸಿದ ದಾಖಲೆಗಳ ಪರಿಶೀಲನೆಯಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- 2011ರ ಸಾಮಾಜಿಕ–ಆರ್ಥಿಕ ಜಾತಿ ಗಣತಿ (ಎಸ್‌ಇಸಿಸಿ) ಅನ್ವಯ ವಸತಿ ರಹಿತ ಅಥವಾ ಕಚ್ಚಾ ಮನೆಗಳಲ್ಲಿ ವಾಸಿಸುವ ಜನರ ವಿವರಗಳನ್ನು ಯುಎಲ್‌ಬಿಗಳು ಹೊಂದಿರಲಿಲ್ಲ. 11 ನಗರ ಸ್ಥಳೀಯ ಸಂಸ್ಥೆಗಳಲ್ಲಿ[4] ಗಣತಿದಾರರು ಭೇಟಿ ನೀಡಿದ ಮನೆಗಳ ಸಂಖ್ಯೆಯು ಬೇಡಿಕೆ ಸಮೀಕ್ಷೆಯಲ್ಲಿನ ವಾಸ್ತವಿಕ ಫಲಾನುಭವಿಗಳ ಸಂಖ್ಯೆಗಿಂತ ಕಡಿಮೆಯಿದ್ದಿತು. 36 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮೀಕ್ಷೆ ನಡೆಸಿದ 803 ಫಲಾನುಭವಿಗಳ ಪೈಕಿ 359 ಫಲಾನುಭವಿಗಳು (ಶೇಕಡಾ 45), ಸಮೀಕ್ಷೆಗಾಗಿ ನಗರ ಸ್ಥಳೀಯ ಸಂಸ್ಥೆ/ಕೆಎಸ್‌ಡಿಬಿಯ ಯಾವುದೇ ಅಧಿಕಾರಿಗಳು ತಮ್ಮ ಮನೆಗೆ ಭೇಟಿ ನೀಡಿಲ್ಲ ಮತ್ತು ಅವರು ತಮ್ಮ ಸ್ಥಳೀಯ ಪ್ರತಿನಿಧಿಗಳಿಂದ ಯೋಜನೆಯ ಬಗ್ಗೆ ಮಾಹಿತಿ ಪಡೆದು ನಗರ ಸ್ಥಳೀಯ ಸಂಸ್ಥೆ/ಕೆಎಸ್‌ಡಿಬಿ ಕಛೇರಿಗಳನ್ನು ನೇರವಾಗಿ ಭೇಟಿ ನೀಡುವ ಮೂಲಕ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಿದೆವು ಎಂದು ಪ್ರತಿಕ್ರಿಯಿಸಿದರು.
- ಪರೀಕ್ಷಾ–ತನಿಖೆ ನಡೆಸಿದ 36ರಲ್ಲಿ, ಮೂರು[5] ಯುಎಲ್‌ಬಿಗಳಲ್ಲಿ ಬೇಡಿಕೆ ಸಮೀಕ್ಷೆಯನ್ನು ನಡೆಸಲು ಯಾವುದೇ ವೆಚ್ಚವನ್ನು ಭರಿಸಿರಲಿಲ್ಲ. ಇಂಡಿ ಪಟ್ಟಣ ಪಂಚಾಯಿತಿಯು ತಾನು ನಡೆಸಿದ ಬೇಡಿಕೆ ಸಮೀಕ್ಷೆಗೆ ಬೆಂಬಲವಾಗಿ ಯಾವುದೇ ದಾಖಲೆಗಳನ್ನು ನೀಡಲು ವಿಫಲವಾಯಿತು.
- ಆಯ್ಕೆ ಮಾಡಿದ ಯಾವುದೇ ಯುಎಲ್‌ಬಿಗಳು ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸುವ ಮೊದಲು ಕರಡು ಸಮೀಕ್ಷೆ ಪಟ್ಟಿಗೆ ಆಕ್ಷೇಪಣೆ/ವಿಚಾರಣೆಗಾಗಿ ಕರೆ ಮಾಡಿರುವುದಕ್ಕೆ ಬೆಂಬಲವಾಗಿ ದಾಖಲೆಗಳನ್ನು ಒದಗಿಸಲಿಲ್ಲ.
- ಪರೀಕ್ಷಾ–ತನಿಖೆ ನಡೆಸಿದ ಯಾವುದೇ ಯುಎಲ್‌ಬಿಗಳು ಗಣತಿದಾರರಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಿರಲಿಲ್ಲ.

ಹೀಗೆ, ರಾಜ್ಯ ಸರ್ಕಾರವು ನಿಗದಿಪಡಿಸಿದ ವಿಧಾನವನ್ನು ಅನುಸರಿಸದೆ ಬೇಡಿಕೆ ಸಮೀಕ್ಷೆಯನ್ನು ನಡೆಸಲಾಯಿತು ಮತ್ತು ಇದು ಅರ್ಹ ಫಲಾನುಭವಿಗಳನ್ನು ಹೊರಗಿಡುವ ಅಪಾಯದಿಂದ ಕೂಡಿದ್ದಿತು. ಕೆಹೆಚ್‌ಎಪಿ, 2016ರಲ್ಲಿ ಪ್ರಕ್ಷೇಪಿಸಿದಂತೆ ಕೈಗೆಟುಕುವ ವಸತಿ ಅಗತ್ಯವಿರುವ 20.35 ಲಕ್ಷ ಜನರಲ್ಲಿ ಬೇಡಿಕೆಯ ಸಮೀಕ್ಷೆಯ ಮೂಲಕ ಕೇವಲ 13.72 ಲಕ್ಷ ನಿರೀಕ್ಷಿತ ಫಲಾನುಭವಿಗಳನ್ನು ಗುರುತಿಸಲಾಗಿದೆ (ಮಾರ್ಚ್ 2021) ಎಂಬ ವಾಸ್ತವಾಂಶವು ಸಮೀಕ್ಷೆಯಲ್ಲಿ ಗಮನಾರ್ಹ ಅರ್ಹ ಫಲಾನುಭವಿಗಳನ್ನು ಸೇರಿಸದಿರುವುದನ್ನು ಸೂಚಿಸುತ್ತದೆ.

ಯುಎಲ್‌ಬಿಗಳು ಗಣತಿದಾರರನ್ನು ನೇಮಿಸುವ ಬದಲು ಸಮೀಕ್ಷೆ ನಡೆಸಲು ತಮ್ಮದೇ ಆದ ಸಂಪನ್ಮೂಲಗಳನ್ನು ಮತ್ತು ಲಭ್ಯವಿರುವ ಸಿಬ್ಬಂದಿಯನ್ನು ಬಳಸಿಕೊಂಡಿವೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021). ನಿಗದಿತ ಕಾರ್ಯವಿಧಾನಗಳನ್ನು ಅನುಸರಿಸದೆ ಸಮೀಕ್ಷೆ ನಡೆಸಿರುವುದು

---

[4] ಬೀದರ್, ಬೀಳಗಿ, ಚಿಕ್ಕನಾಯಕನಹಳ್ಳಿ, ಚಿಟ್ಟಗುಪ್ಪ, ಹುಮ್ನಾಬಾದ್, ಕುಣಿಗಲ್, ಮಧುಗಿರಿ, ನಾಗಮಂಗಲ, ಪಾವಗಡ, ಶ್ರೀರಂಗಪಟ್ಟಣ ಮತ್ತು ಯಳಂದೂರು.

[5] ಆನೇಕಲ್, ಕಮಲಾಪುರ ಮತ್ತು ಮಂಡ್ಯ.

ಮತ್ತು ತರಬೇತಿ ಪಡೆದ ಗಣತಿದಾರರನ್ನು ನಿಯೋಜಿಸದಿರುವುದರಿಂದ ಬೇಡಿಕೆ ಸಮೀಕ್ಷೆಯ ದತ್ತಸಂಚಯವು ನಿಖರವಾಗಿಲ್ಲ ಮತ್ತು ಅಪೂರ್ಣ ಎಂಬುದು ವಾಸ್ತವಾಂಶವಾಗಿದೆ. ಕೆಳಗೆ ಚರ್ಚಿಸಿದಂತೆ, ಇದು ಯೋಜನೆಯ ಅಪೇಕ್ಷಿತ ಪ್ರಯೋಜನಗಳ ಕಡಿಮೆ ಸಾಧನೆಗೆ ಕಾರಣವಾಯಿತು.

### *2.1.1.2 ಬೇಡಿಕೆ ಸಮೀಕ್ಷೆ ದತ್ತಸಂಚಯದಲ್ಲಿ ಅಪೂರ್ಣ ಮಾಹಿತಿ*

ಪಿಎಮ್ಎವೈ(ಯು) ಯೋಜನೆಯ ಮಾರ್ಗಸೂಚಿಗಳ ಕಂಡಿಕ–8.3, ಬೇಡಿಕೆಯ ಸಮೀಕ್ಷೆಯ ಸಮಯದಲ್ಲಿ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಕಡ್ಡಾಯ ಮಾಹಿತಿಯನ್ನು ಸಂಗ್ರಹಿಸಬೇಕಾಗಿ ಸೂಚಿಸಿದೆ:

- ಅಸ್ತಿತ್ವದಲ್ಲಿರುವ ಮನೆಯ ಮಾಲೀಕತ್ವದ ವಿವರಗಳು
- ಛಾವಣಿಯ ಆಧಾರದ ಮೇಲೆ ಮನೆಯ ಪ್ರಕಾರ
- ಕುಟುಂಬದ ಮುಖ್ಯಸ್ಥರೊಂದಿಗಿನ ಸಂಬಂಧದೊಂದಿಗೆ ಕುಟುಂಬದ ಸದಸ್ಯರುಗಳ ಹೆಸರು ಮತ್ತು ವಯಸ್ಸು
- ಭಾರತದಲ್ಲಿ ಎಲ್ಲಿಯಾದರೂ ವಸತಿ ಇದ್ದರೆ, ಆಸ್ತಿಯ ಮಾಲೀಕತ್ವದ ವಿವರಗಳು
- ಫಲಾನುಭವಿಗಳ ಉದ್ಯೋಗ ಸ್ಥಿತಿ

ಬೇಡಿಕೆ ಸಮೀಕ್ಷೆಯ ದತ್ತಸಂಚಯದ ಪರೀಕ್ಷೆಯಲ್ಲಿ, ಸೂಚಿಸಲಾದ ಮೇಲಿನ ಯಾವುದೇ ಕಡ್ಡಾಯ ಮಾಹಿತಿಯು ಮಾರ್ಗದರ್ಶಿ ಸೂತ್ರಗಳಲ್ಲಿ ಲಭ್ಯವಿಲ್ಲದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳ ಅಡಿಯಲ್ಲಿನ ಪ್ರಯೋಜನಗಳು ಬಿಪಿಎಲ್ ಮತ್ತು ಇಡಬ್ಲ್ಯುಎಸ್ ಜನಸಂಖ್ಯೆಗೆ ಸೀಮಿತವಾಗಿವೆ. 13.72 ಲಕ್ಷ ಫಲಾನುಭವಿಗಳಲ್ಲಿ ಕೇವಲ 4.19 ಲಕ್ಷ (ಶೇಕಡಾ 31) ಫಲಾನುಭವಿಗಳಿಗೆ ಸಂಬಂಧಿಸಿದಂತೆ, ಅವರ ಆರ್ಥಿಕ ಅರ್ಹತೆಯನ್ನು ನಿರ್ಣಯಿಸಲು ಬೇಡಿಕೆ ಸಮೀಕ್ಷೆಯ ಸಮಯದಲ್ಲಿ ಬಿಪಿಎಲ್ ಪಡಿತರ ಚೀಟಿ, ಆದಾಯ ಪ್ರಮಾಣಪತ್ರ ಮುಂತಾದ ದಾಖಲೆಗಳನ್ನು ಸಂಗ್ರಹಿಸಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಗಣತಿದಾರರಿಗೆ ಸರಿಯಾದ ತರಬೇತಿಯ ಕೊರತೆಯಿಂದಾಗಿ ಕಡ್ಡಾಯ ವಿವರಗಳನ್ನು ಸಂಗ್ರಹಿಸಲಾಗಲಿಲ್ಲ ಎಂದು ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ ಒಪ್ಪಕೊಂಡಿತು (ಸೆಪ್ಟಂಬರ್ 2021) ಮತ್ತು ಯೋಜನೆಗಳಿಗೆ ಫಲಾನುಭವಿಗಳನ್ನು ಲಗತ್ತಿಸುವಾಗ ಮಾಹಿತಿಯನ್ನು ಸಂಗ್ರಹಿಸಲಾಗುವುದು ಎಂದು ತಿಳಿಸಿತು.

ಗಣತಿದಾರರಿಗೆ ಕಡ್ಡಾಯ ತರಬೇತಿಯನ್ನು ಸೂಚಿಸುವ ಮಾರ್ಗಸೂಚಿಗಳ ಉಲ್ಲಂಘನೆ ಮಾಡಿರುವುದನ್ನು ಉತ್ತರವು ಒತ್ತಿಹೇಳುತ್ತದೆ. ತರಬೇತಿಯ ಅನುಪಸ್ಥಿತಿಯಲ್ಲಿ ಸಮೀಕ್ಷೆ ನಡೆಸಿರುವುದು ಅಸಮರ್ಪಕವಾಗಿದೆ. ಲಗತ್ತಿಸಲಾದ 3.43 ಲಕ್ಷ ಫಲಾನುಭವಿಗಳಲ್ಲಿ 2.30 ಲಕ್ಷ ಫಲಾನುಭವಿಗಳಿಗೆ (ಶೇಕಡಾ 67) ಆರ್ಥಿಕ ಅರ್ಹತೆಯನ್ನು ಬೆಂಬಲಿಸುವ ದಾಖಲೆಗಳು ಲಭ್ಯವಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### *2.1.1.3 ನಿಗದಿತ ಸಮಯದಲ್ಲಿ ಬೇಡಿಕೆ ಸಮೀಕ್ಷೆಯನ್ನು ಪೂರ್ಣಗೊಳಿಸದಿರುವುದು*

ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯವು ಹೊರಡಿಸಿದ ಹೆಚ್ಎಫ್ಎಪಿಒಎ ತಯಾರಿಕೆಗಾಗಿನ ಮಾಡ್ಯೂಲ್‌ನ ಕಂಡಿಕೆ–2.3ರ ಅನ್ವಯ ಯೋಜನೆಯಡಿಯಲ್ಲಿ ವಸತಿಗಾಗಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವನ್ನು ನಿರ್ಧರಿಸಲು ರಾಜ್ಯಗಳಿಗೆ ಸಲಹೆ ನೀಡಲಾಯಿತು. ಇದರಿಂದ ಬೇಡಿಕೆಯ ಮೌಲ್ಯಮಾಪನವನ್ನು ನಿರ್ದಿಷ್ಟ ಸಮಯದ ಚೌಕಟ್ಟಿನಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತದೆ ಹಾಗೂ ಅದು ನಿರಂತರ ಪ್ರಕ್ರಿಯೆಯಾಗುವುದಿಲ್ಲ. ಮೇಲಿನವುಗಳಿಗೆ ಬದ್ಧವಾಗಿ, ರಾಜ್ಯ ಸರ್ಕಾರವು ಯೋಜನೆಯ ಬೇಡಿಕೆಯನ್ನು ನಿರ್ಣಯಿಸುವ ಸಂಪೂರ್ಣ ಪ್ರಕ್ರಿಯೆಯನ್ನು ಬೇಡಿಕೆ ಸಮೀಕ್ಷೆಯನ್ನು ಕೈಗೊಂಡ 15 ದಿನಗಳೊಳಗೆ ಪೂರ್ಣಗೊಳಿಸಬೇಕು ಎಂದು ಸೂಚಿಸಿತು (ಜೂನ್ 2016). ಆದರೆ ಮೇಲಿನವುಗಳಿಗೆ ವಿರುದ್ಧವಾಗಿ ಈ ದಿನದವರೆಗೂ ಫಲಾನುಭವಿಗಳನ್ನು ಸೇರಿಸಲಾಗುತ್ತಿದೆ (ಮಾರ್ಚ್ 2021). 13.72

ಲಕ್ಷದಲ್ಲಿ 2017–21ರ ಅವಧಿಯಲ್ಲಿ ಬೇಡಿಕೆ ಪಟ್ಟಿಗೆ 6.72 ಲಕ್ಷ ಫಲಾನುಭವಿಗಳನ್ನು (ಶೇಕಡಾ 49) ಸೇರಿಸಲಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ಬೇಡಿಕೆಯ ಮೌಲ್ಯಮಾಪನವು ನಿರಂತರ ಪ್ರಕ್ರಿಯೆಯಾಗಿ ಮಾರ್ಪಟ್ಟಿದ್ದು ಇದು ಕಾರ್ಯತಂತ್ರದ ಯೋಜನೆ, ವಾರ್ಷಿಕ ಗುರಿಗಳನ್ನು ನಿಗದಿಪಡಿಸುವುದು ಮತ್ತು ಯೋಜನೆಯ ಗುರಿಯನ್ನು 2022ರ ವೇಳೆಗೆ ಸಾಧಿಸಲು ಸಂಪನ್ಮೂಲಗಳ ಹಂಚಿಕೆಯ ಮೇಲೆ ಪರಿಣಾಮ ಬೀರುತ್ತದೆ.

ಭಾರತ ಸರ್ಕಾರದ ಸೂಚನೆಗಳು ಕಡ್ಡಾಯವಲ್ಲ ಮತ್ತು ಕೊನೆಯ ದಿನಾಂಕದ ನಂತರವೂ ಫಲಾನುಭವಿಗಳಿಂದ ಅರ್ಜಿಗಳ ಸ್ವೀಕೃತಿಯನ್ನು ಅನುಮತಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021).

ಜೂನ್ 2016ರೊಳಗೆ ಬೇಡಿಕೆಯ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕೆಂದು ಸಿಎಸ್ಎಮ್‌ಸಿ ಸೂಚಿಸಿದ್ದರಿಂದ (ಏಪ್ರಿಲ್ 2016) ಮತ್ತು ನಂತರದ ಎಲ್ಲಾ ಸಭೆಗಳಲ್ಲಿ ಸಾಧ್ಯವಾದಷ್ಟು ಬೇಗ ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸುವಂತೆ ಒತ್ತಿಹೇಳಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಹೀಗೆ, ಬೇಡಿಕೆ ಪಟ್ಟಿಯನ್ನು ಅಂತಿಮಗೊಳಿಸುವಲ್ಲಿ ರಾಜ್ಯ ಸರ್ಕಾರದ ವಿಫಲತೆಯಿಂದಾಗಿ ನಿಗದಿತ ಕೊನೆಯ ದಿನಾಂಕದ ನಂತರ ಸುಮಾರು ಶೇಕಡಾ 49ರಷ್ಟು ಫಲಾನುಭವಿಗಳನ್ನು ಸೇರಿಸಲು ಕಾರಣವಾಗಿರುವುದಕ್ಕೆ ಭಾರತ ಸರ್ಕಾರವು ಒದಗಿಸಿದ ಸಡಿಲಿಕೆಗಳು ವಿನಾಯಿತಿಗಳಾಗಿವೆ ಎಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ವಸತಿ ಘಟಕಗಳ ಅಗತ್ಯತೆಯನ್ನು ದೃಢೀಕರಿಸುವಲ್ಲಿನ ವಿಳಂಬವು ಯೋಜನಾ ಪ್ರಕ್ರಿಯೆ, ಸಂಪನ್ಮೂಲಗಳ ಹಂಚಿಕೆ ಮತ್ತು ಬೇಡಿಕೆಯನ್ನು ಪೂರೈಸಲು ಪೂರ್ಣಗೊಳಿಸುವ ಗುರಿಗಳನ್ನು ನಿಗದಿಪಡಿಸುವುದರ ಮೇಲೆ ಪರಿಣಾಮ ಬೀರಿತು.

## 2.2 ಯೋಜನೆಗಳಿಗೆ ಫಲಾನುಭವಿಗಳ ಜೋಡಣೆ

ಫಲಾನುಭವಿಗಳ ಜೋಡಣೆಯು ಯೋಜನೆಯ ಘಟಕದ ಅಡಿಯಲ್ಲಿ ಅನುಮೋದಿತ ಯೋಜನೆಗಳಿಗೆ ಬೇಡಿಕೆ ಸಮೀಕ್ಷೆಯಿಂದ ಫಲಾನುಭವಿಗಳನ್ನು ಸೇರಿಸುವ ಪ್ರಕ್ರಿಯೆಯಾಗಿದೆ. ಜೋಡಿಸಿದ ನಂತರ, ಬೇಡಿಕೆ ಸಮೀಕ್ಷೆಯಲ್ಲಿಯ ನಿರೀಕ್ಷಿತ ಫಲಾನುಭವಿಯು ಯೋಜನೆಯ ನಿಜವಾದ ಫಲಾನುಭವಿಯಾಗುತ್ತಾರೆ. ನಕಲು ಪಾವತಿಯ ಅವಕಾಶಗಳನ್ನು ತಡೆಗಟ್ಟಲು ಆಧಾರ್‌ನಂತಹ ವಿಶಿಷ್ಟ ಗುರುತಿನ ಸಂಖ್ಯೆಗಳನ್ನು ಬಳಸಿಕೊಂಡು ದೃಢೀಕರಣವನ್ನು ನಡೆಸಿದ ನಂತರ ಫಲಾನುಭವಿಗಳನ್ನು ಯೋಜನೆಗಳಿಗೆ ಲಗತ್ತಿಸಬೇಕಾಗಿದ್ದಿತು. ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳ 2472 ಯೋಜನೆಗಳಡಿಯಲ್ಲಿ ಅನುಮೋದಿಸಲಾದ 5.17 ಲಕ್ಷ ಫಲಾನುಭವಿಗಳ ಪೈಕಿ ಕೇವಲ 3.43 ಲಕ್ಷ ಫಲಾನುಭವಿಗಳನ್ನು (ಶೇಕಡಾ 66) ಮಾತ್ರ ಮಾರ್ಚ್ 2021ರವರೆಗೆ ಜೋಡಣೆಗೊಳಿಸಲಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ಜೋಡಣೆಯಲ್ಲಿನ ಕೊರತೆ ಮತ್ತು ಪ್ರಕ್ರಿಯೆಯಲ್ಲಿನ ಕೊರತೆಗಳು, ಕೆಳಗೆ ವಿವರಿಸಿರುವಂತೆ ಫಲಾನುಭವಿಗಳಿಗೆ ದುಪ್ಪಟ್ಟು ಪ್ರಯೋಜನಗಳು ದೊರಕಲು ಕಾರಣವಾಯಿತು:

### *2.2.1. ಫಲಾನುಭವಿಗಳನ್ನು ಜೋಡಣೆಗೊಳಿಸದಿರುವುದು ಒಂದೇ/ವಿವಿಧ ಘಟಕಗಳಡಿಯಲ್ಲಿ ಬಹು ಪ್ರಯೋಜನಗಳನ್ನು ನೀಡುವಲ್ಲಿ ಪರಿಣಮಿಸಿತು*

ಫಲಾನುಭವಿಯು ಅಸ್ತಿತ್ವದಲ್ಲಿರುವ ಯೋಜನೆಯ ಯಾವುದೇ ಘಟಕಗಳಡಿಯಲ್ಲಿ ಕೇವಲ ಒಂದು ಪ್ರಯೋಜನವನ್ನು ಮಾತ್ರ ಪಡೆಯಲು ಅರ್ಹನಾಗಿರುತ್ತಾನೆ ಎಂದು ಪಿಎಮ್‌ಎವೈ(ಯು) ಯೋಜನೆ ಮಾರ್ಗಸೂಚಿಗಳ ಕಂಡಿಕೆ–8.12 ಷರತ್ತು ವಿಧಿಸುತ್ತದೆ. ಇದನ್ನು ಖಚಿತಪಡಿಸಿಕೊಳ್ಳಲು, ಫಲಾನುಭವಿಗಳನ್ನು ಅನುಮೋದಿತ ಯೋಜನೆಗಳಿಗೆ ವಿಶಿಷ್ಟ ಗುರುತಿನ ಸಂಖ್ಯೆಗಳನ್ನು ಬಳಸಿಕೊಂಡು ದೃಢೀಕರಣದ ಮೂಲಕ ಜೋಡಣೆಗೊಳಿಸಬೇಕು. ಬಿಎಲ್‌ಸಿ ಘಟಕದಡಿಯಲ್ಲಿ ಜೋಡಣೆಗೊಳಿಸಿದ 206 ಫಲಾನುಭವಿಗಳಿಗೆ ಕೆಎಸ್‌ಡಿಬಿ ಜಾರಿಗೊಳಿಸಿದ ಎಹೆಚ್‌ಪಿ ಯೋಜನೆಯಡಿಯಲ್ಲಿ ದೃಢೀಕರಿಸದೆ ಪ್ರಯೋಜನಗಳನ್ನು ವಿಸ್ತರಿಸಲಾಗಿದೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮೇಲಿನ 206

ಫಲಾನುಭವಿಗಳಲ್ಲಿ, 38 ಫಲಾನುಭವಿಗಳು (**ಅನುಬಂಧ–2.1ರಲ್ಲಿ** ವಿವರಗಳನ್ನು ನೀಡಲಾಗಿದೆ) ಬಿಎಲ್‌ಸಿ ಘಟಕದಡಿಯಲ್ಲಿ ₹0.91 ಕೋಟಿ ಮೊತ್ತದ ವಿತ್ತೀಯ ಪ್ರಯೋಜನಗಳನ್ನು ಪಡೆದಿದ್ದರು. ಈ 38 ಫಲಾನುಭವಿಗಳು ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಎಹೆಚ್‌ಪಿ (ಮನೆಗಳು) ಮತ್ತು ಬಿಎಲ್‌ಸಿ (ಹಣ) ಘಟಕಗಳಡಿಯಲ್ಲಿ ಪ್ರಯೋಜನಗಳನ್ನು ಪಡೆದಿದ್ದರು. ಬಿಎಲ್‌ಸಿ ಘಟಕದಡಿ ಹಣ ಪಡೆದ ಮತ್ತು ಎಹೆಚ್‌ಪಿ ಘಟಕದಡಿ ಮನೆಗಳನ್ನು ಪಡೆದ ಸ್ಥಳೀಯ ಸಂಸ್ಥೆವಾರು ಫಲಾನುಭವಿಗಳ ಸಂಖ್ಯೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–2.1: ನಗರ ಸ್ಥಳೀಯ ಸಂಸ್ಥೆವಾರು ಬಹು ಪ್ರಯೋಜನಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ**

| ಕ್ರಮ ಸಂಖ್ಯೆ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಬಹು ಪ್ರಯೋಜನಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ | ಬಿಎಲ್‌ಸಿ ಅಡಿ ಪಡೆದ ಮೊತ್ತ (`ಲಕ್ಷಗಳಲ್ಲಿ) | ಎಹೆಚ್‌ಪಿಯಡಿ ಹಂಚಿಕೆಯಾದ ಮನೆಗಳು |
|---|---|---|---|---|
| 1 | ಚಿಕ್ಕೋಡಿ | 8 | 25.08 | 8 |
| 2 | ಗೋಕಾಕ | 4 | 8.99 | 4 |
| 3 | ಇಂಡಿ | 3 | 3.87 | 3 |
| 4 | ಕಡೂರು | 2 | 2.10 | 2 |
| 5 | ಕುಣಿಗಲ್ | 3 | 3.97 | 3 |
| 6 | ಮದ್ದೂರು | 2 | 5.70 | 2 |
| 7 | ಮಧುಗಿರಿ | 2 | 4.65 | 2 |
| 8 | ಮಳವಳ್ಳಿ | 4 | 9.74 | 4 |
| 9 | ಪಾವಗಡ | 2 | 6.60 | 2 |
| 10 | ರಾಮದುರ್ಗ | 3 | 6.40 | 3 |
| 11 | ಸಾಗರ | 2 | 6.00 | 2 |
| 12 | ಶಿವಮೊಗ್ಗ | 1 | 3.30 | 1 |
| 13 | ಸಿರಾ | 2 | 4.50 | 2 |
| | **ಒಟ್ಟು** | **38** | **90.90** | **38** |

ಆಧಾರ: ಆರ್‌ಜಿಹೆಚ್‌ಸಿಎಲ್ ನೀಡಿದ ದತ್ತಾಂಶದಿಂದ ಪಡೆದ ಮಾಹಿತಿ

ಕೆಎಸ್‌ಡಿಬಿಯಿಂದ ಅನುಷ್ಠಾನಗೊಳಿಸಲಾದ ಯೋಜನೆಯ ಪರೀಕ್ಷಾ–ತನಿಖೆ ಮಾಡಲಾದ 38 ಎಹೆಚ್‌ಪಿ ಯೋಜನೆಗಳ ಅಡಿಯಲ್ಲಿ ಒದಗಿಸಲಾದ ಪ್ರಯೋಜನಗಳ ಇದೇ ರೀತಿಯ ಲೆಕ್ಕಪರಿಶೋಧನಾ ವಿಶ್ಲೇಷಣೆಯು 86 ಪ್ರಕರಣಗಳಲ್ಲಿ (**ಅನುಬಂಧ–2.2**) ಬಹು ಪ್ರಯೋಜನಗಳನ್ನು ಪಡೆದಿರುವುದನ್ನು ತಿಳಿಯಪಡಿಸಿತು. ಇದು ಫಲಾನುಭವಿಗಳನ್ನು ಜೋಡಣೆಗೊಳಿಸದಿರುವ ನೇರ ಪರಿಣಾಮವಾಗಿದೆ.

### *2.2.2 ಯೋಜನೆಯಡಿಯಲ್ಲಿ ಈಗಾಗಲೇ ಮನೆಗಳನ್ನು ಹಂಚಿಕೆ ಮಾಡಿರುವ ಫಲಾನುಭವಿಗಳ ಪತಿ/ಪತ್ನಿಗೆ ಅಕ್ರಮವಾಗಿ ಪ್ರಯೋಜನಗಳನ್ನು ನೀಡಿರುವುದು*

ಪಿಎಮ್‌ಎವೈ(ಯು) ಯೋಜನೆಯ ಮಾರ್ಗಸೂಚಿಗಳ ಕಂಡಿಕೆ–1.3ರ ಅನ್ವಯ ಫಲಾನುಭವಿ ಕುಟುಂಬವು ಪತಿ, ಹೆಂಡತಿ ಮತ್ತು ಅವಿವಾಹಿತ ಮಕ್ಕಳನ್ನು ಒಳಗೊಂಡಿರುತ್ತದೆ. ಫಲಾನುಭವಿ ಕುಟುಂಬವು ಭಾರತದ ಯಾವುದೇ ಭಾಗದಲ್ಲಿ ಅವನ/ಅವಳ ಹೆಸರಿನಲ್ಲಿ ಅಥವಾ ಅವನ/ಅವಳ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಪಕ್ಕಾ ಮನೆಯನ್ನು ಹೊಂದಿರಬಾರದು. ವಿವಾಹಿತ ಫಲಾನುಭವಿಗಳನ್ನು ಲಗತ್ತಿಸುವಾಗ, ಪತಿ ಮತ್ತು ಪತ್ನಿ ಇಬ್ಬರಿಗೂ ಮನೆಗಳನ್ನು ಹಂಚಿಕೆ ಮಾಡುವುದನ್ನು ತಡೆಯಲು, ಆಧಾರ್ ದೃಢೀಕರಣದೊಂದಿಗೆ ಪತಿ/ಪತ್ನಿಯ ಮಾಹಿತಿಯ ವಿವರಗಳನ್ನು ನೀಡುವುದು ಕಡ್ಡಾಯ ಎಂದು ಪಿಎಮ್‌ಎವೈ ಎಮ್‌ಐಎಸ್ ಕೈಪಿಡಿಯು ನಿಗದಿಪಡಿಸುತ್ತದೆ.

ಲಗತ್ತಿಸಲಾದ ಫಲಾನುಭವಿ ದತ್ತಾಂಶದಲ್ಲಿ ಪತಿ/ಪತ್ನಿಗೆ ಸಂಬಂಧಿಸಿದ ಮಾಹಿತಿಯ ವಿವರಗಳನ್ನು ಸೆರೆಹಿಡಿಯಲಾಗಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿಜಯಪುರ ನಗರದಲ್ಲಿ ಕೆಎಸ್‌ಡಿಬಿ ಅನುಷ್ಠಾನಗೊಳಿಸಿದ ಎಹೆಚ್‌ಪಿ ಯೋಜನೆ ಹಾಗೂ ಬಿಎಲ್‌ಸಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದ

ದಾಖಲೆಗಳ ಪರಿಶೀಲನೆಯಲ್ಲಿ 21 ಬಿಎಲ್‌ಸಿ ಫಲಾನುಭವಿಗಳ ಪತಿ/ಪತ್ನಿಯನ್ನು ಎಎಚ್‌ಪಿ ಘಟಕದಡಿಯಲ್ಲಿ ಫಲಾನುಭವಿಗಳಾಗಿ ಲಗತ್ತಿಸಲಾಗಿತ್ತು ಮತ್ತು ಅವರು ಪ್ರಯೋಜನಗಳನ್ನು ಪಡೆದಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಅನುಬಂಧ–2.3**). ಯೋಜನೆಯ ಘಟಕವೊಂದರ ಅಡಿಯಲ್ಲಿ ಫಲಾನುಭವಿಯನ್ನು ದೃಢೀಕರಿಸುವಾಗ ಪತಿ/ಪತ್ನಿಯ ಆಧಾರ್ ವಿವರಗಳನ್ನು ಪರಿಗಣಿಸಿರಲಿಲ್ಲ ಎಂಬುದನ್ನು ಇದು ಸೂಚಿಸುತ್ತದೆ ಹಾಗೂ ಇದು ಯೋಜನೆಯ ಬೇರೊಂದು ಘಟಕದಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು ಪತಿ/ಪತ್ನಿಗೆ ಅನುಕೂಲವಾಗುವುದು. ಇದು ಅಕ್ರಮವಾಗುತ್ತದೆ.

ಫಲಾನುಭವಿ ವಂತಿಗೆಯನ್ನು ಪಾವತಿಸಲು ಸಿದ್ಧವಾಗಿರುವ ಹೊಸ ಫಲಾನುಭವಿಗಳ ಆಯ್ಕೆಯಿಂದಾಗಿ ಎಹೆಚ್‌ಪಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಲಗತ್ತಿಸುವಿಕೆಯಲ್ಲಿ ಕೊರತೆಯುಂಟಾಯಿತು ಮತ್ತು ಸಿಎಸ್‌ಎಮ್‌ಎಸ್‌ನಿಂದ ಫಲಾನುಭವಿಗಳ ಮಾರ್ಪಾಡಿಗೆ ಅನುಮೋದನೆಯನ್ನು ಪಡೆಯಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021). ಒಂದೇ ಕುಟುಂಬದ ಸದಸ್ಯರಿಬ್ಬರಿಗೂ ಮನೆಗಳನ್ನು ಮಂಜೂರು ಮಾಡಿರುವ ಪ್ರಕರಣಗಳಲ್ಲಿ ಹಂಚಿಕೆಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದೂ ಕೂಡ ತಿಳಿಸಲಾಯಿತು.

ಈ ಅನರ್ಹ ಫಲಾನುಭವಿಗಳಿಗೆ ಪ್ರಯೋಜನಗಳ ವಿಸ್ತರಣೆಯು ಯೋಜನೆಯ ಮಾರ್ಗಸೂಚಿಗಳಿಗೆ ವಿರುದ್ಧವಾಗಿರುವುದರಿಂದ ಮತ್ತು ಪ್ರಯೋಜನಗಳ ನಕಲಿಗೆ ಕಾರಣವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

## 2.3 ಬೇಡಿಕೆ ಸಮೀಕ್ಷೆಯ ಹೊರಗಿನ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದು

ಸಿಎಸ್‌ಎಮ್‌ಸಿಯಿಂದ ಅನುಮೋದಿಸಲಾದ ಎಹೆಚ್‌ಪಿ ಯೋಜನೆಗಳ ಸವಿವರ ಯೋಜನಾ ವರದಿಗಳು ಯುಎಲ್‌ಬಿಗಳು ನಡೆಸಿದ ಬೇಡಿಕೆ ಸಮೀಕ್ಷೆಯ ಮೂಲಕ ಗುರುತಿಸಲಾದ ನಿರೀಕ್ಷಿತ ಫಲಾನುಭವಿಗಳ ಪಟ್ಟಿಯಿಂದ ಪಡೆದ ಅನುಮೋದಿತ ಫಲಾನುಭವಿಗಳನ್ನು ಒಳಗೊಂಡಿವೆ. ಪಿಎಮ್‌ಎವೈ ಎಮ್‌ಐಎಸ್ ಕೈಪಿಡಿಯ ಅನ್ವಯ, ಯೋಜನೆಯ ಪರಿಷ್ಕರಣೆಗೆ ಸಿಎಸ್‌ಎಮ್‌ಸಿಯ ಅನುಮೋದನೆಯ ಅಗತ್ಯವಿದೆ ಮತ್ತು ಯುಎಲ್‌ಬಿಗಳು ಯೋಜನೆಯ ಪರಿಷ್ಕರಣೆ ಸಮಯದಲ್ಲಿ ಮಾತ್ರ ಫಲಾನುಭವಿಗಳನ್ನು ತೆಗೆದುಹಾಕಬಹುದು. ಯೋಜನೆಯ ಪರಿಷ್ಕರಣೆ ಸಂದರ್ಭದಲ್ಲಿ ಹೊಸ ಫಲಾನುಭವಿಗಳ ಸೇರ್ಪಡೆಗೆ ಅವಕಾಶವಿರುವುದಿಲ್ಲ. ಪರೀಕ್ಷಾ–ತನಿಖೆ ನಡೆಸಿದ ಎಹೆಚ್‌ಪಿ ಯೋಜನೆಗಳ 35[6] ಅನುಮೋದಿತ ಸವಿವರ ಯೋಜನಾ ವರದಿಗಳ ಫಲಾನುಭವಿಗಳ ಪಟ್ಟಿಯನ್ನು ವಾಸ್ತವವಾಗಿ ಯೋಜನೆಯ ಪ್ರಯೋಜನಗಳನ್ನು ಪಡೆದವರ ವಿವರಗಳೊಂದಿಗೆ ಲೆಕ್ಕಪರಿಶೋಧನೆಯು ಪರಿಶೀಲಿಸಿದಾಗ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

- ಸಿಎಸ್‌ಎಮ್‌ಸಿಯಿಂದ ಅನುಮೋದಿಸಲ್ಪಟ್ಟ ಮತ್ತು ಅನುಮೋದಿತ ಯೋಜನೆಗಳಿಗೆ ಜೋಡಣೆಗೊಳಿಸಲಾದ 12979 ಮೂಲ ಫಲಾನುಭವಿಗಳಲ್ಲಿ 1600 ಫಲಾನುಭವಿಗಳಿಗೆ ಮಾತ್ರ (ಶೇಕಡಾ 12) ಯೋಜನೆಯಡಿಯಲ್ಲಿ ಪ್ರಯೋಜನಗಳನ್ನು ಒದಗಿಸಲಾಗಿದೆ. ಹೀಗಾಗಿ, ಯೋಜನೆಗಳ ಪ್ರಯೋಜನಗಳ ಸ್ವೀಕರಿಸಿದವರಲ್ಲಿ ಶೇಕಡಾ 88ರಷ್ಟು ಫಲಾನುಭವಿಗಳನ್ನು ಅನುಮೋದಿತ ಡಿಪಿಆರ್‌ಗಳ ಹೊರಗೆ ಆಯ್ಕೆ ಮಾಡಲಾಗಿದೆ. ಆದಾಗ್ಯೂ, ಪಿಎಮ್‌ಎವೈ ಎಮ್‌ಐಎಸ್ ಕೈಪಿಡಿಯನ್ನು ಉಲ್ಲಂಘಿಸಿ ಸಿಎಸ್‌ಎಮ್‌ಸಿಯ ಅನುಮೋದನೆ ಇಲ್ಲದೆ ಹೊಸ ಫಲಾನುಭವಿಗಳ ಸೇರ್ಪಡೆಯನ್ನು ಮಾಡಲಾಗಿದೆ.
- ಯೋಜನೆಯ ಪ್ರಯೋಜನಗಳನ್ನು ಸ್ವೀಕರಿಸಿದ 10,188 ಫಲಾನುಭವಿಗಳಲ್ಲಿ 4,446 ಫಲಾನುಭವಿಗಳು (ಶೇಕಡಾ 44) ಬೇಡಿಕೆ ಸಮೀಕ್ಷೆಯ ಮೂಲಕ ಪಡೆದ ನಿರೀಕ್ಷಿತ ಫಲಾನುಭವಿಗಳ ಪಟ್ಟಿಯ ಭಾಗವಾಗಿರಲಿಲ್ಲ.

[6] ಕೆಆರ್ ಪುರಂ, ಸಿರಾ ಮತ್ತು ಮಧುಗಿರಿ ಹೊರತುಪಡಿಸಿ

20 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಮೋದಿತ ವಸತಿ ಘಟಕಗಳು ಆಯಾ ನಗರ ಸ್ಥಳೀಯ ಸಂಸ್ಥೆಯ ಬೇಡಿಕೆ ಸಮೀಕ್ಷೆಯಲ್ಲಿ ಗುರುತಿಸಲಾದ ನಿರೀಕ್ಷಿತ ಫಲಾನುಭವಿಗಳಿಗಿಂತ ಅಧಿಕವಾಗಿದ್ದವು ಎಂದು ಲೆಕ್ಕಪರಿಶೋಧನೆಯು ಗಮನಿಸಿತು (**ಅನುಬಂಧ–2.4**). ಅನುಮೋದಿತ ಡಿಪಿಆರ್‌ಗಳಲ್ಲಿನ ಒಟ್ಟು ಫಲಾನುಭವಿಗಳ ಸಂಖ್ಯೆಯು ಬೇಡಿಕೆ ಸಮೀಕ್ಷೆಯಲ್ಲಿ ಗುರುತಿಸಲಾದ ಒಟ್ಟು ಫಲಾನುಭವಿಗಳ ಸಂಖ್ಯೆಯನ್ನು ಮೀರದಂತೆ ನೋಡಿಕೊಳ್ಳಲು ಎಸ್‌ಎಲ್‌ಎಸ್‌ಎಮ್‌ಸಿ ಸರಿಯಾದ ಶ್ರದ್ಧೆಯನ್ನು ವಹಿಸಲಿಲ್ಲ. ಈ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜಾರಿಗೊಳಿಸಲಾದ ವಿವಿಧ ಯೋಜನೆಗಳಡಿಯಲ್ಲಿ ಬೇಡಿಕೆ ಸಮೀಕ್ಷೆಯಲ್ಲಿ ಗುರುತಿಸಲ್ಪಡದ 7640 ಫಲಾನುಭವಿಗಳನ್ನು ಸೇರಿಸುವಲ್ಲಿ ಇದು ಪರಿಣಮಿಸಿತು.

ರಾಜ್ಯ ಸರ್ಕಾರವು, ಬೇಡಿಕೆಯ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳು ಮತ್ತು ಯೋಜನೆಯ ವಾಸ್ತವಿಕ ಫಲಾನುಭವಿಗಳ ನಡುವಿನ ವ್ಯತ್ಯಾಸವನ್ನು ಈ ಕೆಳಗಿನ ಕಾರಣಗಳಿಗೆ ಅಧ್ಯಾರೋಪಿಸಿತು (ಸೆಪ್ಟೆಂಬರ್ 2021):

- ಫಲಾನುಭವಿಗಳು ಅನುಮೋದಿತ ಡಿಪಿಆರ್ ಪಟ್ಟಿ ಅಥವಾ ಬೇಡಿಕೆ ಸಮೀಕ್ಷೆ ಫಲಾನುಭವಿ ಪಟ್ಟಿಯ ಭಾಗವಾಗಿದ್ದರೂ, ಅದನ್ನು ಪರಿಗಣಿಸದೇ ಎಹೆಚ್‌ಪಿ ಯೋಜನೆಯಡಿಯ ಪ್ರಯೋಜನಗಳನ್ನು, ಫಲಾನುಭವಿ ವಂತಿಗೆಯನ್ನು ಪಾವತಿಸಲು ಮುಂದೆ ಬಂದ ಫಲಾನುಭವಿಗಳಿಗೆ ವಿಸ್ತರಿಸಲಾಯಿತು.
- ನಡೆಸಲಾದ ಬೇಡಿಕೆ ಸಮೀಕ್ಷೆಯಲ್ಲಿ ಫಲಾನುಭವಿಗಳನ್ನು ಹೊರಗಿಟ್ಟ ಕಾರಣ ನಂತರ ಅವರನ್ನು ಸೇರಿಸಲಾಯಿತು.

ಸಿಎಸ್‌ಎಮ್‌ಸಿ ಅನುಮೋದನೆಯಿಲ್ಲದೆ ಹೊಸ ಫಲಾನುಭವಿಗಳ ಸೇರ್ಪಡೆಯು ಅಕ್ರಮವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಯುಎಲ್‌ಬಿಗಳು ಬೇಡಿಕೆ ಸಮೀಕ್ಷೆಯನ್ನು ಅಸಮರ್ಪಕವಾಗಿ ನಡೆಸಿ ಫಲಾನುಭವಿಗಳನ್ನು ಹೊರಗಿಟ್ಟ ದೋಷಗಳ ಬಗ್ಗೆ ಲೆಕ್ಕಪರಿಶೋಧನೆಯ ವೀಕ್ಷಣೆಯನ್ನು ಸಹ ಉತ್ತರವು ದೃಢೀಕರಿಸುತ್ತದೆ (ಕಂಡಿಕೆ–2.1.1.1). ನಿಗದಿತ ಕಾರ್ಯವಿಧಾನವನ್ನು ಅನುಸರಿಸದೆ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳನ್ನು ಸೇರಿಸಿರುವುದು ಕಳಪೆ ಮೇಲ್ವಿಚಾರಣೆಯನ್ನು ಸೂಚಿಸುತ್ತದೆ ಮತ್ತು ಕೆಳಗಿನ ಕಂಡಿಕೆಗಳಲ್ಲಿ ವಿವರಿಸಿದಂತೆ ಅನರ್ಹ ಫಲಾನುಭವಿಗಳಿಗೆ ಯೋಜನೆಯ ಪ್ರಯೋಜನಗಳನ್ನು ನೀಡುವುದಕ್ಕೆ ಕಾರಣವಾಗುತ್ತದೆ:

### *2.3.1 ₹ಮೂರು ಲಕ್ಷಕ್ಕಿಂತ ಅಧಿಕ ವರಮಾನವಿರುವ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದು*

ಪಿಎಮ್‌ಎವೈ(ಯು) ಮಾರ್ಗಸೂಚಿಗಳ ಕಂಡಿಕೆ–3ರ ಅನ್ವಯ, ₹ಮೂರು ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಆದಾಯವನ್ನು ಹೊಂದಿರುವ (ಬಿಪಿಎಲ್ ಮತ್ತು ಇಡಬ್ಲ್ಯುಎಸ್ ವರ್ಗಗಳು) ಫಲಾನುಭವಿಗಳು ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಪ್ರಯೋಜನಗಳನ್ನು ಪಡೆಯಬಹುದು. ಎಹೆಚ್‌ಪಿ ಅಡಿಯಲ್ಲಿ ಪ್ರಯೋಜನಗಳನ್ನು ಪಡೆದ 33 ಫಲಾನುಭವಿಗಳು ಸಿಎಲ್‌ಎಸ್‌ಎಸ್ ಘಟಕದಡಿಯಲ್ಲಿಯೂ ಸಹ ಪ್ರಯೋಜನಗಳನ್ನು ಪಡೆದಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ವಿವರಗಳು **ಕಂಡಿಕೆ–5.2 ರಲ್ಲಿ**). ಮೇಲಿನ 33 ಫಲಾನುಭವಿಗಳ ಪೈಕಿ 18 ಮಂದಿಯ ವಾರ್ಷಿಕ ಆದಾಯವು ₹ ಮೂರು ಲಕ್ಷಕ್ಕಿಂತ ಅಧಿಕವಾಗಿದ್ದರಿಂದ ಯೋಜನೆಯ ಎಹೆಚ್‌ಪಿ ಘಟಕದಡಿಯಲ್ಲಿ ಪ್ರಯೋಜನಗಳನ್ನು ಪಡೆಯಲು ಅವರು ಅನರ್ಹರಾಗಿದ್ದರು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ವೀಕ್ಷಣೆಯನ್ನು ಒಪ್ಪಿಕೊಂಡಿತು (ಸೆಪ್ಟೆಂಬರ್ 2021) ಮತ್ತು ಎಹೆಚ್‌ಪಿ ಯೋಜನೆಗಳಿಂದ ಸಿಎಲ್‌ಎಸ್‌ಎಸ್ ಅಡಿಯಲ್ಲಿ ಪ್ರಯೋಜನಗಳನ್ನು ಪಡೆದ ಫಲಾನುಭವಿಗಳನ್ನು ತೆಗೆದುಹಾಕಲು ಕೆಎಸ್‌ಡಿಬಿಗೆ ಸೂಚನೆಗಳನ್ನು ನೀಡಲಾಗಿದೆ (ಏಪ್ರಿಲ್ 2021) ಎಂದು ತಿಳಿಸಿತು.

### *2.3.2 ಹೆಚ್ಚಿನ ಒಳಭಾಗದ (ಕಾರ್ಪೆಟ್) ವಿಸ್ತೀರ್ಣವಿರುವ ಮನೆಗಳಿಗೆ ಹಣಕಾಸಿನ ನೆರವು*

ಪಿಎಮ್ಎವೈ(ಯು) ಪ್ರತಿ ಮನೆಗೆ ₹ಐದು ಲಕ್ಷ ವೆಚ್ಚದಲ್ಲಿ 30 ಚದರ ಮೀಟರ್ ಕಾರ್ಪೆಟ್ ವಿಸ್ತೀರ್ಣದ ಮನೆಗಳ ನಿರ್ಮಾಣವನ್ನು ಬೆಂಬಲಿಸುತ್ತದೆ. ಪಿಎಮ್ಎವೈ(ಯು) ಯೋಜನೆಯಡಿ ನಿರ್ಮಿಸಲಾದ ಮನೆಗಳ ಜಂಟಿ ಪರಿಶೀಲನೆಯಲ್ಲಿ, ಭೇಟಿ ನೀಡಿದ 1816ರಲ್ಲಿ 740 ಮನೆಗಳು (ಶೇಕಡಾ 41) ಹೆಚ್ಚಿನ ವೆಚ್ಚದ ಮತ್ತು 30 ಚದರ ಮೀಟರ್‌ಗಿಂತ ಹೆಚ್ಚಿನ ಕಾರ್ಪೆಟ್ ವಿಸ್ತೀರ್ಣವನ್ನು ಹೊಂದಿರುವ ಬಹು ಅಂತಸ್ತಿನ ಕಟ್ಟಡಗಳಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (**ಚಿತ್ರ–2.1**). ನಿರ್ಮಾಣದ ಗುಣಮಟ್ಟ ಮತ್ತು ಕಟ್ಟಡಗಳ ಗಾತ್ರವು ಈ ಫಲಾನುಭವಿಗಳ ಆರ್ಥಿಕ ಅರ್ಹತೆಯ ಮೌಲ್ಯಮಾಪನದಲ್ಲಿ ನ್ಯೂನತೆಗಳನ್ನು ಸೂಚಿಸುತ್ತದೆ ಹಾಗೂ ₹ಐದು ಲಕ್ಷಕ್ಕಿಂತ ಹೆಚ್ಚು ನಿರ್ಮಾಣದ ವೆಚ್ಚವನ್ನು ಸೂಚಿಸುತ್ತದೆ.

**ಚಿತ್ರ–2.1: ನಿಗದಿಪಡಿಸಿದ ಮಿತಿಗಿಂತ ಹೆಚ್ಚಿನ ಕಾರ್ಪೆಟ್ ವಿಸ್ತೀರ್ಣವನ್ನು ಹೊಂದಿರುವ ವಸತಿ ಘಟಕಗಳು**

| | |
|---|---|
|  |  |
| ಬಿಬಿಎಮ್‌ಪಿ 762 ಡಿಯುಗಳು, ಲಿಂಗರಾಜಪುರಮ್ 'ಬಿ' ಬ್ಲಾಕ್ ಕೊಳೆಗೇರಿ ಎಹೆಚ್‌ಪಿ ಯೋಜನೆ | ಬಿಬಿಎಮ್‌ಪಿ 346 ಡಿಯುಗಳು, ಸಂಜೀವಿನಿನಗರ ಕೊಳೆಗೇರಿ ಎಹೆಚ್‌ಪಿ ಯೋಜನೆ |
|  |  |
| ಮುದ್ದೇಬಿಹಾಳ್ 250 ಡಿಯುಗಳು ಬಿಎಲ್‌ಸಿ ಯೋಜನೆ | ಮಂಗಳೂರು 32 ಡಿಯುಗಳು ಬಿಎಲ್‌ಸಿ ಯೋಜನೆ |

ಫಲಾನುಭವಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಫಲಾನುಭವಿಗಳ ಆರ್ಥಿಕ ಅರ್ಹತೆಯನ್ನು ಆಯಾ ಯುಎಲ್‌ಬಿಗಳು ಪರಿಶೀಲಿಸಿವೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021). ಕಂಡಿಕೆ–2.1.1.2ರಲ್ಲಿ ಗಮನಿಸಿದಂತೆ ಫಲಾನುಭವಿಗಳ ಆರ್ಥಿಕ ಅರ್ಹತೆಯನ್ನು ನಿರ್ಣಯಿಸುವಲ್ಲಿ ಯುಎಲ್‌ಬಿಗಳು ಸರಿಯಾದ ಕಾರ್ಯತತ್ಪರತೆ ವಹಿಸಿಲ್ಲ ಎಂದು ಲೆಕ್ಕಪರಿಶೋಧನೆ ಗಮನಿಸಿದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ ಮತ್ತು ಈ ನಿಟ್ಟಿನಲ್ಲಿ ಲೋಪದೋಷಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸಬೇಕಾಗಿದೆ.

### ***2.3.3 ಪಕ್ಕಾ ಮನೆಗಳನ್ನು ಹೊಂದಿದ ಫಲಾನುಭವಿಗಳನ್ನು ಅಕ್ರಮವಾಗಿ ಆಯ್ಕೆ ಮಾಡಿರುವುದು***

ಯೋಜನೆಯಡಿಯಲ್ಲಿ ಫಲಾನುಭವಿ ಕುಟುಂಬವು ಕೇಂದ್ರದ ನೆರವನ್ನು ಪಡೆಯಲು ಅರ್ಹರಾಗಲು ಭಾರತದ ಯಾವುದೇ ಭಾಗದಲ್ಲಿ ಅವನ/ಅವಳ ಹೆಸರಿನಲ್ಲಿ ಅಥವಾ ಅವನ/ಅವಳ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಪಕ್ಕಾ ಮನೆಯನ್ನು ಹೊಂದಿರಬಾರದು ಎಂದು ಯೋಜನೆಯ ಮಾರ್ಗಸೂಚಿಗಳ ಕಂಡಿಕೆ–1.3 ನಿಗದಿಪಡಿಸುತ್ತದೆ. ಅಲ್ಲದೆ, ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಂತಹ (ವ್ಯಾಂಬೆ) ಹಿಂದಿನ ಭಾರತ ಸರ್ಕಾರದ ವಸತಿ ಯೋಜನೆಗಳಡಿಯಲ್ಲಿ ಈಗಾಗಲೇ ಹಣವನ್ನು ಪಡೆದಿರುವ ಯೋಜನೆಯನ್ನು ಪಿಎಮ್ಎವೈ (ಯು) ಅಡಿಯಲ್ಲಿ ಪರಿಗಣಿಸಬಾರದು ಎಂದೂ ಸಹ ಸಿಎಸ್ಎಮ್ಸಿ ನಿಗದಿಪಡಿಸುತ್ತದ (ಮೇ 2016).

38ರಲ್ಲಿ ಆಯ್ದ 32[7] ಎಹೆಚ್‌ಪಿ ಯೋಜನೆಗಳಲ್ಲಿ ಪಿಎಮ್ಎವೈ ಅಡಿಯಲ್ಲಿ ಹೊಸ ಮನೆಯನ್ನು ನಿರ್ಮಿಸುವ ಮೊದಲು ಕೆಎಸ್‌ಡಿಬಿ ಮೊದಲೇ ಅಸ್ತಿತ್ವದಲ್ಲಿರುವ 16641 ಪಕ್ಕಾ ಮನೆಗಳನ್ನು ನೆಲಸಮಗೊಳಿಸಿತ್ತು ಎಂಬುದನ್ನು ಬಿಒಕ್ಯೂನಲ್ಲಿ ಸೇರಿಸಲಾದ ಅವಶೇಷಗಳ ವಿಶಿಷ್ಟತೆಗಳ ಪರಿಶೀಲನೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಮೇಲಿನ 32ರಲ್ಲಿ ಎರಡು ಯೋಜನೆಗಳಲ್ಲಿ 2001–2005ರ ಅವಧಿಯಲ್ಲಿ 155 ಮನೆಗಳನ್ನು ಭಾರತ ಸರ್ಕಾರದ ಹಳೆಯ ವ್ಯಾಂಬೆ ಮತ್ತು ವಸತಿ ಮತ್ತು ನಗರಾಭಿವೃದ್ಧಿ ನಿಗಮ ನಿಯಮಿತ (ಹುಡ್ಕೋ) ಯೋಜನೆಗಳಡಿಯಲ್ಲಿ ಒದಗಿಸಲಾಗಿತ್ತು (**ಚಿತ್ರ–2.2**).

**ಚಿತ್ರ–2.2: ನೆಲಸಮ ಮಾಡಲು ಪ್ರಸ್ತಾವಿಸಲಾಗಿರುವ ವ್ಯಾಂಬೆ ಯೋಜನೆಯಡಿಯಲ್ಲಿ ಒದಗಿಸಿರುವ ಮನೆಗಳು**
**(ಯೋಜನೆ: ಬಿಬಿಎಮ್‌ಪಿ 931 ವಸತಿ ಘಟಕಗಳು)**




ಯೋಜನೆಯಡಿಯಲ್ಲಿ ಪಕ್ಕಾ ಮನೆಗಳನ್ನು ನಿರ್ಮಿಸಲು ಅನುಕೂಲವಾಗುವಂತೆ ಫಲಾನುಭವಿಗಳ ಹಳೆಯ ಮತ್ತು ಶಿಥಿಲವಾದ ಮನೆಗಳನ್ನು ನೆಲಸಮಗೊಳಿಸಲಾಗಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಸೆಪ್ಟೆಂಬರ್ 2021). ಬಿಒಕ್ಯೂನಲ್ಲಿ ನಿರ್ದಿಷ್ಟಪಡಿಸಿದ ಕಾಮಗಾರಿಯ ವಸ್ತುವಾಗಿ ಪಕ್ಕಾ ರಚನೆಗಳಾದ ಕಲ್ಲು, ಸಿಮೆಂಟ್ ಕಾಂಕ್ರೀಟ್, ಮರಗೆಲಸ, ಉಕ್ಕಿನ ಕೆಲಸ ಇತ್ಯಾದಿಗಳೊಂದಿಗೆ ತೆಗೆದುಹಾಕುವುದನ್ನು ಉಲ್ಲೇಖಿಸಲಾಗಿದೆ ಮತ್ತು ಜಂಟಿ ಭೌತಿಕ ಪರಿಶೀಲನಾ ವರದಿಗಳು ಮನೆಗಳು ಶಿಥಿಲವಾಗಿಲ್ಲ ಎಂದು ದೃಢಪಡಿಸಿದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.

### ***2.3.4 ಆರ್ಥಿಕ ಅರ್ಹತೆಯನ್ನು ಪರಿಶೀಲಿಸದೇ ಒಂದೇ ಕುಟುಂಬದ ಒಂದಕ್ಕಿಂತ ಹೆಚ್ಚಿನ ಸದಸ್ಯರಿಗೆ ಪ್ರಯೋಜನ ನೀಡಿರುವುದು***

ಯೋಜನೆಯ ಮಾರ್ಗಸೂಚಿಗಳ ಅನ್ವಯ ಫಲಾನುಭವಿ ಕುಟುಂಬವು ಪತಿ, ಪತ್ನಿ, ಅವಿವಾಹಿತ ಪುತ್ರರು ಮತ್ತು/ಅಥವಾ ಅವಿವಾಹಿತ ಪುತ್ರಿಯರನ್ನು ಒಳಗೊಂಡಿರುತ್ತದೆ. ಆದಾಯ ಗಳಿಸುವ ಒಬ್ಬ ವಯಸ್ಕ ಸದಸ್ಯರನ್ನು (ವೈವಾಹಿಕ ಸ್ಥಿತಿಯನ್ನು ಲೆಕ್ಕಿಸದೆ) ಪ್ರತ್ಯೇಕ ಕುಟುಂಬವೆಂದು ಪರಿಗಣಿಸಬಹುದು, ಅವನು/

[7] ಆರು ಯೋಜನೆಗಳಲ್ಲಿ ತೆಗೆದುಹಾಕಿರುವ ವಸ್ತುಗಳನ್ನು ಗುತ್ತಿಗೆಯಲ್ಲಿ ಸೇರಿಸಿರಲಿಲ್ಲ.

ಅವಳು ಭಾರತದ ಯಾವುದೇ ಭಾಗದಲ್ಲಿ ಅವನ/ಅವಳ ಹೆಸರಿನಲ್ಲಿ ಪಕ್ಕಾ ಮನೆಯನ್ನು ಹೊಂದಿಲ್ಲದಿದ್ದರೆ. ವಿವಾಹಿತ ದಂಪತಿಗಳ ಸಂದರ್ಭದಲ್ಲಿ, ಪತಿ/ಪತ್ನಿ ಅಥವಾ ಇಬ್ಬರೂ ಒಟ್ಟಾಗಿ ಜಂಟಿ ಮಾಲೀಕತ್ವದಲ್ಲಿ ಒಂದೇ ಮನೆಗೆ ಅರ್ಹರಾಗಿರುತ್ತಾರೆ. ಪ್ರತಿ ಕುಟುಂಬಕ್ಕೆ ಒಬ್ಬರಿಗಿಂತ ಹೆಚ್ಚು ಆದಾಯ ಗಳಿಸುವ ವಯಸ್ಕ ಸದಸ್ಯರನ್ನು ಫಲಾನುಭವಿಯಾಗಿ ಆಯ್ಕೆ ಮಾಡುವ ಸಂದರ್ಭದಲ್ಲಿ, ಕುಟುಂಬದ ಮುಖ್ಯಸ್ಥರ ಅರ್ಹತೆಯ ಮಾನದಂಡಗಳನ್ನು ಲೆಕ್ಕಿಸದೆ ಅಂತಹ ಗಳಿಕೆಯ ಸದಸ್ಯರಿಗೆ ಅರ್ಹತೆಯ ಮಾನದಂಡಗಳನ್ನು ಸ್ವತಂತ್ರವಾಗಿ ಮೌಲ್ಯಮಾಪನ ಮಾಡಬೇಕಾಗುತ್ತದೆ.

1457 ಕುಟುಂಬಗಳಿಗೆ ಸಂಬಂಧಿಸಿದಂತೆ ಒಂದೇ ಕುಟುಂಬದ ಒಂದಕ್ಕಿಂತ ಹೆಚ್ಚು ಸದಸ್ಯರು ಯೋಜನೆಯಡಿಯಲ್ಲಿ ಪ್ರಯೋಜನವನ್ನು ಪಡೆದಿದ್ದಾರೆ ಎಂದು ಫಲಾನುಭವಿಗಳ ದತ್ತಾಂಶದ ವಿಶ್ಲೇಷಣೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಈ ಫಲಾನುಭವಿಗಳಿಗೆ ಮಾಡಿದ ಒಟ್ಟು ಪಾವತಿಗಳು ₹12.77 ಕೋಟಿಗಳಾಗಿದ್ದಿತು. ಈ ಸಂದರ್ಭಗಳಲ್ಲಿ, ಇತರ ಸದಸ್ಯರ ಆರ್ಥಿಕ ಅರ್ಹತೆಯ ಮಾನದಂಡಗಳನ್ನು ಸ್ವತಂತ್ರವಾಗಿ ನಿರ್ಣಯಿಸದೆ ಕುಟುಂಬದ ಮುಖ್ಯಸ್ಥರ ಅರ್ಹತೆಯ ಮಾನದಂಡಗಳ ಆಧಾರದ ಮೇಲೆ ಮನೆಯ ಇತರ ಸದಸ್ಯರಿಗೆ ಪ್ರಯೋಜನಗಳನ್ನು ಒದಗಿಸಲಾಗಿದೆ.

ಆದಾಯ ಗಳಿಸುವ ವಯಸ್ಕ ಸದಸ್ಯರನ್ನು, ಅವನು/ಅವಳು ಭಾರತದ ಯಾವುದೇ ಭಾಗದಲ್ಲಿ ಪಕ್ಕಾ ಮನೆಯನ್ನು ಹೊಂದಿರದಿದ್ದರೆ ಪ್ರತ್ಯೇಕ ಕುಟುಂಬವನ್ನಾಗಿ ಪರಿಗಣಿಸಲು ಯೋಜನಾ ಮಾರ್ಗಸೂಚಿಗಳು ಅನುಮತಿ ನೀಡಿವೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021). ಹೆಚ್ಚುವರಿ ಸದಸ್ಯರ ಆರ್ಥಿಕ ಅರ್ಹತೆಯ ಮಾನದಂಡಗಳನ್ನು ಸ್ವತಂತ್ರವಾಗಿ ಮೌಲ್ಯಮಾಪನ ಮಾಡದಿರುವ ಲೆಕ್ಕಪರಿಶೋಧನಾ ಆಕ್ಷೇಪಣೆಯನ್ನು ಉತ್ತರವು ಬಗೆಹರಿಸಲಿಲ್ಲ.

### 2.3.5 ಕುಟುಂಬದ ಮಹಿಳಾ ಮುಖ್ಯಸ್ಥರ ಹೆಸರಲ್ಲಿ ಮನೆಗಳನ್ನು ಹಂಚಿಕೆ ಮಾಡದಿರುವುದು

ಕೇಂದ್ರದ ನೆರವಿನೊಂದಿಗೆ ನಿರ್ಮಿಸಲಾದ ಮನೆಗಳು ಕುಟುಂಬದ ಮಹಿಳಾ ಮುಖ್ಯಸ್ಥರ ಹೆಸರಿನಲ್ಲಿ ಅಥವಾ ಕುಟುಂಬದ ಪುರುಷ ಮುಖ್ಯಸ್ಥರ ಮತ್ತು ಅವರ ಪತ್ನಿಯ ಜಂಟಿ ಹೆಸರಿನಲ್ಲಿ ಹಾಗೂ ವಯಸ್ಕ ಮಹಿಳೆಯಿಲ್ಲದ ಸಂದರ್ಭಗಳಲ್ಲಿ ಮಾತ್ರ ಮನೆಯು ಕುಟುಂಬದ ಪುರುಷ ಸದಸ್ಯರ ಹೆಸರಿನಲ್ಲಿರಬಹುದು ಎಂದು ಯೋಜನೆಯ ಮಾರ್ಗಸೂಚಿಗಳ ಕಂಡಿಕೆ–2.5 ನಿಗದಿಪಡಿಸುತ್ತದೆ.

ಮಾದರಿ ಯೋಜನೆಗಳ ದತ್ತಾಂಶದ ಪರಿಶೀಲನೆಯಲ್ಲಿ, ಆಯ್ಕೆಯಾದ ಫಲಾನುಭವಿಗಳಲ್ಲಿ ಶೇಕಡಾ 36ರಷ್ಟು ಕುಟುಂಬದ ಪುರುಷ ಮುಖ್ಯಸ್ಥರಾಗಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು ಮತ್ತು ಇದು ಮಾರ್ಗಸೂಚಿಗಳಿಗೆ ವಿರುದ್ಧವಾಗಿದ್ದಿತು. ರಾಜ್ಯ ಯೋಜನೆಯ ಮಾರ್ಗಸೂಚಿಗಳ ಅನ್ವಯ ಪಿಎಮ್‌ಎವೈ(ಯು) ನೊಂದಿಗೆ ಸೇರಿಕೊಂಡ ರಾಜ್ಯ ವಲಯದ ಯೋಜನೆಗಳ ಅಡಿಯಲ್ಲಿ ಮನೆಗಳನ್ನು ಕುಟುಂಬದ ಪುರುಷ ಮುಖ್ಯಸ್ಥರ ಹೆಸರಿನಲ್ಲಿ ಹಂಚಲಾಗಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಸೆಪ್ಟೆಂಬರ್ 2021).

ಪಿಎಮ್‌ಎವೈ(ಯು) ಜೊತೆಗೆ ಸೇಕೊಂಡಿರುವ ಮತ್ತು ಕೇಂದ್ರದ ನೆರವನ್ನು ಪಡೆದಿರುವ ರಾಜ್ಯ ವಲಯದ ಯೋಜನೆಗಳು ಪಿಎಮ್‌ಎವೈ(ಯು) ಅಡಿಯಲ್ಲಿ ಸೂಚಿಸಲಾದ ಮಾರ್ಗಸೂಚಿಗಳನ್ನು ಅನುಸರಿಸ ಬೇಕಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

## 2.4 ಕಾರ್ಯತಂತ್ರ ಯೋಜನೆ ಮತ್ತು ವಾರ್ಷಿಕ ಯೋಜನೆಗಳ ತಯಾರಿಕೆಯಲ್ಲಿ ವಿಳಂಬ

ಪಿಎಮ್‌ಎವೈ(ಯು) ಯೋಜನೆಯ ವಿವಿಧ ಅನುಷ್ಠಾನದ ಹಂತಗಳನ್ನು ಕೆಳಗಿನ **ನಕ್ಷೆ–2.2ರಲ್ಲಿ** ವಿವರಿಸಲಾಗಿದೆ:

**ನಕ್ಷೆ-2.2: ಪಿಎಮ್‌ಎವೈ(ಯು) ಯೋಜನೆಯ ಅನುಷ್ಠಾನ ಹಂತಗಳು**




ಬೇಡಿಕೆಯ ಸಮೀಕ್ಷೆಯನ್ನು ಪೂರ್ಣಗೊಳಿಸಿದ ನಂತರ ಯುಎಲ್‌ಬಿಯ ಮೂಲಕ ಹೆಚ್‌ಎಫ್‌ಎಪಿಒಎ ಸಿದ್ಧಪಡಿಸಬೇಕೆಂದು ಯೋಜನೆಯ ಮಾರ್ಗಸೂಚಿಗಳ ಕಂಡಿಕೆ-8.3 ನಿಗದಿಪಡಿಸುತ್ತದೆ. ಹೆಚ್‌ಎಫ್‌ಎಪಿಒಎ ಪಿಎಮ್‌ಎವೈ(ಯು)ನ ನಾಲ್ಕು ಘಟಕಗಳಲ್ಲಿ ಆಯ್ಕೆಮಾಡಿದ ಮಧ್ಯಸ್ಥಿಕೆಗಳ ಜೊತೆಗೆ ವಸತಿಯ ಬೇಡಿಕೆಯ ವಿವರಗಳನ್ನು ಹಾಗೂ ಜೊತೆಗೆ ಬೇಡಿಕೆಯನ್ನು ಪೂರೈಸಲು ನಿಧಿಯ ಅಗತ್ಯತೆಗಳನ್ನು ಒಳಗೊಂಡಿರುತ್ತದೆ. ಹೆಚ್‌ಎಫ್‌ಎಪಿಒಎನ ಆಧಾರದ ಮೇಲೆ ಯುಎಲ್‌ಬಿಗಳು ಸಂಪನ್ಮೂಲಗಳ ಲಭ್ಯತೆ ಮತ್ತು ಆದ್ಯತೆಯನ್ನು ಗಮನದಲ್ಲಿಟ್ಟುಕೊಂಡು 2015ರಿಂದ 2022ರ ವರೆಗಿನ ವರ್ಷವಾರು ಗುರಿಗಳನ್ನು ಹೊಂದಿರುವ ಎಐಪಿಗಳನ್ನು ತಯಾರಿಸಬೇಕು. ಜೂನ್ 2016 ರೊಳಗೆ ಯುಎಲ್‌ಬಿಗಳು ಬೇಡಿಕೆ ಸಮೀಕ್ಷೆ ಮತ್ತು ಹೆಚ್‌ಎಫ್‌ಎಪಿಒಎ ತಯಾರಿಕೆಯನ್ನು ಪೂರ್ಣಗೊಳಿಸಬೇಕು ಎಂದು ಸಿಎಸ್‌ಎಮ್‌ಸಿ ನಿಗದಿಪಡಿಸಿತ್ತು (ಮೇ 2016).

ಯುಎಲ್‌ಬಿಗಳು ಹೆಚ್‌ಎಫ್‌ಎಪಿಒಎ ತಯಾರಿಸದೆಯೇ 2016-2020ರ ಅವಧಿಯಲ್ಲಿ ಯೋಜನೆಗಳನ್ನು ಅನುಮೋದಿಸಿದ್ದವು ಮತ್ತು ಕಾರ್ಯಗತಗೊಳಿಸಿದ್ದವು ಎಂದು ಲೆಕ್ಕಪರಿಶೋಧನೆಯು ಗಮನಿಸಿತು. 270 ಯುಎಲ್‌ಬಿಗಳ ಹೆಚ್‌ಎಫ್‌ಎಪಿಒಎ ತಯಾರಿಸುವ ಕೆಲಸವನ್ನು ₹7.67 ಕೋಟಿ ವೆಚ್ಚದಲ್ಲಿ ಮೂರು[8] ಸಲಹಾ ಏಜೆನ್ಸಿಗಳಿಗೆ ಎಸ್‌ಎಲ್‌ಎನ್‌ಎ ವಹಿಸಿಕೊಟ್ಟಿತು (ಆಗಸ್ಟ್ 2020) ಹಾಗೂ ಆ ಕೆಲಸವು ಪೂರ್ಣಗೊಂಡು 54ನೇ ಸಿಎಸ್‌ಎಮ್‌ಸಿ ಸಭೆಯಲ್ಲಿ (ಜೂನ್ 2021) ಅನುಮೋದಿತವಾಗಿದೆ. ಎಸ್‌ಎಲ್‌ಎನ್‌ಎ ಈ ಏಜೆನ್ಸಿಗಳಿಗೆ ₹5.79 ಕೋಟಿಯ ಭಾಗಶಃ ಪಾವತಿಯನ್ನು (ಡಿಸೆಂಬರ್ 2020 ಮತ್ತು ಮೇ 2021) ಮಾಡಿತು. ಹೀಗೆ, ಬೇಡಿಕೆ ಸಮೀಕ್ಷೆಯ ಮೂಲಕ ಗುರುತಿಸಲಾದ 13.72 ಲಕ್ಷ ಫಲಾನುಭವಿಗಳಲ್ಲಿ 5.17 ಲಕ್ಷ ಫಲಾನುಭವಿಗಳಿಗೆ ವಸತಿ ಯೋಜನೆಗಳ ಅನುಮೋದನೆಯ ನಂತರ (ಮಾರ್ಚ್ 2016 ರಿಂದ ಮಾರ್ಚ್ 2021) ಹೆಚ್‌ಎಫ್‌ಎಪಿಒಎ ತಯಾರಿಕೆಯನ್ನು ಪೂರ್ಣಗೊಳಿಸಲಾಗಿದೆ.

ಕಾರ್ಯತಂತ್ರದ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಕಾರ್ಯತಂತ್ರ ಯೋಜನೆಯಾಗಿ ಕಾರ್ಯ ನಿರ್ವಹಿಸುವ ಹೆಚ್‌ಎಫ್‌ಎಪಿಒಎ ಸಾಕಷ್ಟು ಸಂಪನ್ಮೂಲಗಳ ಜೊತೆಗೆ ವಾರ್ಷಿಕ ಗುರಿಗಳು/ಗುರಿಗಳನ್ನು ಸೂಚಿಸುವ ಎಐಪಿಗಳೊಂದಿಗೆ ಪೂರಕವಾಗಿಸುವುದು ಅಗತ್ಯವಾಗಿದೆ. ಎಐಪಿಗಳನ್ನು ತಯಾರಿಸದಿರುವುದು, ಯೋಜನೆಗಳನ್ನು ಕೈಗೆತ್ತಿಕೊಳ್ಳಲು ವಾರ್ಷಿಕ ಗುರಿಗಳನ್ನು ನಿಗದಿಪಡಿಸದಿರುವುದು ಮತ್ತು ಅನುಮೋದಿತ ಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಸಮಯವನ್ನು ಸಹ ನಿಗದಿಪಡಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಯೋಜನೆಯ ಅನುಷ್ಠಾನದ ಐದು ವರ್ಷಗಳ ನಂತರ ಹೆಚ್‌ಎಫ್‌ಎಪಿಒಎ ತಯಾರಿಕೆಯು ಕೇವಲ ದಾಖಲಾತಿಗಳ ಉದ್ದೇಶವನ್ನು ಪೂರೈಸಿತು ಮತ್ತು ಯೋಜನೆಯನ್ನು ಸಮರ್ಪಕವಾಗಿ ಕಾರ್ಯಗತಗೊಳಿಸಲು ಸಹಾಯ ಮಾಡಲಿಲ್ಲ. ಹೀಗಾಗಿ ಹೆಚ್‌ಎಫ್‌ಎಪಿಒಎ ಅನಗತ್ಯವಾಗಿತ್ತು ಮತ್ತು ಅದಕ್ಕಾಗಿ ಮಾಡಿದ ₹5.79 ಕೋಟಿ ವೆಚ್ಚವು ಅದರಿಂದ ಕ್ರೋಢೀಕರಿಸಬೇಕಾದ ಪ್ರಯೋಜನಗಳಿಗೆ

[8] ಮೆ.ಎನ್‌ಸಿಪಿಎ ಇನ್‌ಫ್ರಾಸ್ಟ್ರಕ್ಚರ್ ಇಂಡಿಯಾ (ಪ್ರೈವೇಟ್) ಲಿಮಿಟೆಡ್, ಹುಡ್ಕೋ ಮತ್ತು ಎಸ್‌ಟಿಇಎಸ್‌ಎಲ್‌ಐಟಿ

ಹೋಲಿಸಿದರೆ ಅಸಮಾನವಾಗಿದೆ. ಯೋಜನೆಯಲ್ಲಿನ ಈ ನ್ಯೂನತೆಗಳು ಬೇಡಿಕೆಯ ಸಮೀಕ್ಷೆಯಲ್ಲಿ ಗುರುತಿಸಲಾದ 13.72 ಲಕ್ಷ ವಸತಿರಹಿತ ನಿರೀಕ್ಷಿತ ಫಲಾನುಭವಿಗಳಲ್ಲಿ 8.54 ಲಕ್ಷ (ಶೇಕಡಾ 62) ಫಲಾನುಭವಿಗಳಿಗೆ ಅನುಮೋದಿತ ವಸತಿ ಘಟಕಗಳನ್ನು ಪೂರ್ಣಗೊಳಿಸದಿರುವಲ್ಲಿ ಮತ್ತು ವಸತಿ ಘಟಕಗಳನ್ನು ಹಂಚಿಕೆ ಮಾಡದಿರುವಲ್ಲಿ ಪರಿಣಮಿಸಿತು (ಮಾರ್ಚ್ 2021).

ಹೆಚ್‌ಎಫ್‌ಎಪಿಓಎ ಸಲ್ಲಿಕೆಯಲ್ಲಿನ ವಿಳಂಬವನ್ನು ಸರ್ಕಾರವು ಒಪ್ಪಿಕೊಂಡಿತು (ಸೆಪ್ಟೆಂಬರ್ 2021) ಮತ್ತು ಐದು ವರ್ಷಗಳ ಅನುಷ್ಠಾನದ ನಂತರ ಕಾರ್ಯತಂತ್ರದ ಯೋಜನೆಯನ್ನು ತಯಾರಿಸಿದ್ದು ರಾಜ್ಯದಲ್ಲಿ ಕಾರ್ಯಕ್ರಮದ ಕಾರ್ಯಕ್ಷಮತೆಯನ್ನು ಪರಿಶೀಲಿಸುವ ಅವಕಾಶವನ್ನು ಒದಗಿಸಿದೆ ಹಾಗೂ ಅದು ಉಳಿದ ಅವಧಿಯಲ್ಲಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಹಾಯ ಮಾಡುತ್ತದೆ ಎಂದು ತಿಳಿಸಿತು. ಹೆಚ್‌ಎಫ್‌ಎಪಿಓಎ ಸಲ್ಲಿಸದಿದ್ದರೆ, ಆ ಉದ್ದೇಶಕ್ಕಾಗಿ ಬಿಡುಗಡೆಯಾದ ಹಣವನ್ನು ಭಾರತ ಸರ್ಕಾರಕ್ಕೆ ಬಡ್ಡಿಯೊಂದಿಗೆ ಹಿಂತಿರುಗಿಸಬೇಕಿತ್ತೆಂದೂ ಸಹ ತಿಳಿಸಲಾಯಿತು. ಯೋಜನಾ ಚಟುವಟಿಕೆಗಳನ್ನು ಪೂರ್ವಾನ್ವಯ ಮಾಡಲು ಸಾಧ್ಯವಿಲ್ಲದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ ಮತ್ತು ನಿಗದಿತ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕಾರ್ಯವಿಧಾನಗಳ ಮೂಲಕ ನಿರ್ಬಂಧಗಳು ಮತ್ತು ಸರಿಪಡಿಸುವ ಕ್ರಮಗಳನ್ನು ಗುರುತಿಸಬೇಕು. ಐದು ವರ್ಷಗಳ ನಂತರ ಹೆಚ್‌ಎಫ್‌ಎಪಿಓಎ ತಯಾರಿಸಿರುವುದು, ಆ ಉದ್ದೇಶಕ್ಕಾಗಿ ಬಿಡುಗಡೆಯಾದ ಹಣವನ್ನು ಬಳಸಿಕೊಳ್ಳಲು ಕೈಗೊಂಡ ತಾತ್ಕಾಲಿಕ ಕ್ರಮವಾಗಿದೆ ಎಂದು ಉತ್ತರವು ದೃಢಪಡಿಸುತ್ತದೆ.

## 2.5 ವಸತಿ ಕ್ಷೇತ್ರದ ಬೆಳವಣಿಗೆಗೆ ಕಡ್ಡಾಯವಾಗಿರುವ ಸುಧಾರಣೆಗಳನ್ನು ಮಾಡದಿರುವುದು

ದುರ್ಬಲ ವರ್ಗಗಳು ಸೇರಿದಂತೆ ಎಲ್ಲರಿಗೂ ವಸತಿ ಒದಗಿಸುವಲ್ಲಿ ನಗರ ಪ್ರದೇಶದಲ್ಲಿ ಭೂಮಿಯ ಲಭ್ಯತೆಯು ಬಹುದೊಡ್ಡ ತೊಡಕಾಗಿದೆ. ಈ ನಿಟ್ಟಿನಲ್ಲಿ ಆಡಳಿತಾತ್ಮಕ ಮತ್ತು ನಿಯಂತ್ರಕ ಅಡೆತಡೆಗಳನ್ನು ನಿವಾರಿಸಲು ಕೈಗೆಟುಕುವ ವಸತಿ ಸೇರಿದಂತೆ ವಸತಿ ಕ್ಷೇತ್ರದ ಬೆಳವಣಿಗೆಯನ್ನು ಸುಲಭಗೊಳಿಸಲು ಮಾರ್ಗಸೂಚಿಗಳಲ್ಲಿ ಕಡ್ಡಾಯ ಸುಧಾರಣೆಗಳನ್ನು ಸೇರಿಸಲಾಯಿತು. ಈ ನಿಟ್ಟಿನಲ್ಲಿ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯದೊಂದಿಗೆ ಪರಸ್ಪರ ಒಪ್ಪಂದ ಪತ್ರಕ್ಕೆ (ಎಮ್‌ಓಯು) ಸಹಿ ಮಾಡುವ (ಡಿಸೆಂಬರ್ 2015) ಮೂಲಕ ಮೇಲಿನ ಕಡ್ಡಾಯ ಸುಧಾರಣೆಗಳನ್ನು ಪೂರೈಸಲು ರಾಜ್ಯ ಸರ್ಕಾರವು ಒಪ್ಪಿಗೆ ನೀಡಿತ್ತು. ಅನುಷ್ಠಾನಗೊಳಿಸಬೇಕಾದ ಆರು ಸುಧಾರಣೆಗಳಲ್ಲಿ, ರಾಜ್ಯ ಸರ್ಕಾರವು **ಕೋಷ್ಟಕ–2.2**ರಲ್ಲಿ ವಿವರಿಸಿರುವ ಸುಧಾರಣೆಗಳನ್ನು ಕೈಗೊಂಡಿತು.

**ಕೋಷ್ಟಕ–2.2: ರಾಜ್ಯ ಸರ್ಕಾರವು ಕೈಗೊಂಡ ಕಡ್ಡಾಯದ ಷರತ್ತುಗಳು**

| ಕ್ರಮ ಸಂಖ್ಯೆ | ಕಡ್ಡಾಯದ ಷರತ್ತುಗಳು | ಸ್ಥಿತಿ |
|---|---|---|
| 1 | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಇಡಬ್ಲ್ಯುಎಸ್/ಎಲ್‌ಐಜಿ ವಸತಿಗಾಗಿ ಪೂರ್ವ–ಅನುಮೋದಿತ ಬಡಾವಣೆಗಳು ಮತ್ತು ಕಟ್ಟಡ ಯೋಜನೆಗಳ ಆಧಾರದ ಮೇಲೆ ಕಟ್ಟಡ ಅನುಮತಿ ಮತ್ತು ಬಡಾವಣೆ ಅನುಮೋದನೆ ನೀಡಲಾಗಿದೆ ಎನ್ನುವ ವಿಧಾನವನ್ನು ಅಳವಡಿಸಿಕೊಳ್ಳುತ್ತವೆ ಅಥವಾ ನಿರ್ದಿಷ್ಟ ನಿರ್ಮಿತ ಪ್ರದೇಶ ಅಥವಾ ನಿವೇಶನಗಳಿಗೆ ವಿನಾಯಿತಿ ನೀಡಬಹುದು. | 30x40 ಅಥವಾ ಅದಕ್ಕಿಂತ ಕಡಿಮೆ ಅಳತೆಯ ಕಡಿಮೆ ಅಪಾಯದ ಕಟ್ಟಡಕ್ಕೆ ಅನುಮತಿ ನೀಡಲಾಗಿದೆ ಎಂಬುವುದನ್ನು ಮಾದರಿ ಕಟ್ಟಡ ಬೈಲಾಗಳು 2017 ರಲ್ಲಿ ಸೇರಿಸಲಾಗಿದೆ |
| **2** | ನಗರಪ್ರದೇಶದ ಮಾಸ್ಟರ್ ಪ್ಲಾನ್‌ನಲ್ಲಿ ಗುರುತಿಸಲಾದ ವಸತಿ ವಲಯದಲ್ಲಿ ಈಗಾಗಲೇ ಭೂಮಿಯಿದ್ದರೆ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಪ್ರತ್ಯೇಕ ಕೃಷಿಯೇತರ ಅನುಮತಿಯ ಅಗತ್ಯವನ್ನು ನಿವಾರಿಸುವ ಕಾರ್ಯವಿಧಾನ ಮತ್ತು ನಿಯಮಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವುದು. | ಈ ನಿಟ್ಟಿನಲ್ಲಿ ಸರ್ಕಾರೀ ಆದೇಶವನ್ನು ಹೊರಡಿಸಲಾಗಿದೆ (ಆಗಸ್ಟ್ 2014) |

ಆಧಾರ: ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ

ಆದಾಗ್ಯೂ, ಮಾರ್ಗಸೂಚಿಗಳಲ್ಲಿ ಸೂಚಿಸಲಾದ ಈ ಕೆಳಗಿನ ಕಡ್ಡಾಯ ಷರತ್ತುಗಳನ್ನು ರಾಜ್ಯ ಸರ್ಕಾರವು ಇನ್ನೂ (ಸೆಪ್ಟೆಂಬರ್ 2021) ಪೂರ್ಣಗೊಳಿಸಬೇಕಿದೆ. ಕಡ್ಡಾಯ ಷರತ್ತುಗಳ ಅನುಸರಣೆಯ ಸ್ಥಿತಿಯನ್ನು ಕೋಷ್ಟಕ–2.3ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ–2.3: ರಾಜ್ಯ ಸರ್ಕಾರವು ಇನ್ನೂ ಪೂರ್ಣಗೊಳಿಸಬೇಕಿರುವ ಕಡ್ಡಾಯ ಷರತ್ತುಗಳು**

| ಕ್ರಮ ಸಂಖ್ಯೆ | ಕಡ್ಡಾಯ ಷರತ್ತುಗಳು | ಸ್ಥಿತಿ |
|---|---|---|
| 1 | ಬಡಾವಣೆಗಳ ಅನುಮೋದನೆ ಮತ್ತು ಕಟ್ಟಡದ ಅನುಮತಿಗಳಿಗೆ ಯುಎಲ್‌ಬಿ ಮಟ್ಟದಲ್ಲಿ ಏಕಗವಾಕ್ಷಿ ಮತ್ತು ಕಾಲಮಿತಿಯಲ್ಲಿ ತಿರುವಳಿಯನ್ನು ಖಚಿತಪಡಿಸಿಕೊಳ್ಳಲು ವ್ಯವಸ್ಥೆಯೊಂದನ್ನು ಜಾರಿಗೆ ತರಬೇಕು. | ಅನುಸರಣೆ ಮಾಡಿಲ್ಲ |
| 2 | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಕೈಗೆಟಕುವ ದರದ ವಸತಿಗಾಗಿ ಭೂಮಿಯನ್ನು ಮೀಸಲಿಡಲು ತಮ್ಮ ಮಾಸ್ಟರ್ ಪ್ಲಾನ್‌ಗಳನ್ನು ಸಿದ್ಧಪಡಿಸಬೇಕು/ತಿದ್ದುಪಡಿ ಮಾಡಬೇಕು. | ಈ ಸಂಬಂಧ ರಾಜ್ಯವು ಹೊರಡಿಸಿದ ಅಧಿಸೂಚನೆಗೆ (ಜನವರಿ 2015) ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯವು (ಮಾರ್ಚ್ 2015) ಖಾಸಗಿ ಡೆವಲಪರ್‌ಗಳು ಸಲ್ಲಿಸಿದ ರಿಟ್ ಅರ್ಜಿಗಳಿಂದ ತಡೆಯಾಜ್ಞೆ ನೀಡಿತು. ತಡೆಯಾಜ್ಞೆಯನ್ನು ಇನ್ನೂ ತೆಗೆದುಹಾಕಲಾಗಿಲ್ಲ (ಸೆಪ್ಟೆಂಬರ್ 2021) |
| 3 | ಎಮ್‌ಒಹೆಚ್‌ಯುಎ ಸಿದ್ಧಪಡಿಸಿದ (ಜೂನ್ 2021) ಮಾದರಿ ಬಾಡಿಗೆ ಅಧಿನಿಯಮ ಮಾದರಿಯಲ್ಲಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಅಸ್ತಿತ್ವದಲ್ಲಿರುವ ಬಾಡಿಗೆ ಕಾನೂನುಗಳನ್ನು ತಿದ್ದುಪಡಿ ಮಾಡಬೇಕು | ರಾಜ್ಯ ಸರ್ಕಾರವು ಬಾಡಿಗೆ ಕಾನೂನುಗಳನ್ನು ಭಾರತ ಸರ್ಕಾರದ ಮಾದರಿ ಬಾಡಿಗೆ ಅಧಿನಿಯಮದ ಮಾದರಿಯಲ್ಲಿ ತಿದ್ದುಪಡಿ ಮಾಡಬೇಕು. |
| 4 | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಹೆಚ್ಚುವರಿ ಎಫ್‌ಎಆರ್/ ಎಫ್‌ಎಸ್‌ಐ/ಟಿಡಿಆರ್ ಅನ್ನು ಒದಗಿಸಬೇಕು ಮತ್ತು ಅಗತ್ಯವಿದ್ದರೆ ಕೊಳೆಗೇರಿ ಪುನರಾಭಿವೃದ್ಧಿ ಮತ್ತು ಕಡಿಮೆ–ವೆಚ್ಚದ ವಸತಿಗಾಗಿ ಸಾಂದ್ರತೆಯ ಮಾನದಂಡಗಳನ್ನು ಸಡಿಲಗೊಳಿಸಬೇಕು. | ಅನುಸರಣೆ ಮಾಡಿಲ್ಲ |

ಆಧಾರ: ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ

ಯೋಜನೆಯಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಉತ್ತೇಜಿಸಲು ನಿಗದಿತ ಸುಧಾರಣೆಗಳನ್ನು ಕಲ್ಪಿಸಲಾಗಿದೆ ಮತ್ತು ಈ ನಿಟ್ಟಿನಲ್ಲಿ ನಿಧಾನಗತಿಯ ಪ್ರಗತಿಯು, ಯೋಜನೆಯಡಿಯಲ್ಲಿ ಕಲ್ಪಿಸಲಾದ ಖಾಸಗಿ ಸಹಭಾಗಿತ್ವದೊಂದಿಗಿನ ಐಎಸ್‌ಎಸ್‌ಆರ್ ಮತ್ತು ಎಹೆಚ್‌ಪಿ ಘಟಕಗಳನ್ನು ಅನುಷ್ಠಾನ ಗೊಳಿಸದಿರುವಲ್ಲಿ ಪರಿಣಮಿಸಿತು. ಹೀಗೆ, ಮಾರ್ಗಸೂಚಿಗಳಲ್ಲಿ ಕಲ್ಪಿಸಿದಂತೆ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಅಗತ್ಯವಾದ ನಿಯಂತ್ರಣ ಮತ್ತು ಕಾನೂನು ಚೌಕಟ್ಟನ್ನು ರಚಿಸಲು ರಾಜ್ಯ ಸರ್ಕಾರವು ವಿಫಲವಾಯಿತು.

ಭಾರತ ಸರ್ಕಾರದ ಮೂರನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಕಡ್ಡಾಯದ ಷರತ್ತುಗಳನ್ನು ಅನುಸರಣೆ ಮಾಡುವುದು ಅತ್ಯಗತ್ಯವಾಗಿದೆ ಮತ್ತು ಗರಿಷ್ಠ ಪ್ರಮಾಣದಲ್ಲಿ ಪೂರ್ಣಗೊಳಿಸಲಾಗುವುದು ಎಂದು ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021). ಆದಾಗ್ಯೂ, ಕಡ್ಡಾಯದ ಸುಧಾರಣೆಗಳನ್ನು ಪೂರ್ಣಗೊಳಿಸಲು ಯಾವುದೇ ಕ್ರಿಯಾ ಯೋಜನೆ ಅಥವಾ ಸಮಯದ ಚೌಕಟ್ಟನ್ನು ಉತ್ತರದಲ್ಲಿ ಉಲ್ಲೇಖಿಸಿಲ್ಲ.

# ಅಧ್ಯಾಯ–III

# ಪಾಲುದಾರಿಕೆಯಲ್ಲಿ ಕೈಗೆಟುಕುವ ವಸತಿ

## 3.1 ಪರಿಚಯ

ಎಹೆಚ್‌ಪಿ ಘಟಕದಡಿಯಲ್ಲಿ ರಾಜ್ಯ ಸರ್ಕಾರಗಳು ತಮ್ಮ ಏಜೆನ್ಸಿಗಳ ಮೂಲಕ ಅಥವಾ ಖಾಸಗಿ ವಲಯದ ಸಹಭಾಗಿತ್ವದಲ್ಲಿ ಕೈಗೆಟುಕುವ ವಸತಿ ಯೋಜನೆಗಳನ್ನು ಕೈಗೊಳ್ಳಬೇಕಿತ್ತು. ಇಂತಹ ಯೋಜನೆಗಳಿಗೆ ಭಾರತ ಸರ್ಕಾರ ಪ್ರತಿ ಇಡಬ್ಲ್ಯುಎಸ್ ಮನೆಗೆ ₹1.50 ಲಕ್ಷವನ್ನು ಒದಗಿಸಿದರೆ ಕರ್ನಾಟಕ ಸರ್ಕಾರವು ಸಾಮಾನ್ಯ ಮತ್ತು ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಪ್ರತಿ ಇಡಬ್ಲ್ಯುಎಸ್ ಮನೆಗೆ ಕ್ರಮವಾಗಿ ₹1.2 ಲಕ್ಷ ಮತ್ತು ₹2.00 ಲಕ್ಷಗಳ ವಂತಿಗೆ ನೀಡುತ್ತದೆ. ನಾಗರಿಕ ಮೂಲಸೌಕರ್ಯದ ವೆಚ್ಚವನ್ನು ನಗರ ಸ್ಥಳೀಯ ಸಂಸ್ಥೆಗಳು (ಯುಎಲಬಿಗಳು) ಭರಿಸಿದರೆ ಘಟಕದ ಉಳಿದ ವೆಚ್ಚವನ್ನು ಫಲಾನುಭವಿಗಳು ಭರಿಸಬೇಕಿತ್ತು.

2015–21ರಲ್ಲಿ 300 ಎಹೆಚ್‌ಪಿ ಯೋಜನೆಗಳಡಿಯಲ್ಲಿ ಅನುಮೋದಿಸಲಾದ 3,04,611 ವಸತಿ ಘಟಕಗಳಲ್ಲಿ ಕೇವಲ 21,837 (ಶೇಕಡಾ ಏಳು) ವಸತಿ ಘಟಕಗಳು ಪೂರ್ಣಗೊಂಡಿವೆ ಮತ್ತು 2,29,774 ವಸತಿ ಘಟಕಗಳು (ಶೇಕಡಾ 75) ಮಾರ್ಚ್ 2021ರಲ್ಲಿದ್ದಂತೆ ಇನ್ನೂ ಪ್ರಾರಂಭವಾಗಬೇಕಿದೆ. ಕಳಪೆ ಪ್ರಗತಿಗಾಗಿ ಕಾರಣಗಳನ್ನು ಕೆಳಗೆ ನೀಡಲಾಗಿದೆ:

## 3.2 ಆರ್ಥಿಕ ಸಂಪನ್ಮೂಲಗಳಲ್ಲಿ ಕೊರತೆ

ಮಾರ್ಚ್ 2021ರಲ್ಲಿದ್ದಂತೆ ಸಿಎಸ್‌ಎಮ್‌ಸಿ 300 ಎಹೆಚ್‌ಪಿ ಯೋಜನೆಗಳಡಿಯಲ್ಲಿ 3.05 ಲಕ್ಷ ವಸತಿ ಘಟಕಗಳನ್ನು ₹18091.92 ಕೋಟಿ ಒಟ್ಟು ವೆಚ್ಚದಲ್ಲಿ ಅನುಮೋದಿಸಿತು. ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಫಲಾನುಭವಿಗಳ ನಡುವೆ ಯೋಜನಾ ನಿಧಿಗಳ ಹಂಚಿಕೆಯನ್ನು ಕೆಳಗಿನ **ಕೋಷ್ಟಕ–3.1**ರಲ್ಲಿ ನೀಡಲಾಗಿದೆ:

**ಕೋಷ್ಟಕ– 3.1: ಎಹೆಚ್‌ಪಿ ಯೋಜನೆಗಳ ಯೋಜನಾ ವೆಚ್ಚದ ಹಂಚಿಕೆ**

**(₹ಕೋಟಿಗಳಲ್ಲಿ)**

| ವರ್ಷ | ಒಟ್ಟು ಹಂಚಿಕೆ | ಭಾರತ ಸರ್ಕಾರದ ಪಾಲು | ಒಟ್ಟು ಹಂಚಿಕೆಗೆ ಶೇಕಡಾವಾರು | ಭಾರತ ಸರ್ಕಾರದ ಪಾಲು | ಒಟ್ಟು ಹಂಚಿಕೆಗೆ ಶೇಕಡಾವಾರು | ಯುಎಲ್‌ಬಿ ಪಾಲು | ಒಟ್ಟು ಹಂಚಿಕೆಗೆ ಶೇಕಡಾವಾರು | ಫಲಾನುಭವಿ ಪಾಲು | ಒಟ್ಟು ಹಂಚಿಕೆಗೆ ಶೇಕಡಾವಾರು |
|---|---|---|---|---|---|---|---|---|---|
| 2015–16 | 676.18 | 187.26 | 28 | 220.18 | 33 | 207.52 | 31 | 61.23 | 9 |
| 2016–17 | 911.65 | 264.89 | 29 | 271.23 | 30 | 155.65 | 17 | 219.89 | 24 |
| 2017–18 | 10581.79 | 2754.90 | 26 | 2734.47 | 26 | 454.88 | 4 | 4637.53 | 44 |
| 2018–19 | 5460.07 | 1252.34 | 23 | 1542.74 | 28 | 85.87 | 2 | 2579.12 | 47 |
| 2019–20 | 141.39 | 30.74 | 22 | 36.63 | 26 | 19.72 | 14 | 54.30 | 38 |
| 2020–21 | 320.84 | 70.26 | 22 | 69.30 | 22 | 37.04 | 12 | 144.33 | 45 |
| **ಒಟ್ಟು** | **18091.92** | **4560.37** | **25** | **4874.56** | **27** | **960.67** | **5** | **7696.40** | **43** |

ಆಧಾರ: ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ

ಮೇಲಿನ ಹಂಚಿಕೆಗೆ ಪ್ರತಿಯಾಗಿ, ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಪಾಲು ಬಿಡುಗಡೆಯಾಗಿದೆ ಮತ್ತು ವರ್ಷವಾರು ಮಾಡಿದ ವೆಚ್ಚವನ್ನು **ಕೋಷ್ಟಕ 3.2** ರಲ್ಲಿ ಸೇರಿಸಲಾಗಿದೆ.

**ಕೋಷ್ಟಕ 3.2: ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಎಹಚ್ ಪಿ ಘಟಕದಡಿಯಲ್ಲಿಯಾದ ಬಿಡುಗಡೆ ಮತ್ತು ವೆಚ್ಚ.**

**(₹ ಕೋಟಿಗಳಲ್ಲಿ)**

| ವರ್ಷ | ಬಿಡುಗಡೆಯಾದ ಅನುದಾನ | | | ಮಾಡಲಾದ ವೆಚ್ಚ | | |
|---|---|---|---|---|---|---|
| | ಭಾರತ ಸರ್ಕಾರದ ಪಾಲು | ರಾಜ್ಯ ಸರ್ಕಾರದ ಪಾಲು | ಒಟ್ಟು | ಭಾರತ ಸರ್ಕಾರದ ಪಾಲು | ರಾಜ್ಯ ಸರ್ಕಾರದ ಪಾಲು | ಒಟ್ಟು |
| 2015–16 | --- | --- | --- | --- | --- | --- |
| 2016–17 | 179.36 | --- | 179.36 | 87.67 | --- | 87.67 |
| 2017–18 | 1140.61 | 66.49 | 1207.10 | 10.89 | 66.49 | 77.38 |
| 2018–19 | 58.08 | 66.83 | 124.91 | 601.52 | 66.83 | 668.35 |
| 2019–20 | --- | 535.48 | 535.48 | 223.53 | 535.48 | 759.01 |
| 2020–21 | --- | 448.20 | 448.20 | 297.90 | 448.20 | 746.10 |
| **ಒಟ್ಟು** | **1378.05** | **1117.00** | **2494.05** | **1221.51** | **1117.00** | **2338.51** |

ಆಧಾರ: ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ

**ಕೋಷ್ಟಕಗಳು 3.1** ಮತ್ತು **3.2** ರಿಂದ ಗಮನಿಸಿದಂತೆ, 31 ಮಾರ್ಚ್ 2021 ರಂತೆ ₹9434.93 ಕೋಟಿ ಅನುಮೋದಿತ ಹಣದಲ್ಲಿ ₹2494.05 ಕೋಟಿಗಳು (ಶೇಕಡ 26) ಮಾತ್ರ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ. ಎಹೆಚ್‌ಪಿ ಘಟಕಗಳಡಿಯಲ್ಲಿ ಅನುಮೋದಿಸಲಾದ ಯೋಜನೆಗಳಿಗೆ ₹2338.51 ಕೋಟಿ ವೆಚ್ಚಯಾಗಿದು. ಇದು ಒಟ್ಟು ಹಂಚಿಕೆಗೆ (₹18091.92 ಕೋಟಿ) ಶೇಕಡ 12 ರಷ್ಟಿತ್ತು. ಯೋಜನೆಡಿಯಲ್ಲಿ ಫಲಾನುಭವಿ/ಯುಎಲ್‌ಬಿಯ ಕೊಡುಗೆ ಸಂಗ್ರಹಣೆಯಲ್ಲಿನ ಮತ್ತು ಅನುದಾನ ಬಿಡುಗಡೆಯಲ್ಲಿನ ಕೊರತೆಗಳನ್ನು ಕೆಳಗೆ ವಿವರಿಸಲಾಗಿದೆ

### 3.2.1 ನಿಗದಿತ ಷರತ್ತುಗಳನ್ನು ಪೂರೈಸದ ಕಾರಣ ಕೇಂದ್ರದ ನೆರವನ್ನು ತಡೆಹಿಡಿಯಲಾಗಿದೆ

ಅನುಮೋದಿತ 300 ಎಹೆಚ್‌ಪಿ ಯೋಜನೆಗಳಿಗೆ ಭಾರತ ಸರ್ಕಾರದ ಪಾಲು ₹4560.37 ಕೋಟಿಯಾಗಿದ್ದಿತು. ಸಿಎಸ್‌ಎಮ್‌ಸಿಯ ಅನುಮೋದನೆಯ ನಂತರ ರಾಜ್ಯಗಳಿಗೆ ವಿವಿಧ ಘಟಕಗಳ ಅಡಿಯಲ್ಲಿ ಕೇಂದ್ರದ ನೆರವನ್ನು ಶೇಕಡಾ 40, ಶೇಕಡಾ 40 ಮತ್ತು ಶೇಕಡಾ 20ರ ಮೂರು ಕಂತುಗಳಲ್ಲಿ ಬಿಡುಗಡೆ ಮಾಡಬೇಕೆಂದು ಪಿಎಂಎವೈ(ಯು) ಮಾರ್ಗಸೂಚಿಗಳು ನಿಗದಿಪಡಿಸಿದ್ದವು. ಯೋಜನೆಗಳ ಅನುಮೋದನೆಯ ಸಮಯದಲ್ಲಿ ಕಂತುಗಳನ್ನು ಬಿಡುಗಡೆ ಮಾಡಲು ಸಿಎಸ್‌ಎಮ್‌ಸಿ, ಕೆಳಗೆ ತಿಳಿಸಿರುವ ಕೆಲವು ಹೆಚ್ಚುವರಿ ಷರತ್ತುಗಳನ್ನು ನಿಗದಿಪಡಿಸಿತ್ತು:

- ರಾಜ್ಯ ಸರ್ಕಾರವು ಪ್ರಮಾಣೀಕರಿಸಿ ಪಿಎಮ್‌ಎವೈ ಎಮ್‌ಐಎಸ್‌ನಲ್ಲಿ ಅಪ್‌ಲೋಡ್ ಮಾಡಿದ ಆಧಾರ್ ಲಿಂಕ್ ಮಾಡಿದ ಫಲಾನುಭವಿಗಳ ಪಟ್ಟಿಯನ್ನು ಸ್ವೀಕರಿಸಿದ ನಂತರವೇ ಎಹೆಚ್‌ಪಿಯ ಎರಡನೇ ಕಂತನ್ನು ಬಿಡುಗಡೆ ಮಾಡಬೇಕು (ದಿನಾಂಕ 11 ಆಗಸ್ಟ್ 2016ರ 11ನೇ ಸಿಎಸ್‌ಎಮ್‌ಸಿ ಸಭೆ)
- ಮೇಲಿನವುಗಳನ್ನು ಹೊರತುಪಡಿಸಿ, 27ನೇ, 37ನೇ, 40ನೇ, 41ನೇ, 43ನೇ, 49ನೇ ಮತ್ತು 50ನೇ ಸಭೆಗಳಲ್ಲಿ ಅನುಮೋದಿಸಲಾದ 169 ಎಹೆಚ್‌ಪಿ ಯೋಜನೆಗಳಿಗೆ, ಮೊದಲ ಕಂತಿನ ಬಿಡುಗಡೆಗಾಗಿ ಸಿಎಸ್‌ಎಮ್‌ಸಿ ನಿರ್ದಿಷ್ಟ ಷರತ್ತುಗಳನ್ನು ನಿಗದಿಪಡಿಸಿತ್ತು (ವಿವರಗಳು **ಅನುಬಂಧ 3.1–ರಲ್ಲಿ**).

ಸಿಎಸ್‌ಎಮ್‌ಸಿ ನಿಗದಿಪಡಿಸಿದ ಷರತ್ತುಗಳ ಅನುಸರಣೆಯನ್ನು ಲೆಕ್ಕಪರಿಶೋಧನೆಯು ಪರಿಶೀಲಿಸಿತು ಮತ್ತು ಕೆಳಗಿನವುಗಳನ್ನು ಗಮನಿಸಿತು:

- 21 ಎಹೆಚ್‌ಪಿ ಯೋಜನೆಗಳ 14,265 ಫಲಾನುಭವಿಗಳಿಗೆ ಸಂಬಂಧಿಸಿದಂತೆ ಬಿಡುಗಡೆಯಾದ ಮೊದಲ ಕಂತಿಗೆ ಎಸ್‌ಎಲ್‌ಎನ್‌ಎ ಸಿಎಸ್‌ಎಮ್‌ಸಿಗೆ ಬಳಕೆ ಪ್ರಮಾಣಪತ್ರಗಳನ್ನು ಸಲ್ಲಿಸಿತು. ಆದರೆ, ಮೇಲಿನ 14,265 ಫಲಾನುಭವಿಗಳಲ್ಲಿ ಕೇವಲ 9366 ಫಲಾನುಭವಿಗಳನ್ನು ಮಾತ್ರ ಪಿಎಮ್‌ಎವೈ ಎಮ್‌ಐಎಸ್‌ನಲ್ಲಿ ಆಧಾರ್ ಲಿಂಕ್ ಮಾಡಲಾಗಿತ್ತು (ಮಾರ್ಚ್ 2021). ತತ್ಪರಿಣಾಮವಾಗಿ, ಈ ಯೋಜನೆಗಳಿಗೆ ಎರಡನೇ ಕಂತಿನ ₹277.44 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಲಿಲ್ಲ.
- 169 ಯೋಜನೆಗಳಿಗೆ ಸಿಎಸ್‌ಎಮ್‌ಸಿ ಸೂಚಿಸಿದ ಯೋಜನೆಗಳ ಗ್ರೌಂಡಿಂಗ್, ಯೋಜನೆಗಳಿಗೆ ಭೂಮಿ ಗುರುತಿಸುವಿಕೆ, ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಡಿಯಲ್ಲಿ ಯೋಜನೆಗಳ ನೋಂದಣಿ ಮುಂತಾದ ನಿರ್ದಿಷ್ಟ ಷರತ್ತುಗಳನ್ನು ಇನ್ನೂ ಪೂರೈಸಲಾಗಿಲ್ಲ (ವಿವರಗಳು **ಅನುಬಂಧ–3.1**ರಲ್ಲಿ). ಅನುಸರಣೆ ಮಾಡದ ಕಾರಣ, ಭಾರತ ಸರ್ಕಾರ ಈ 169 ಯೋಜನೆಗಳಿಗೆ ತನ್ನ ಪಾಲಿನ ಮೊದಲ ಕಂತಿನ ₹726.11 ಕೋಟಿ ಬಿಡುಗಡೆಯನ್ನು ತಡೆಹಿಡಿದಿತ್ತು.

ಹೀಗೆ, ಸಿಎಸ್‌ಎಮ್‌ಸಿ ನಿಗದಿಪಡಿಸಿದ ಷರತ್ತುಗಳನ್ನು ಪೂರೈಸದಿದ್ದುದು ₹1003.55 ಕೋಟಿ (ಮೊದಲ ಕಂತು ₹726.11 ಕೋಟಿ ಮತ್ತು ಎರಡನೇ ಕಂತು ₹277.44 ಕೋಟಿ) ಕೇಂದ್ರದ ನೆರವನ್ನು ತಡೆಹಿಡಿಯುವಲ್ಲಿ ಪರಿಣಮಿಸಿತು.

ಫಲಾನುಭವಿಗಳು ತಮ್ಮ ಪಾಲನ್ನು ಪಾವತಿಸದ ಕಾರಣ ಆಧಾರ್ ಲಿಂಕಿಂಗ್ ಮತ್ತು ಜೋಡಣೆಯಲ್ಲಿ ವಿಳಂಬವಾಗಿದೆ ಮತ್ತು ಫಲಾನುಭವಿಗಳ ಪಾಲನ್ನು ಸಂಗ್ರಹಿಸುವುದನ್ನು ಖಚಿತಪಡಿಸಿಕೊಂಡ ನಂತರವೇ ಫಲಾನುಭವಿಗಳನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021).

ಫಲಾನುಭವಿಗಳ ಪಾಲನ್ನು ಸಂಗ್ರಹಿಸುವ ಮೊದಲು ಅನುಷ್ಠಾನ ಸಂಸ್ಥೆಗಳು ಫಲಾನುಭವಿಗಳನ್ನು ಅನುಮೋದಿಸಬೇಕಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಅಂತಹ ಅನುಮೋದಿತ ಫಲಾನುಭವಿಗಳಿಗೆ ಮಾತ್ರ ಆಧಾರ್ ಲಿಂಕಿಂಗ್ ಮಾಡಬೇಕಿತ್ತು. 169 ಯೋಜನೆಗಳಿಗೆ ಸೂಚಿಸಲಾದ ನಿರ್ದಿಷ್ಟ ಷರತ್ತುಗಳ ಅನುಸರಣೆಗೆ ಸಂಬಂಧಿಸಿದಂತೆ ಉತ್ತರವು ಮೌನವಾಗಿದೆ.

### 3.2.2 ಯುಎಲ್‌ಬಿ ಪಾಲು ಮತ್ತು ಎಹೆಚ್‌ಪಿ ಯೋಜನೆಗಳಿಗೆ ಸಂಬಂಧಿಸಿದಂತೆ ಫಲಾನುಭವಿ ಪಾಲನ್ನು ಖಚಿತಪಡಿಸಿಕೊಳ್ಳದೇ ಯೋಜನೆಗಳ ಅನುಮೋದನೆ

ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ಮಾರ್ಚ್ 2021 ರಲ್ಲಿದ್ದಂತೆ ಫಲಾನುಭವಿಗಳ ಪಾಲು ಮತ್ತು ಯುಎಲ್‌ಬಿ ವಂತಿಗೆ ಸಂಗ್ರಹಣೆಯಲ್ಲಿ ಕೊರತೆಯಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು:

**ಕೋಷ್ಟಕ–3.3: 31 ಮಾರ್ಚ್ 2021ರಲ್ಲಿದ್ದಂತೆ ಸಂಗ್ರಹಿಸಿರುವ ಫಲಾನುಭವಿ ಮತ್ತು ಯುಎಲ್‌ಬಿಗಳ ಪಾಲಿನ ವಿವರಗಳು**

**(₹ ಕೋಟಿಗಳಲ್ಲಿ)**

| ಅನುಮೋದಿತ ಫಲಾನುಭವಿ ಪಾಲು | ಅನುಮೋದಿತ ಯುಎಲ್‌ಬಿ ಪಾಲು | ಸಂಗ್ರಹಿಸಿದ ಫಲಾನುಭವಿ ಪಾಲು (ಶೇಕಡಾ) | ಸಂಗ್ರಹಿಸಿದ ಯುಎಲ್‌ಬಿ ಪಾಲು (ಶೇಕಡಾ) |
|---|---|---|---|
| 7696.40 | 960.67 | 165.65 (2) | 130.64 (14) |

**ಆಧಾರ : ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ**

ಎಹೆಚ್‌ಪಿ ಯೋಜನೆಗಳ ವೆಚ್ಚದಲ್ಲಿ ಫಲಾನುಭವಿಯ ಪಾಲು ಶೇಕಡಾ 43ರಷ್ಟಿತ್ತು. ಸಿಎಸ್‌ಎಮ್‌ಸಿ ತನ್ನ 11ನೇ ಸಭೆಯಲ್ಲಿ (ಆಗಸ್ಟ್ 2016) ಫಲಾನುಭವಿ ಪಾಲಿನ ವಂತಿಗೆಗೆ ಸಂಬಂಧಿಸಿದಂತೆ ಫಲಾನುಭವಿಗಳ ಲಿಖಿತ ಒಪ್ಪಿಗೆಯನ್ನು ರಾಜ್ಯವು ತೆಗೆದುಕೊಳ್ಳಬೇಕು ಎಂದು ಷರತ್ತು ವಿಧಿಸಿತ್ತು. ಆದರೆ, ಯೋಜನೆಗಳನ್ನು

ರೂಪಿಸುವಾಗ ಫಲಾನುಭವಿಗಳ ಕೊಡುಗೆ ಸಾಮರ್ಥ್ಯವನ್ನು ಪರಿಗಣಿಸಲಿಲ್ಲ ಮತ್ತು ಯೋಜನೆಗಳ ಅನುಮೋದನೆಗೆ ಮೊದಲೇ ಫಲಾನುಭವಿಗಳಿಂದ ಲಿಖಿತ ಒಪ್ಪಿಗೆಯನ್ನು ಪಡೆದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತತ್ಪರಿಣಾಮವಾಗಿ 300 ಎಹೆಚ್‌ಪಿ ಯೋಜನೆಗಳಿಗೆ ಫಲಾನುಭವಿಗಳಿಂದ ಅನುಮೋದಿತ ಗುರಿಯಾದ ₹7696.40 ಕೋಟಿಗೆ ಪ್ರತಿಯಾಗಿ ಅನುಷ್ಠಾನ ಸಂಸ್ಥೆಗಳು ಕೇವಲ ₹165.65 ಕೋಟಿಯನ್ನು (ಶೇಕಡಾ 2) ಸಂಗ್ರಹಿಸಲು ಸಾಧ್ಯವಾಯಿತು. 36 ಆಯ್ದ ಎಹೆಚ್‌ಪಿ ಯೋಜನೆಗಳಲ್ಲಿ, ಫಲಾನುಭವಿಗಳು ತಮ್ಮ ಪಾಲಿನ ವಂತಿಗೆಯನ್ನು ನೀಡದಿದ್ದುದರಿಂದ 20423ರಲ್ಲಿ 7455 ವಸತಿ ಘಟಕಗಳಲ್ಲಿ (ಶೇಕಡಾ 37) ಕಾಮಗಾರಿಗಳು ಪ್ರಾರಂಭವಾಗಿರಲಿಲ್ಲ (ಮಾರ್ಚ್ 2021) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ವಿವರಗಳು **ಅನುಬಂಧ–3.2ರಲ್ಲಿ**).

ವಸತಿ ಯೋಜನೆಗಳಿಗೆ ನಾಗರಿಕ ಮೂಲಸೌಕರ್ಯಗಳನ್ನು ಒದಗಿಸಲು ನಗರ ಸ್ಥಳೀಯ ಸಂಸ್ಥೆಗಳ ಪಾಲು ಎಹೆಚ್‌ಪಿ ಯೋಜನೆಗಳ ವೆಚ್ಚದ ಶೇಕಡಾ 5ರಷ್ಟಿತ್ತು. ಯುಎಲ್‌ಬಿ ಯೋಜನೆಗೆ ತಮ್ಮ ಪಾಲನ್ನು ನೀಡಿರುವುದನ್ನು ಖಚಿತಪಡಿಸಿಕೊಳ್ಳದೇ ಎಹೆಚ್‌ಪಿ ಯೋಜನೆ ಪ್ರಸ್ತಾವನೆಗಳನ್ನು ಅನುಮೋದಿಸಲಾಗಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಎಹೆಚ್‌ಪಿ ಯೋಜನೆಗಳಿಗೆ ನಗರ ಸ್ಥಳೀಯ ಸಂಸ್ಥೆಗಳ ಪಾಲಿನ ₹960.67 ಕೋಟಿಯಲ್ಲಿ, ಮಾರ್ಚ್ 2021 ರಲ್ಲಿದ್ದಂತೆ ಕೇವಲ ₹130.64 ಕೋಟಿಗಳನ್ನು (ಶೇಕಡಾ 14) ಸ್ವೀಕರಿಸಲಾಗಿದೆ. ಎಸ್‌ಎಲ್‌ಎಸ್‌ಎಮ್‌ಸಿ ತನ್ನ 24ನೇ ಸಭೆಯಲ್ಲಿ (ಸೆಪ್ಟೆಂಬರ್ 2020) ನಗರ ಸ್ಥಳೀಯ ಸಂಸ್ಥೆಗಳು ಆದಾಯದ ಪ್ರಮುಖ ಕೊರತೆಗಳನ್ನು ಅನುಭವಿಸುತ್ತಿವೆ ಎಂದು ಒಪ್ಪಿಕೊಂಡಿತು ಮತ್ತು ಆ ಕಾರಣದಿಂದ ಸಮಯಕ್ಕೆ ಸರಿಯಾಗಿ ತಮ್ಮ ಪಾಲನ್ನು ನೀಡಲು ಸಾಧ್ಯವಾಗುತ್ತಿಲ್ಲ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪಾಲನ್ನು ಪೂರೈಸಲು ರಾಜ್ಯ ಹಣಕಾಸು ಆಯೋಗದ ಅನುದಾನದ ಮೂಲದಿಂದ ಮಾರ್ಗಪಲ್ಲಟ ಮಾಡಲು ಸೂಚಿಸಿತು. ಆದಾಗ್ಯೂ, ಈ ನಿಟ್ಟಿನಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಂಡಿರಲಿಲ್ಲ (ಸೆಪ್ಟೆಂಬರ್ 2021).

ಫಲಾನುಭವಿಗಳ ವಂತಿಗೆ ಮತ್ತು ಸ್ಥಳೀಯ ಸಂಸ್ಥೆಗಳ ಪಾಲನ್ನು ಸಂಗ್ರಹಿಸದ ಕಾರಣ, ಯೋಜನೆಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ₹18091.92 ಕೋಟಿಯಲ್ಲಿ ₹8360.78 ಕೋಟಿಯಷ್ಟು (ಶೇಕಡಾ 46) ಆರ್ಥಿಕ ಸಂಪನ್ಮೂಲಗಳ ಕೊರತೆಯಿದ್ದಿತು (ಮಾರ್ಚ್ 2021). ಸೆಪ್ಟೆಂಬರ್ 2016ರಿಂದ ನವೆಂಬರ್ 2019ರ ಅವಧಿಯಲ್ಲಿ ಭಾರತ ಸರ್ಕಾರದಿಂದ ಅನುಮೋದಿಸಲಾದ 8728 ವಸತಿ ಘಟಕಗಳ ನಿರ್ಮಾಣವನ್ನು ಒಳಗೊಂಡಿರುವ 10 ಯೋಜನೆಗಳನ್ನು[9] ಫಲಾನುಭವಿಗಳ ವಂತಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪಾಲನ್ನು ಸಂಗ್ರಹಿಸದ ಕಾರಣ ರದ್ದುಗೊಳಿಸಲು (ಏಪ್ರಿಲ್ 2021) ಶಿಫಾರಸು ಮಾಡಲಾಗಿದೆ ಎಂದು ಲೆಕ್ಕಪರಿಶೋಧನೆ ಗಮನಿಸಿತು. ಕಂಡಿಕೆ–3.3.3ರಲ್ಲಿ ತಿಳಿಸಿರುವಂತೆ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಪಾಲಿನ ವಂತಿಗೆ ನೀಡದಿರುವುದು ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾದ ವಸತಿ ಯೋಜನೆಗಳಿಗೆ ನಾಗರಿಕ ಮೂಲಸೌಕರ್ಯಗಳನ್ನು ಒದಗಿಸದಿರುವುದರಲ್ಲಿ ಪರಿಣಮಿಸಿತು.

ಸಮಾಜಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ಇತ್ಯಾದಿಗಳ ಮೂಲಕ ಫಲಾನುಭವಿಗಳ ಪಾಲನ್ನು ಕ್ರೋಢೀಕರಿಸುವ ಕಾರ್ಯಸಾಧ್ಯತೆಯನ್ನು ಪರಿಗಣಿಸಲಾಗುತ್ತಿದೆ ಮತ್ತು ಫಲಾನುಭವಿಗಳಿಗೆ ಅವರ ವಂತಿಗೆಯನ್ನು ಪಾವತಿಸಲು ಬ್ಯಾಂಕ್ ಸಾಲದ ವ್ಯವಸ್ಥೆ ಮಾಡಲು ಪ್ರಯತ್ನಿಸಲಾಗುತ್ತಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021). ಆದರೆ, ವಸತಿ ಯೋಜನೆಗಳಿಗೆ ನಾಗರಿಕ ಮೂಲಸೌಕರ್ಯ ಕಾಮಗಾರಿಗಳನ್ನು ಒದಗಿಸಲು ಅಗತ್ಯವಿರುವ ನಗರ ಸ್ಥಳೀಯ ಸಂಸ್ಥೆಗಳ ಪಾಲಿನ ಬಗ್ಗೆ ಉತ್ತರವು ಮೌನವಾಗಿತ್ತು.

[9] ಆಳಂದ್, ಚಿತ್ತಗುಪ್ಪ, ಗದಗ, ಗಜೇಂದ್ರಗಡ, ಮುಳಗುಂದ್, ನರೇಗಲ್, ನರಗುಂದ, ರಾಯಭಾಗ್, ರೋಣ್ ಮತ್ತು ಶಹಾಪುರ

### 3.2.3 ಫಲಾನುಭವಿಗಳಿಗೆ ಹೆಚ್ಚುವರಿ ಆರ್ಥಿಕ ಹೊರೆ

ಸಿಎಸ್‌ಎಮ್‌ಸಿಯಿಂದ ಯೋಜನೆಗಳ ಅನುಮೋದನೆಯ ನಂತರ ರಾಜ್ಯ ಸರ್ಕಾರದಿಂದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲು ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಪಾಲನ್ನು ಭರಿಸಲು ಮತ್ತು ಫಲಾನುಭವಿಗಳ ವಂತಿಗೆಯನ್ನು ಸಂಗ್ರಹಿಸಲು ಪರಿಷತ್ತಿನ ನಿರ್ಣಯ/ಸಮ್ಮತಿ ಪತ್ರವನ್ನು ಸಲ್ಲಿಸಬೇಕು. ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದ ನಂತರ ನಗರ ಸ್ಥಳೀಯ ಸಂಸ್ಥೆಗಳು ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಬೇಕು.

2016–21ರ ಅವಧಿಯಲ್ಲಿ ಭಾರತ ಸರ್ಕಾರವು ಅನುಮೋದಿಸಿದ್ದ 2472 ಯೋಜನೆಗಳಲ್ಲಿ 2,15,474 ವಸತಿ ಘಟಕಗಳನ್ನು ಒಳಗೊಂಡಿದ್ದ 1095 ಯೋಜನೆಗಳಿಗೆ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರಲಿಲ್ಲ (ಮಾರ್ಚ್ 2021) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ 10 ಯೋಜನೆಗಳ ಪರೀಕ್ಷಾ–ತನಿಖೆಯು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳನ್ನು ಪಡೆಯುವಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ವಿಳಂಬವು ಯೋಜನಾ ವೆಚ್ಚವು ಅಧಿಕವಾಗಲು ಕಾರಣವಾಯಿತು. ಫಲಾನುಭವಿ ಪಾಲಿನ ಸಂಗ್ರಹಣೆಯಲ್ಲಿ ಕೊರತೆಯ ಹೊರತಾಗಿಯೂ, ಟೆಂಡರ್ ಪ್ರೀಮಿಯಂ ಮತ್ತು ಯೋಜನೆಗಳ ವೆಚ್ಚದ ಹೆಚ್ಚಳವನ್ನು ಫಲಾನುಭವಿಗಳೇ ಭರಿಸಬೇಕೆಂದು ಎಸ್‌ಎಲ್‌ಎಸ್‌ಎಮ್‌ಸಿ ನಿರ್ಧರಿಸಿತು (ಡಿಸೆಂಬರ್ 2019). ಹೀಗೆ, ಮೇಲಿನ ಯೋಜನೆಗಳಲ್ಲಿನ ವೆಚ್ಚದ ಹೆಚ್ಚಳವು ಫಲಾನುಭವಿಗಳಿಗೆ ₹186.17 ಕೋಟಿ ಹೆಚ್ಚುವರಿ ಆರ್ಥಿಕ ಹೊರೆಯನ್ನು ಉಂಟುಮಾಡಿತು. ವಿವರಗಳನ್ನು **ಅನುಬಂಧ–3.3ರಲ್ಲಿ** ನೀಡಲಾಗಿದೆ. ಯೋಜನೆಗಳಿಗೆ ಅಗತ್ಯವಾದ ಅನುಮೋದನೆಗಳನ್ನು ಪಡೆಯುವಲ್ಲಿನ ನಗರ ಸ್ಥಳೀಯ ಸಂಸ್ಥೆಗಳ ವಿಳಂಬವು ಇಡಬ್ಲ್ಯುಎಸ್ ವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ಹೆಚ್ಚುವರಿ ಆರ್ಥಿಕ ಹೊರೆಯನ್ನು ಉಂಟುಮಾಡಿತು.

ಯೋಜನೆಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳನ್ನು ಪಡೆಯುವಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವಿಳಂಬದ ಕ್ರಮವನ್ನು ವೆಚ್ಚದ ಹೆಚ್ಚಳಕ್ಕೆ ಅಧ್ಯಾರೋಪಿಸಿದ ರಾಜ್ಯ ಸರ್ಕಾರವು ನಗರ ಸ್ಥಳೀಯ ಸಂಸ್ಥೆಗಳ ಪರವಾಗಿ ಟೆಂಡರ್‌ಗಳನ್ನು ಆಹ್ವಾನಿಸಲು ಆರ್‌ಜಿಹೆಚ್‌ಸಿಎಲ್‌ಗೆ ಸೂಚನೆ ನೀಡಲಾಗಿದೆ (ಜನವರಿ 2020) ಮತ್ತು ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ತಿಳಿಸಿತು (ಸೆಪ್ಟೆಂಬರ್ 2021). ಆದರೆ, ವಿಳಂಬದ ಕಾರಣದಿಂದಾಗಿ ಫಲಾನುಭವಿಗಳಿಗೆ ಹೆಚ್ಚುವರಿ ಆರ್ಥಿಕ ಹೊರೆಯಾಗಿರುವ ಬಗ್ಗೆ ಉತ್ತರವು ಮೌನವಾಗಿದೆ.

## 3.3 ಎಹೆಚ್‌ಪಿ ಯೋಜನೆಗಳ ಕಾರ್ಯಗತಗೊಳಿಸುವಿಕೆಯಲ್ಲಿ ಕೊರತೆ

### 3.3.1 ಎಹೆಚ್‌ಪಿ ಘಟಕದಡಿಯಲ್ಲಿ ಚದುರಿದ ಪ್ರತ್ಯೇಕ ಮನೆಗಳ ನಿರ್ಮಾಣ

ಯೋಜನೆಯ ಎಹೆಚ್‌ಪಿ ಘಟಕವು ಪ್ರತಿ ಯೋಜನೆಯಲ್ಲಿ ಕನಿಷ್ಠ 250 ಸಂಖ್ಯೆಯ ಗುಂಪು ಮನೆಗಳ ನಿರ್ಮಾಣವನ್ನು ಪ್ರೋತ್ಸಾಹಿಸುತ್ತದೆ ಮತ್ತು ಅದರಲ್ಲಿ ಕನಿಷ್ಠ ಶೇಕಡಾ 35ರಷ್ಟು ವಸತಿ ಘಟಕಗಳನ್ನು ಇಡಬ್ಲ್ಯುಎಸ್ ವರ್ಗಕ್ಕೆ ಕಾಯ್ದಿರಿಸಲಾಗಿದೆ. ಕೆಎಸ್‌ಡಿಬಿ ತೆಗೆದುಕೊಂಡಿರುವ 83,119 ವಸತಿ ಘಟಕಗಳಲ್ಲಿ 12,031 (ಶೇಕಡಾ 14) ಮಾತ್ರ ಗುಂಪು ಮನೆಗಳಾಗಿವೆ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯೋಜನೆಯ ಮಾರ್ಗಸೂಚಿಗಳಿಗೆ ಪ್ರತಿಯಾಗಿ ಏಕರೂಪದ ಯೋಜನೆ/ಆಯಾಮವಿಲ್ಲದೆ ಉಳಿದ ವಸತಿ ಘಟಕಗಳನ್ನು ಚದುರಿದ ರೀತಿಯಲ್ಲಿ ವೈಯಕ್ತಿಕ ಮನೆಗಳಾಗಿ ಕಾರ್ಯಗತಗೊಳಿಸಲಾಯಿತು.

ಎಹೆಚ್‌ಪಿ ಘಟಕದಡಿಯಲ್ಲಿ ಒಂದೇ ಬಡಾವಣೆಯಲ್ಲಿ ಅಥವಾ ಬಹು–ಮಹಡಿಗಳ ವಸತಿ ಕಟ್ಟಡದಲ್ಲಿ ಏಕರೂಪದ ಘಟಕ ಯೋಜನೆಯನ್ನು ಹೊಂದಿದ ಗುಂಪು ಮನೆಗಳನ್ನು ಪ್ರಸ್ತಾವಿಸಬೇಕು ಎಂದು ಎಸ್‌ಎಲ್‌ಎಸ್‌ಎಮ್‌ಸಿ ಸಹ ಗಮನಿಸಿದೆ (ಸೆಪ್ಟೆಂಬರ್ 2020). ಚದುರಿದ ರೀತಿಯಲ್ಲಿ ಬೇರೇ ಬೇರೆ ಆಯಾಮದ ವೈಯಕ್ತಿಕ ಮನೆಗಳನ್ನು ಬಿಎಲ್‌ಸಿ ಅಡಿಯಲ್ಲಿ ಕೈಗೆತ್ತಿಕೊಳ್ಳಬೇಕು. ಎಹೆಚ್‌ಪಿ ಯೋಜನೆಗಳ

ಅಡಿಯಲ್ಲಿ ಕೆಎಸ್‌ಡಿಬಿ ನಿರ್ಮಿಸಿದ ಹೆಚ್ಚಿನ ವಸತಿ ಘಟಕಗಳು, ಪ್ರತಿ ವಸತಿ ಘಟಕವು ವಿವಿಧ ಆಯಾಮಗಳೊಂದಿಗೆ ಚದುರಿಹೋಗಿರುವುದನ್ನು ಎಸ್‌ಎಲ್‌ಎಸ್‌ಎಮ್‌ಸಿ ಗಮನಿಸಿತು.

ಕೆಎಸ್‌ಡಿಬಿಯಿಂದ ಜಾರಿಗೊಳಿಸಲಾದ ಪರೀಕ್ಷಾ–ತನಿಖೆ ನಡೆಸಲ್ಪಟ್ಟ 38 ಎಎಚ್‌ಪಿ ಯೋಜನೆಗಳ 22,199 ವಸತಿ ಘಟಕಗಳಲ್ಲಿ ಕೇವಲ 2883[10] ವಸತಿ ಘಟಕಗಳು (ಶೇಕಡಾ 9) ಮಾತ್ರ ಗುಂಪು ವಸತಿ ಅಡಿಯಲ್ಲಿವೆ. ಗುಂಪು ವಸತಿ ಯೋಜನೆಗಳ ಅಡಿಯಲ್ಲಿ ನಿರ್ಮಾಣದ ಪ್ರಗತಿಯನ್ನು ಕೆಳಗೆ ನೀಡಲಾಗಿದೆ:

- ಕೆಎಸ್‌ಡಿಬಿಯಿಂದ ಗುಂಪು ವಸತಿ ಅಡಿಯಲ್ಲಿ ತೆಗೆದುಕೊಂಡ 45 ಮನೆಗಳು ಮಾತ್ರ ಪೂರ್ಣಗೊಂಡಿವೆ (ಜುಲೈ 2020), ಆದರೆ ಫಲಾನುಭವಿಗಳು ಇನ್ನೂ ತಮ್ಮ ವಂತಿಗೆಯನ್ನು ಪಾವತಿಸದ ಕಾರಣ ಮಾರ್ಚ್ 2021 ರಲ್ಲಿದ್ದಂತೆ ಯಾವುದೇ ಮನೆಗಳನ್ನೂ ಸ್ವಾಧೀನ ಪಡಿಸಿಕೊಂಡಿರಲಿಲ್ಲ.

- ಯೋಜನೆಗಳನ್ನು ಅನುಮೋದಿಸುವ ಮೊದಲು ಫಲಾನುಭವಿಗಳ ಪಾಲಿನ ವಂತಿಗೆಗೆ ಸಂಬಂಧಿಸಿದಂತೆ ಫಲಾನುಭವಿಗಳ ಲಿಖಿತ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕು ಎಂದು ಸಿಎಸ್‌ಎಮ್‌ಸಿ ತನ್ನ 11ನೇ ಸಭೆಯಲ್ಲಿ (ಆಗಸ್ಟ್ 2016) ನಿಗದಿಪಡಿಸಿತು. ಆದಾಗ್ಯೂ, ಯೋಜನೆಗಳನ್ನು ಯೋಜಿಸುವಾಗ ತಮ್ಮ ಒಪ್ಪಿಗೆಯನ್ನು ಪಡೆಯದ ಕಾರಣ ನಿವೇಶನ ತೆರವು ಮಾಡಲು ಮತ್ತು ಫಲಾನುಭವಿಗಳ ವಂತಿಗೆಯನ್ನು ಪಾವತಿಸಲು ಫಲಾನುಭವಿಗಳು ನಿರಾಕರಿಸಿದ ಕಾರಣ ಕಾರ್ಯಾದೇಶಗಳನ್ನು ನೀಡಲಾದ (ಮೇ 2017ರಿಂದ ಜುಲೈ 2017) 352[11] ವಸತಿ ಘಟಕಗಳ ನಿರ್ಮಾಣವನ್ನು ಇನ್ನೂ ಪ್ರಾರಂಭಿಸಬೇಕಾಗಿದೆ (ಮಾರ್ಚ್ 2021) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

- ಗುಂಪು ವಸತಿ ಅಡಿಯಲ್ಲಿ ಕೈಗೆತ್ತಿಕೊಂಡ 2883 ವಸತಿ ಘಟಕಗಳಲ್ಲಿ 2486[12] ಮನೆಗಳು (ಶೇಕಡಾ 86) ಅಪೂರ್ಣವಾಗಿ ಉಳಿದಿವೆ. ಕೆಆರ್ ಪುರಂನಲ್ಲಿ 768 ವಸತಿ ಘಟಕಗಳಿಗೆ ಫಲಾನುಭವಿಗಳ ವಂತಿಗೆಯನ್ನು ಸ್ವೀಕರಿಸಲಾಗಿಲ್ಲ ಮತ್ತು ನಾಗರಿಕ ಮೂಲಸೌಕರ್ಯಗಳನ್ನು ಒದಗಿಸುವ ಯಾವುದೇ ಕಾಮಗಾರಿಗಳನ್ನು ಪ್ರಾರಂಭಿಸಿರಲಿಲ್ಲ. ಕೆಆರ್ ಪುರಂ ಯೋಜನೆಯ (768 ವಸತಿ ಘಟಕಗಳು) ಭಾಗವಾಗಿರುವ ಸಂಜಯನಗರ ಕೊಳೆಗೇರಿಯಲ್ಲಿ ಲೆಕ್ಕಪರಿಶೋಧನೆಯು ನಡೆಸಿದ (ಫೆಬ್ರವರಿ 2021) ಫಲಾನುಭವಿಗಳ ಸಮೀಕ್ಷೆಯು, ಗುಂಪು ವಸತಿಗಳು ತಮ್ಮ ಜೀವನೋಪಾಯದ ಪ್ರದೇಶದಿಂದ ದೂರದಲ್ಲಿರುವುದರಿಂದ ಗುರುತಿಸಲಾದ ಫಲಾನುಭವಿಗಳು ಸ್ಥಳಾಂತರಗೊಳ್ಳಲು ಸಿದ್ಧರಿಲ್ಲ ಎಂದು ತಿಳಿಯಪಡಿಸಿತು.

ಹೀಗಾಗಿ, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರವು ಬಿಡುಗಡೆ ಮಾಡಿದ ₹330.93 ಕೋಟಿ ಅನುದಾನವನ್ನು ಖರ್ಚು ಮಾಡಿದರೂ ಫಲಾನುಭವಿಗಳ ವಂತಿಕೆಯನ್ನು ಸಂಗ್ರಹಿಸದ ಕಾರಣ ಯೋಜನೆಗಳು ಅಪೂರ್ಣವಾಗಿವೆ.

ತಮ್ಮ ಹಳೆಯ ಮತ್ತು ಶಿಥಿಲವಾದ ಮನೆಗಳನ್ನು ತೆರವು ಮಾಡಬೇಕಾದ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಎಹೆಚ್‌ಪಿ ಯೋಜನೆಗಳನ್ನು ಆಯ್ದ ಕೊಳೆಗೇರಿಗಳಲ್ಲಿ ಮೂಲ ಸ್ಥಾನದಲ್ಲಿಯೇ ವಸತಿ ಘಟಕಗಳನ್ನಾಗಿ ನೆಲ ಅಂತಸ್ತಿನಲ್ಲಿ ಮಾತ್ರ ತೆಗೆದುಕೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021).

---

[10] ಕೆಆರ್ ಪುರಮ್–768 ಡಿಯುಗಳು, ಮಡಿವಾಳ ಧೋಬಿಘಾಟ್–150 ಡಿಯುಗಳು, ಮಲ್ಲೇಶ್ವರಂ–252 ಡಿಯುಗಳು, ಪಾರ್ವತಿಪುರಮ್–45 ಡಿಯುಗಳು, ಸರ್ವಜ್ಞನಗರ–100 ಡಿಯುಗಳು, ಸಿರಾ–1008 ಡಿಯುಗಳು ಮತ್ತು ವಿಜಯಪುರ–560 ಡಿಯುಗಳು

[11] ಹೆಣ್ಣೂರು ಬಂಡೆ–100 ಡಿಯುಗಳು ಮತ್ತು ಮಲ್ಲೇಶ್ವರಮ್–252 ಡಿಯುಗಳು

[12] ಕೆಆರ್ ಪುರಮ್–768 ಡಿಯುಗಳು, ಮಡಿವಾಳ ಧೋಬಿಘಾಟ್–150 ಡಿಯುಗಳು, ಸಿರಾ–1008 ಡಿಯುಗಳು ಮತ್ತು ವಿಜಯಪುರ–560 ಡಿಯುಗಳು

ಯೋಜನಾ ಮಾರ್ಗಸೂಚಿಗಳ ಅನ್ವಯ ಎಹೆಚ್‌ಪಿ ಘಟಕದಡಿಯಲ್ಲಿ ಗುಂಪು ವಸತಿ, ಬಿಎಲ್‌ಸಿ ಅಡಿಯಲ್ಲಿ ಚದುರಿದ ವೈಯಕ್ತಿಕ ಮನೆಗಳು ಮತ್ತು ಐಎಸ್‌ಎಸ್‌ಆರ್ ಘಟಕದಡಿಯಲ್ಲಿ ಮೂಲಸ್ಥಳದಲ್ಲಿಯೇ ಕೊಳೆಗೇರಿ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಬೇಕಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಹೀಗೆ, ಎಹೆಚ್‌ಪಿ ಘಟಕದಡಿಯಲ್ಲಿ ಮೂಲಸೌಕರ್ಯ ಸೌಲಭ್ಯಗಳೊಂದಿಗೆ ಗುಂಪು ವಸತಿ ಒದಗಿಸುವ ಯೋಜನೆಯ ಉದ್ದೇಶವನ್ನು ಸಾಧಿಸಲಾಗಲಿಲ್ಲ.

### 3.3.2 ಎಹೆಚ್‌ಪಿ ಯೋಜನೆಗಳಲ್ಲಿ ಚದುರಿದ ಮನೆಗಳ ನಿರ್ಮಾಣದಿಂದಾಗಿ ಒಪ್ಪಂದದ ದೋಷಪೂರಿತ ಕಾರ್ಯಗತಗೊಳಿಸುವಿಕೆ

ಎಹೆಚ್‌ಪಿ ಘಟಕದಡಿಯಲ್ಲಿ ಅನುಮೋದಿಸಲಾದ ಮನೆಗಳ ನಿರ್ಮಾಣಕ್ಕಾಗಿ ಕೆಎಸ್‌ಡಿಬಿ ಟೆಂಡರ್ ಪ್ರಕ್ರಿಯೆಯ ಮೂಲಕ ಗುತ್ತಿಗೆದಾರರನ್ನು ನೇಮಿಸಿಕೊಂಡಿದೆ. ಏಕರೂಪದ ಯೋಜನೆ/ಆಯಾಮಗಳನ್ನು ಹೊಂದಿರುವ ವಸತಿ ಘಟಕಗಳ ಪ್ರಮಾಣಿತ ವಿನ್ಯಾಸವನ್ನು ಪರಿಗಣಿಸಿ ತಯಾರಿಸಲಾದ ಅಂದಾಜುಗಳ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. **ಕಂಡಿಕೆ–3.3.1ರಲ್ಲಿ** ವಿವರಿಸಿದಂತೆ ಹೆಚ್ಚಿನ ಎಹೆಚ್‌ಪಿ ಮನೆಗಳನ್ನು ಚದುರಿದ ರೀತಿಯಲ್ಲಿ ಕೈಗೆತ್ತಿಕೊಂಡಿದ್ದರಿಂದ, ಗುತ್ತಿಗೆದಾರರು ವಿನ್ಯಾಸದ ಪ್ರಕಾರ ಕೆಲಸವನ್ನು ನಿರ್ವಹಿಸುವ ಬದಲು ಸ್ವಂತವಾಗಿ ಮನೆಗಳನ್ನು ನಿರ್ಮಿಸಿದ ಫಲಾನುಭವಿಗಳಿಗೆ ಹಣ ಮತ್ತು ವಸ್ತುಗಳನ್ನು ವರ್ಗಾಯಿಸಿದರು. ಆಯ್ದ ಎಹೆಚ್‌ಪಿ ಯೋಜನೆಗಳ ಜಂಟಿ ಪರಿಶೀಲನೆಯು ಈ ಕೆಳಗಿನ ಅಕ್ರಮಗಳನ್ನು ತಿಳಿಯಪಡಿಸಿತು:

- ಲೆಕ್ಕಪರಿಶೋಧನೆಯ ಸಮಯದಲ್ಲಿ ಸಮೀಕ್ಷೆ ಮಾಡಲಾದ 1090 ಎಹೆಚ್‌ಪಿ ಮನೆಗಳಲ್ಲಿ 498 ಮನೆಗಳನ್ನು (ಶೇಕಡಾ 46) ಪ್ರತ್ಯೇಕವಾಗಿ ಚದುರಿದ ರೀತಿಯಲ್ಲಿ ನಿರ್ಮಿಸಲಾಗಿರುವುದನ್ನು ಮತ್ತು ಮಾರ್ಗಸೂಚಿಯಲ್ಲಿ ಸೂಚಿಸಲಾದ ಗರಿಷ್ಠ ಕಾರ್ಪೆಟ್ ವಿಸ್ತೀರ್ಣಕ್ಕಿಂತ ಹೆಚ್ಚಿನದಾಗಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದು ನಿರ್ಮಾಣವು ಪ್ರಮಾಣಿತವಾಗಿರಲಿಲ್ಲ ಮತ್ತು ಎಹೆಚ್‌ಪಿ ಮನೆಗಳ ವಿನ್ಯಾಸಕ್ಕೆ ಅನುಗುಣವಾಗಿರಲಿಲ್ಲ ಎಂಬುದನ್ನು ಸೂಚಿಸುತ್ತದೆ.

- ಮೇಲಿನ ಒಪ್ಪಂದಗಳಲ್ಲಿ ಫಲಾನುಭವಿಗಳಿಗೆ ಹಣ ಮತ್ತು ವಸ್ತುಗಳನ್ನು ವರ್ಗಾಯಿಸಲು ಯಾವುದೇ ಅವಕಾಶವಿರಲಿಲ್ಲ. ಆದಾಗ್ಯೂ, ಗೋಕಾಕ್ (600 ವಸತಿ ಘಟಕಗಳು) ಮತ್ತು ರಾಮದುರ್ಗದ (600 ವಸತಿ ಘಟಕಗಳು) ಎರಡು ಎಎಚ್‌ಪಿ ಯೋಜನೆಗಳಲ್ಲಿ ಸಂಪೂರ್ಣ ವಸತಿ ಘಟಕಗಳನ್ನು ಸ್ವತಃ ಫಲಾನುಭವಿಗಳು ನಿರ್ಮಿಸಿರುವುದನ್ನು ಮತ್ತು ಗುತ್ತಿಗೆದಾರರು ಫಲಾನುಭವಿಗಳಿಗೆ ನೇರವಾಗಿ ಹಣವನ್ನು ವರ್ಗಾಯಿಸಿರುವುದನ್ನು ಅಥವಾ ನಿರ್ಮಾಣ ಸಾಮಗ್ರಿಗಳನ್ನು ಪೂರೈಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅದೇ ರೀತಿ, ಪರೀಕ್ಷಾ–ತನಿಖೆಗೆ ಒಳಪಟ್ಟ ಬೇರೆ ಎಂಟು[13] ಯೋಜನೆಗಳಲ್ಲಿ, ಸಮೀಕ್ಷೆಗೆ ಒಳಗಾದ 55 ಫಲಾನುಭವಿಗಳ ಪೈಕಿ 17 ಫಲಾನುಭವಿಗಳು ತಾವೇ ಸ್ವಂತ ಮನೆಗಳನ್ನು ನಿರ್ಮಿಸಿಕೊಂಡಿದ್ದಾಗಿ ಹಾಗೂ ಗುತ್ತಿಗೆದಾರರು ಹಣವನ್ನು ವರ್ಗಾಯಿಸಿದರು ಅಥವಾ ವಸ್ತುಗಳನ್ನು ಸರಬರಾಜು ಮಾಡಿದರು ಎಂದು ತಿಳಿಸಿದರು. ಫಲಾನುಭವಿಗಳ ಪ್ರತಿಕ್ರಿಯೆಗಳನ್ನು ಜಂಟಿ ತಪಾಸಣೆಯ ಸಂದರ್ಭದಲ್ಲಿ ಹಾಜರಿದ್ದ ಕೆಎಸ್‌ಡಿಬಿ ಅಧಿಕಾರಿಗಳು ಸಹ ಅನುಮೋದಿಸಿದರು.

- ಟೆಂಡರ್ ವಿಶಿಷ್ಟತೆಗಳ ಅನ್ವಯ ಅಸ್ತಿತ್ವದಲ್ಲಿರುವ ಹಳೆಯ ಮನೆಗಳು ಮತ್ತು ರಚನೆಗಳನ್ನು ನೆಲಸಮ ಮಾಡಲು ಕೆಎಸ್‌ಡಿಬಿ ಗುತ್ತಿಗೆದಾರರಿಗೆ ₹2.74 ಕೋಟಿಗಳನ್ನು **(ಅನುಬಂಧ–3.4)** ಪಾವತಿಸಿರುವುದನ್ನು ಆಯ್ದ 30 ಎಹೆಚ್‌ಪಿ ಕಾಮಗಾರಿಗಳ ರನ್ನಿಂಗ್ ಅಕೌಂಟ್ ಬಿಲ್‌ಗಳ ಪರಿಶೀಲನೆಯಲ್ಲಿ ಗಮನಿಸಲಾಯಿತು. ತಮ್ಮ ಹಳೆಯ ಮನೆಗಳನ್ನು ತಾವೇ ನೆಲಸಮ ಮಾಡಿ, ಕಟ್ಟಡ ತ್ಯಾಜ್ಯವನ್ನು ವಿಲೇವಾರಿ ಮಾಡಿ ಖಾಲಿ ನಿವೇಶನಗಳನ್ನು ಕೆಎಸ್‌ಡಿಬಿ ಗುತ್ತಿಗೆದಾರರಿಗೆ

[13] ಚಿಕ್ಕೋಡಿ, ಹರಪನಹಳ್ಳಿ, ಕಮಲಾಪುರ, ಕೊಪ್ಪಳ, ನಾಗಮಂಗಲ, ಪದ್ಮನಾಭನಗರ ಬಿಬಿಎಮ್‌ಪಿ, ಶಿರಾಳಕೊಪ್ಪ ಮತ್ತು ಶಿವಮೊಗ್ಗ.

ಹಸ್ತಾಂತರಿಸಿದ್ದರು ಎಂದು ಈ ಯೋಜನೆಗಳ ಜಂಟಿ ಪರಿಶೀಲನೆ ವೇಳೆ ಸಮೀಕ್ಷೆ ನಡೆಸಿದ ಶೇಕಡಾ 33 ಫಲಾನುಭವಿಗಳು ತಿಳಿಸಿದರು.

- ಅದೇ ರೀತಿ, ಬಿಒಕ್ಯೂ ಮತ್ತು ಅನುಮೋದಿತ ವಿನ್ಯಾಸ ಅನ್ವಯ, ಪ್ರತಿ ವಸತಿ ಘಟಕವೂ ನಾಲ್ಕು ಬಾಗಿಲುಗಳು, ನಾಲ್ಕು ಕಿಟಕಿಗಳು ಮತ್ತು ಎರಡು ವೆಂಟಿಲೇಟರ್‌ಗಳನ್ನು ಹೊಂದಿರಬೇಕಿತ್ತು. ಪರೀಕ್ಷಾ–ತನಿಖೆ ನಡೆಸಿದ 10[14] ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಸಮೀಕ್ಷೆಗೆ ಒಳಗಾದ 62ರಲ್ಲಿ 40 ಫಲಾನುಭವಿಗಳು, ಬಿಒಕ್ಯೂನಲ್ಲಿ ಒದಗಿಸಲಾದ 160 ಬಾಗಿಲುಗಳು, 80 ಕಿಟಕಿಗಳು ಮತ್ತು 80 ವೆಂಟಿಲೇಟರ್‌ಗಳಿಗೆ ಪ್ರತಿಯಾಗಿ ಗುತ್ತಿಗೆದಾರರಿಂದ 34 ಬಾಗಿಲುಗಳು, 32 ಕಿಟಕಿಗಳು ಮತ್ತು 19 ವೆಂಟಿಲೇಟರ್‌ಗಳನ್ನು ಮಾತ್ರ ಪಡೆದಿರುವುದಾಗಿ ಮಾಹಿತಿ ನೀಡಿದರು. 40ರಲ್ಲಿ ಒಂಬತ್ತು ಫಲಾನುಭವಿಗಳಿಗೆ ಬಾಗಿಲು ಮತ್ತು ಕಿಟಕಿಗಳನ್ನು ಖರೀದಿಸಲು ಬಿಒಕ್ಯೂನಲ್ಲಿ ಪ್ರತಿ ವಸತಿ ಘಟಕಕ್ಕೆ ಒದಗಿಸಲಾದ ₹38,698ರಿಂದ ₹48,650ಗೆ ಪ್ರತಿಯಾಗಿ ₹2000ರಿಂದ ₹31520 ರವರೆಗೆ ನಗದು ನೀಡಲಾಗಿತ್ತು.

ಹೀಗೆ, ಗುಂಪು ವಸತಿ ಯೋಜನೆಯಾಗಿ ಉದ್ದೇಶಿಸಲಾದ ಎಹೆಚ್‌ಪಿ ಯೋಜನೆಗಳನ್ನು ಚದುರಿದ ರೀತಿಯಲ್ಲಿ ಕಾರ್ಯಗತಗೊಳಿಸಿರುವುದು ಮತ್ತು ಫಲಾನುಭವಿಗಳಿಗೆ ಹಣ ಮತ್ತು ವಸ್ತುಗಳನ್ನು ವರ್ಗಾಯಿಸಲು ಗುತ್ತಿಗೆದಾರರಿಗೆ ಅನುಮತಿ ನೀಡಿರುವುದು ಗುತ್ತಿಗೆಯ ದೋಷಪೂರಿತ ಕಾರ್ಯಗತಗೊಳಿಸುವಿಕೆ ಮತ್ತು ಗುತ್ತಿಗೆದಾರರಿಗೆ ಅನಪೇಕ್ಷಿತ ಲಾಭ ಉಂಟಾಗುವಲ್ಲಿ ಪರಿಣಮಿಸಿತು. ಕೆಲವು ಫಲಾನುಭವಿಗಳು ಯೋಜನೆಯಲ್ಲಿ ಒದಗಿಸಿರುವುದಕ್ಕಿಂತ ಸುಧಾರಿತ ವಸ್ತುಗಳನ್ನು ಹೊಂದಲು ಬಯಸಿದ್ದರು ಮತ್ತು ಹೆಚ್ಚುವರಿ ಕಾಮಗಾರಿಗಳನ್ನು ತಮ್ಮ ಸ್ವಂತ ವೆಚ್ಚದಲ್ಲಿ ನಿರ್ವಹಿಸಿದ್ದಾರೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021). ಕೆಲವು ಫಲಾನುಭವಿಗಳು ತಮ್ಮ ಬೆಲೆಬಾಳುವ/ಮರುಮಾರಾಟ ಮಾಡಬಹುದಾದ ವಸ್ತುಗಳನ್ನು ಸಂರಕ್ಷಿಸಲು ತಾವೇ ಮನೆಗಳನ್ನು ನೆಲಸಮ ಮಾಡಿಕೊಂಡರು ಎಂದೂ ಸಹ ತಿಳಿಸಲಾಯಿತು.

ಗುತ್ತಿಗೆದಾರರು ಕಾಮಗಾರಿಯನ್ನು ನಿರ್ವಹಿಸುವ ಬದಲು ಫಲಾನುಭವಿಗಳಿಗೆ ಹಣ ಮತ್ತು ಸಾಮಗ್ರಿಗಳನ್ನು ವರ್ಗಾಯಿಸುವ ಮೂಲಕ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಅಲ್ಲದೆ, ಫಲಾನುಭವಿಗಳು ನಿರ್ವಹಿಸಿದ ಕಾಮಗಾರಿಗೆ ಗುತ್ತಿಗೆದಾರರಿಗೆ ಪಾವತಿ ಮಾಡಿರುವುದು ಸಹ ತಪ್ಪಾಗಿದೆ. ಒಪ್ಪಂದದ ಷರತ್ತುಗಳ ಅನುಷ್ಠಾನವು ಸಡಿಲ ಮತ್ತು ಬೇಜವಾಬ್ದಾರಿಯಿಂದ ಕೂಡಿತ್ತು. ಇದು ಜವಾಬ್ದಾರಿಯುತ ಅಧಿಕಾರಿಗಳಿಂದ ಮೇಲ್ವಿಚಾರಣೆಯ ಕೊರತೆಯನ್ನು ಸಹ ತೋರಿಸುತ್ತದೆ. ಮೇಲಿನ ವಿಷಯಗಳ ಬಗ್ಗೆ ಸರ್ಕಾರವು ವಿವರವಾದ ತನಿಖೆಯನ್ನು ನಡೆಸಬೇಕು ಮತ್ತು ಗಮನಿಸಲಾದ ಲೋಪಗಳಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

### 3.3.3 ಎಹೆಚ್‌ಪಿ ಯೋಜನೆಗಳಡಿಯಲ್ಲಿ ನಾಗರಿಕ ಮೂಲಸೌಕರ್ಯ ಕಾಮಗಾರಿಗಳನ್ನು ಕಾರ್ಯಗತ ಗೊಳಿಸದಿರುವುದು

ಯೋಜನೆಯ ಮಾರ್ಗಸೂಚಿಗಳ ಕಂಡಿಕೆ–2.2ರ ಅನ್ವಯ ಎಹೆಚ್‌ಪಿ ಯೋಜನೆಗಳು ನೀರು, ನೈರ್ಮಲ್ಯ, ಒಳಚರಂಡಿ, ರಸ್ತೆ, ವಿದ್ಯುತ್ ಇತ್ಯಾದಿ ನಾಗರಿಕ ಮೂಲಸೌಕರ್ಯಗಳನ್ನು ಹೊಂದಿರಬೇಕು. ಅದರಂತೆ ಎಹೆಚ್‌ಪಿ ಯೋಜನೆಗಳ ಡಿಪಿಆರಗಳು ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು ಮುಂತಾದ ನಾಗರಿಕ ಮೂಲಸೌಕರ್ಯಗಳನ್ನು ಒದಗಿಸಿವೆ. ಕರ್ನಾಟಕ ಕೊಳೆಗೇರಿ ಪ್ರದೇಶಗಳ ಅಭಿವೃದ್ಧಿ ನೀತಿ (ಕೆಎಸ್‌ಎಡಿಪಿ), 2016 ವಸತಿ ಘಟಕಗಳನ್ನು ರಚಿಸುವುದರ ಜೊತೆಗೆ ಕೊಳೆಗೇರಿ ಪ್ರದೇಶಗಳಲ್ಲಿ ಭೌತಿಕ ಮೂಲಸೌಕರ್ಯದಲ್ಲಿ ಸುಧಾರಣೆಯನ್ನು ಕಲ್ಪಿಸಿತ್ತು. ಇದರಿಂದ ಕೊಳೆಗೇರಿ ಪ್ರದೇಶಗಳು ನಗರದ ಭಾಗಗಳಾಗುತ್ತವೆ ಮತ್ತು ಸಾಮಾಜಿಕ ಮೂಲಸೌಕರ್ಯ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ

[14] ಚಿಕ್ಕಮಗಳೂರು, ಚಿಕ್ಕೋಡಿ, ಹರಪನಹಳ್ಳಿ, ಕಡೂರು, ಕಮಲಾಪುರ, ಕೊಪ್ಪಳ, ಸಾಗರ, ಶಿವಮೊಗ್ಗ, ಶಿರಾಳಕೊಪ್ಪ ಮತ್ತು ತರೀಕೆರೆ.

ಒಮ್ಮುಖವಾಗುತ್ತವೆ. ಸಿಎಸ್‌ಎಮ್‌ಸಿ ತನ್ನ 41ನೇ ಸಭೆಯಲ್ಲಿ (ಡಿಸೆಂಬರ್ 2018) ಸಾಲು ವಸತಿಗೆ ಹೋಲಿಸಿದರೆ ಬಹು ಮಹಡಿ ಮನೆಗಳ ನಿರ್ಮಾಣವು ಹೆಚ್ಚು ವೆಚ್ಚ ಪರಿಣಾಮಕಾರಿಯಾಗಿರುವುದರಿಂದ, ರಾಜ್ಯ ಸರ್ಕಾರವು ಬಹುಮಹಡಿ ಮನೆಗಳ ನಿರ್ಮಾಣವನ್ನು ಪರಿಗಣಿಸಬಹುದು ಎಂದು ಗಮನಿಸಿತ್ತು. ಹೀಗೆ ತೆರವಾದ ಭೂಮಿಯನ್ನು ಲೋಕೋಪಯೋಗಿ, ಸಮುದಾಯ ಅಭಿವೃದ್ಧಿ ಚಟುವಟಿಕೆಗಳು, ಉದ್ಯಾನವನ, ಆಟದ ಮೈದಾನ ಇತ್ಯಾದಿಗಳಿಗೆ ಬಳಸಿಕೊಳ್ಳಬಹುದು.

ದಾಖಲೆಗಳ ಪರಿಶೀಲನೆಯಲ್ಲಿ ಲೆಕ್ಕಪರಿಶೋಧನೆಯು ಕೆಳಗಿನವುಗಳನ್ನು ಗಮನಿಸಿತು:

- ಕೆಎಸ್‌ಎಡಿಪಿ, 2016ರ ಅನ್ವಯ ಯಾವುದೇ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಘೋಷಿಸುವ ಅಂಶಗಳಲ್ಲಿ ಮಳೆನೀರಿನ ಚರಂಡಿಗಳ ಕೊರತೆಯ ರೂಪದಲ್ಲಿನ ಅಸಮರ್ಪಕ ಮೂಲಸೌಕರ್ಯವು ಒಂದಾಗಿದೆ. ಪರೀಕ್ಷಾ-ತನಿಖೆ ನಡೆಸಿದ ಯಾವುದೇ ಎಹೆಚ್‌ಪಿ ಯೋಜನೆಗಳು ಗುತ್ತಿಗೆಯಲ್ಲಿ ಮಳೆನೀರಿನ ಚರಂಡಿಗಳ ಕಾಮಗಾರಿಗಳನ್ನು ಒಳಗೊಂಡಿರಲಿಲ್ಲ ಎಂಬುದನ್ನು ಪರೀಕ್ಷಾ-ತನಿಖೆ ನಡೆಸಿದ ಎಹೆಚ್‌ಪಿ ಯೋಜನೆಗಳ ಗುತ್ತಿಗೆ ಒಪ್ಪಂದಗಳ ಪರಿಶೀಲನೆಯು ತಿಳಿಯಪಡಿಸಿತು.
- ಬಿಓಕ್ಯೂನಲ್ಲಿ ಸೇರಿಸಲಾದ ₹126.55 ಕೋಟಿ ಮೊತ್ತದ ರಸ್ತೆಗಳು, ಒಳಚರಂಡಿ, ನೀರು ಸರಬರಾಜು ಇತ್ಯಾದಿ ನಾಗರಿಕ ಮೂಲಸೌಕರ್ಯ ಕಾಮಗಾರಿಗಳನ್ನು 38 ಪರೀಕ್ಷಾ-ತನಿಖೆ ನಡೆಸಲಾದ ಯೋಜನೆಗಳಲ್ಲಿ ತೆಗೆದುಕೊಂಡಿರಲಿಲ್ಲ. **ಕಂಡಿಕೆ-3.2.2ರಲ್ಲಿ** ಚರ್ಚಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳ ವಂತಿಗೆಯನ್ನು ನೀಡದ ಕಾರಣ ಕಾಮಗಾರಿಗಳನ್ನು ಕೈಗೊಳ್ಳಲಾಗಲಿಲ್ಲ.
- ಕೆಎಸ್‌ಡಿಬಿಯಿಂದ ಜಾರಿಗೊಳಿಸಲಾದ 38 ಪರೀಕ್ಷಾ ತನಿಖೆ ನಡೆಸಲಾದ ಎಎಚ್‌ಪಿ ಯೋಜನೆಗಳಲ್ಲಿ ಸಿಎಸ್‌ಎಮ್‌ಸಿ ಶಿಫಾರಸ್ಸಿನಂತೆ ಕೇವಲ ಏಳು ಯೋಜನೆಗಳಲ್ಲಿ ಬಹು ಮಹಡಿ ಮನೆಗಳ ನಿರ್ಮಾಣವನ್ನು ತೆಗೆದುಕೊಳ್ಳಲಾಗಿದೆ. ಉಳಿದ ಯೋಜನೆಗಳಲ್ಲಿ ಭಾರತ ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ ಚದುರಿದ ಪ್ರತ್ಯೇಕ ಮನೆಗಳನ್ನು ನಿರ್ಮಿಸಲಾಗಿದೆ.

ಪರೀಕ್ಷಾ-ತನಿಖೆ ನಡೆಸಿದ ಈ ಯೋಜನೆಗಳ ಜಂಟಿ ಭೌತಿಕ ಪರಿಶೀಲನೆಯಲ್ಲಿ, ಮೂರು[15] ಕೊಳೆಗೇರಿಗಳಲ್ಲಿ ಮೂಲಸೌಕರ್ಯ ಕಾರ್ಯಗಳನ್ನು ಕೈಗೊಳ್ಳದೆ ಎಹೆಚ್‌ಪಿ ಅಡಿಯಲ್ಲಿ ಪ್ರತ್ಯೇಕ ಚದುರಿದ ಮನೆಗಳನ್ನು ನಿರ್ಮಿಸಲಾಗಿದೆ ಎಂದು ಲೆಕ್ಕಪರಿಶೋಧನೆಯು ಗಮನಿಸಿತು. ಇದು ಕೆಎಸ್‌ಎಡಿಪಿ, 2016ರಿಂದ ವಿಚಲನವಾಗಿ ಕೊಳೆಗೇರಿ ಗುಣಲಕ್ಷಣಗಳನ್ನು[16] ಉಳಿಸಿಕೊಳ್ಳುವಲ್ಲಿ ಪರಿಣಮಿಸಿತು.

ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಹಣವನ್ನು ಬಿಡುಗಡೆ ಮಾಡದ ಕಾರಣ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ಕರ್ನಾಟಕ ಸರ್ಕಾರದ ನಿಧಿಯಡಿಯಲ್ಲಿ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021).

ಆದಾಗ್ಯೂ, ವಿವಿಧ ಅನುಷ್ಠಾನ ಏಜೆನ್ಸಿಗಳ ನಡುವಿನ ಸಮನ್ವಯದ ಕೊರತೆಯಿಂದಾಗಿ ಫಲಾನುಭವಿಗಳಿಗೆ ಯೋಜನೆಯಡಿ ಒದಗಿಬೇಕಾದ ನಾಗರಿಕ ಮೂಲಸೌಕರ್ಯ ಸೌಲಭ್ಯಗಳನ್ನು ನೀಡಲಾಗಿಲ್ಲ ಎಂಬುದು ವಾಸ್ತವಾಂಶವಾಗಿದೆ.

[15] ಹರಿಜನಕೇರಿ ಗೋಕಾಕ್, ಗುಜ್ಜರಿ ಮೊಹಲ್ಲ ಕುಣಿಗಲ್ ಮತ್ತು ಮಧುಸುಬಾನಿ ಓಣಿ ಕೊಳೆಗೇರಿ ತೆಕ್ಕಲಕೋಟೆ

[16] ಸಂಸ್ಕರಿಸಿದ ನೀರಿನ ಮೂಲಗಳಿಗೆ ವೈಯಕ್ತಿಕ ಅಥವಾ ಸಮುದಾಯದ ಪ್ರವೇಶದ ಕೊರತೆ, ವೈಯಕ್ತಿಕ ಅಥವಾ ಸಮುದಾಯ ಶೌಚಾಲಯದ ಕೊರತೆ, ಟ್ರಂಕ್ ಸಿಟಿ ನೆಟ್ವರ್ಕ್ಗೆ ಒಳಚರಂಡಿ ವಿಲೇವಾರಿ ಕೊರತೆ/ಆನ್ ಸೈಟ್ ಸಂಸ್ಕರಣೆ ಮತ್ತು ವಿಲೇವಾರಿ, ಸ್ಟ್ರೋಮ್ ವಾಟರ್ ಡ್ರೈನ್/ಸ್ಟ್ರೋಮ್ ವಾಟರ್ ಡ್ರೈನ್ ಕೊರತೆ ಮತ್ತು ಕೊಳಚೆ ಮತ್ತು ಕಿರಿದಾದ ರಸ್ತೆಗಳು/ಮಾರ್ಗಗಳು ಮೂಲಭೂತ ಸೇವೆಗಳ ಪ್ರವೇಶ ಮತ್ತು ಪೂರೈಕೆಯಲ್ಲಿ ಅಡಚಣೆಗೆ ಕಾರಣವಾಗುತ್ತದೆ.

### 3.3.4 ಪೂರ್ಣಗೊಂಡ ಮನೆಗಳು ಖಾಲಿ ಉಳಿದಿರುವ ಕಾರಣ ಫಲಪ್ರದವಲ್ಲದ ವೆಚ್ಚ

ಪಿಎಮ್‌ಎವೈ(ಯು) ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳು ನೀರು, ನೈರ್ಮಲ್ಯ, ಒಳಚರಂಡಿ, ರಸ್ತೆ, ವಿದ್ಯುತ್ ಮುಂತಾದ ನಾಗರಿಕ ಮೂಲಸೌಕರ್ಯಗಳನ್ನು ಹೊಂದಿರುವುದನ್ನು ನಗರ ಸ್ಥಳೀಯ ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕೆಂದು ಯೋಜನೆ ಮಾರ್ಗಸೂಚಿಗಳ ಕಂಡಿಕೆ–2.2 ನಿಗದಿಪಡಿಸುತ್ತದೆ. ನೀರು ಸರಬರಾಜು, ಒಳಚರಂಡಿ, ರಸ್ತೆ ಮತ್ತು ವಿದ್ಯುತ್ ಸಂಪರ್ಕದಂತಹ ಸೌಲಭ್ಯಗಳ ಕೊರತೆಯಿಂದಾಗಿ ವಿಜಯಪುರ ಮತ್ತು ಬೆಳಗಾವಿ ನಗರದ ಮೂರು[17] ಯೋಜನೆಗಳಲ್ಲಿ ಎಎಚ್‌ಪಿ ಘಟಕದಡಿಯಲ್ಲಿ ನಿರ್ಮಿಸಲಾದ (ಫೆಬ್ರವರಿ 2021) 619 ಮನೆಗಳು ಖಾಲಿ ಉಳಿದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮನೆಗಳ ನಿರ್ಮಾಣ ಪೂರ್ಣಗೊಂಡಿದ್ದರೂ, ಮೂಲ ಸೌಕರ್ಯಗಳನ್ನು ಒದಗಿಸುವ ಕಾಮಗಾರಿಗಳನ್ನು ನಗರಪಾಲಿಕೆಗಳು ಇನ್ನೂ ಕೈಗೆತ್ತಿಕೊಳ್ಳಬೇಕಿತ್ತು (ಸೆಪ್ಟೆಂಬರ್ 2021).

ಸಂಬಂಧಿತ ಯುಎಲ್‌ಬಿಗಳು ಹಣ ಬಿಡುಗಡೆ ಮಾಡದ ಕಾರಣ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗಲಿಲ್ಲ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021). ಆದಾಗ್ಯೂ, ಹಣದ ಅಲಭ್ಯತೆಯನ್ನು ಪರಿಹರಿಸಲು ಸರ್ಕಾರವು ಯಾವುದೇ ಕ್ರಮ ತೆಗೆದುಕೊಂಡಿರುವ ಬಗ್ಗೆ ಉತ್ತರವು ಮೌನವಾಗಿದೆ.

[17] ವಿಜಯಪುರದಲ್ಲಿ 560 ಡಿಯುಗಳು, ವಿಜಯಪುರ (ಪಿಕೆಜಿಬಿ) ಯಲ್ಲಿ 56 ಡಿಯುಗಳು ಮತ್ತು ಬೆಳಗಾವಿಯಲ್ಲಿ 829 ಡಿಯುಗಳು

# ಅಧ್ಯಾಯ–IV

## ಫಲಾನುಭವಿ ನೇತೃತ್ವದ ವೈಯಕ್ತಿಕ ವಸತಿ ನಿರ್ಮಾಣ

### 4.1 ಪರಿಚಯ

ಬಿಎಲ್‌ಸಿ ಘಟಕದಡಿಯಲ್ಲಿ ಹೊಸ ಮನೆಗಳನ್ನು ನಿರ್ಮಿಸಲು ಅಥವಾ ಅಸ್ತಿತ್ವದಲ್ಲಿರುವ ಅವರ ಮನೆಗಳನ್ನು ಸ್ವಂತವಾಗಿ ಅಭಿವೃದ್ಧಿಗೊಳಿಸಲು ಇಡಬ್ಲ್ಯೂಎಸ್ ಫಲಾನುಭವಿಗಳಿಗೆ ₹1.50 ಲಕ್ಷ ಕೇಂದ್ರ ನೆರವನ್ನು ಒದಗಿಸಲಾಗುತ್ತದೆ. ಹಿಂದಿನ ರಾಜ್ಯ ವಲಯದ ವಸತಿ ಯೋಜನೆಗಳನ್ನು ಪಿಎಮ್‌ಎವೈ(ಯು) ನೊಂದಿಗೆ ಒಗ್ಗೂಡಿಸಲಾಯಿತು ಮತ್ತು ₹1.50 ಲಕ್ಷ ಕೇಂದ್ರದ ನೆರವಿನ ಜೊತೆಗೆ ಸಾಮಾನ್ಯ ಮತ್ತು ಎಸ್‌ಸಿ/ಎಸ್‌ಟಿ ಫಲಾನುಭವಿಗಳಿಗೆ ಕ್ರಮವಾಗಿ ₹1.20 ಲಕ್ಷ ಮತ್ತು ₹2.00 ಲಕ್ಷ ರಾಜ್ಯದ ನೆರವನ್ನು ಒದಗಿಸಲಾಯಿತು. ಒಗ್ಗೂಡಿಸದ ಯೋಜನೆಗಳಡಿಯಲ್ಲಿ ಫಲಾನುಭವಿಗಳು ಕೇವಲ ₹1.50 ಲಕ್ಷ ಕೇಂದ್ರದ ನೆರವು ಮಾತ್ರ ಪಡೆದಿದ್ದರು. ಮಾರ್ಚ್ 2021 ರಲ್ಲಿದ್ದಂತೆ ಅನುಮೋದಿಸಲಾದ ಬಿಎಲ್‌ಸಿ ಯೋಜನೆಗಳು ಮತ್ತು ವಸತಿ ಘಟಕಗಳ ಸಂಖ್ಯೆಯು ಈ ಕೆಳಗಿನಂತಿದೆ:

**ಕೋಷ್ಟಕ–4.1: 31 ಮಾರ್ಚ್ 2021ರಲ್ಲಿದ್ದಂತೆ ಅನುಮೋದಿತವಾದ ಬಿಎಲ್‌ಸಿ ಯೋಜನೆಗಳ ವಿವರಗಳು**

| ಬಿಎಲ್‌ಸಿ ಘಟಕ | ಅನುಮೋದಿತ ಯೋಜನೆಗಳ ಸಂಖ್ಯೆ | ಅನುಮೋದಿತ ವಸತಿ ಘಟಕಗಳ ಸಂಖ್ಯೆ |
|---|---|---|
| ಬಿಎಲ್‌ಸಿ (ಒಗ್ಗೂಡಿದ ರಾಜ್ಯ ಯೋಜನೆಗಳು) | 1380 | 143960 |
| ಬಿಎಲ್‌ಸಿ (ಒಗ್ಗೂಡಿಸದ ರಾಜ್ಯ ಯೋಜನೆಗಳು) | 792 | 68960 |
| **ಒಟ್ಟು** | **2172** | **212920** |

ಆಧಾರ: ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ

ಬಿಎಲ್‌ಸಿ ಘಟಕದ 2172 ಯೋಜನೆಗಳಡಿಯಲ್ಲಿ ಅನುಮೋದಿಸಲಾದ 2,12,920 ವಸತಿ ಘಟಕಗಳಲ್ಲಿ ಕೇವಲ 66,558 ವಸತಿ ಘಟಕಗಳು (ಶೇಕಡಾ 31) ಮಾತ್ರ ಪೂರ್ಣಗೊಂಡಿದ್ದವು ಮತ್ತು 98,725 ವಸತಿ ಘಟಕಗಳು (ಶೇಕಡಾ 46) ಮಾರ್ಚ್ 2021 ರಲ್ಲಿದ್ದಂತೆ ಇನ್ನೂ ಪ್ರಾರಂಭವಾಗಬೇಕಿದೆ.

ಮೇಲಿನ ಯೋಜನೆಗಳ ಒಟ್ಟು ಹಣಕಾಸಿನ ವೆಚ್ಚವು ₹ 8225.88 ಕೋಟಿಗಳಾಗಿದ್ದು ಅದರಲ್ಲಿ ಭಾರತ ಸರ್ಕಾರದ ಪಾಲು ₹3317.90 ಕೋಟಿಗಳು ಮತ್ತು ಕರ್ನಾಟಕ ಸರ್ಕಾರದ ಪಾಲು ₹ 2466.04 ಕೋಟಿಗಳು. ಬಾಕಿ ವೆಚ್ಚವನ್ನು ಫಲಾನುಭವಿಗಳೇ ಭರಿಸಬೇಕಿತ್ತು. 31 ಮಾರ್ಚ್ 2021 ರಂತೆ ಬಿಎಲ್‌ಸಿ ಘಟಕಗಳ ಅಡಿಯಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವರ್ಷವಾರು ಪಾಲು ಬಿಡುಗಡೆಗಳು ಮತ್ತು ವೆಚ್ಚವನ್ನು **ಕೋಷ್ಟಕ 4.2** ರಲ್ಲಿ ಸೂಚಿಸಲಾಗಿದೆ.

**ಕೋಷ್ಟಕ 4.2: ಬಿಎಲ್‌ಸಿ ಘಟಕಗಳ ಅಡಿಯಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವರ್ಷವಾರು ಪಾಲು ಬಿಡುಗಡೆಗಳು ಮತ್ತು ವೆಚ್ಚ.**

**(₹ ಕೋಟಿಗಳಲ್ಲಿ)**

| ವರ್ಷ | ಬಿಡುಗಡೆಯಾದ ಅನುದಾನ | | | ಮಾಡಲಾದ ವೆಚ್ಚ | | |
|---|---|---|---|---|---|---|
| | ಭಾರತ ಸರ್ಕಾರದ ಪಾಲು | ರಾಜ್ಯ ಸರ್ಕಾರದ ಪಾಲು | ಒಟ್ಟು | ಭಾರತ ಸರ್ಕಾರದ ಪಾಲು | ರಾಜ್ಯ ಸರ್ಕಾರದ ಪಾಲು | ಒಟ್ಟು |
| 2015–16 | --- | 13.28 | 13.28 | --- | 13.28 | 13.28 |
| 2016–17 | --- | 183.92 | 183.92 | 48.37 | 183.92 | 232.29 |
| 2017–18 | 357.24 | 524.80 | 882.04 | 177.64 | 524.80 | 702.44 |
| 2018–19 | 224.61 | 330.48 | 555.09 | 494.22 | 330.48 | 824.70 |
| 2019–20 | 221.78 | 123.16 | 344.94 | 102.25 | 123.16 | 225.41 |
| 2020–21 | 360.20 | 80.02 | 440.22 | 38.89 | 80.02 | 118.91 |
| **ಒಟ್ಟು** | **1163.83** | **1255.66** | **2419.49** | **861.37** | **1255.66** | **2117.03** |

ಆಧಾರ: ಆರ್‌ಜಿಹೆಚ್‌ಸಿಎಲ್ ಒದಗಿಸಿದ ಮಾಹಿತಿ

31 ಮಾರ್ಚ್ 2021 ರಂತೆ, ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರವು ತಮ್ಮ ಅನುಮೋದಿತ ₹5783.94 ಕೋಟಿಗಳಲ್ಲಿ ಕೇವಲ ₹2419.49 ಕೋಟಿಗಳನ್ನು (ಶೇಕಡಾ 42) ಬಿಡುಗಡೆ ಮಾಡಿದೆ. ಘಟಕಗಳ ಅಡಿಯಲ್ಲಿ ಕಳಪೆ ಪ್ರಗತಿಗೆ ಕಾರಣಗಳನ್ನು ಕೆಳಗೆ ನೀಡಲಾಗಿದೆ:

## 4.2 ಫಲಾನುಭವಿಗಳನ್ನು ಲಗತ್ತಿಸುವ ಕೊರತೆಯಿಂದಾಗಿ ಕೇಂದ್ರದ ನೆರವನ್ನು ಬಿಡುಗಡೆ ಮಾಡದಿರುವುದು

ಅನುಮೋದಿತ 2172 ಬಿಎಲ್‌ಸಿ ಯೋಜನೆಗಳಿಗೆ ಭಾರತ ಸರ್ಕಾರದ ಒಟ್ಟು ಪಾಲು ₹3317.90 ಕೋಟಿಯಾಗಿತ್ತು. ಸಿಎಸ್‌ಎಮ್‌ಸಿಯ ಅನುಮೋದನೆಯ ನಂತರ ರಾಜ್ಯಗಳಿಗೆ ವಿವಿಧ ಘಟಕಗಳಡಿಯಲ್ಲಿ ಕೇಂದ್ರದ ನೆರವನ್ನು ಶೇಕಡಾ 40, ಶೇಕಡಾ 40 ಮತ್ತು ಶೇಕಡಾ 20ರ ಮೂರು ಕಂತುಗಳಲ್ಲಿ ಬಿಡುಗಡೆ ಮಾಡಬೇಕೆಂದು ಪಿಎಂಎವೈ(ಯು) ಮಾರ್ಗಸೂಚಿಗಳು ನಿಗದಿಪಡಿಸಿದ್ದವು. ಯೋಜನೆಯಲ್ಲಿ ಎಲ್ಲಾ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನು ಲಿಂಕ್ ಮಾಡಿದ ನಂತರ ಮಾತ್ರ ಬಿಎಲ್‌ಸಿ ಯೋಜನೆಗಳಿಗೆ ಕೇಂದ್ರದ ಸಹಾಯದ ಮೊದಲ ಕಂತನ್ನು ಬಿಡುಗಡೆ ಮಾಡಬೇಕೆಂದು ಸಿಎಸ್‌ಎಮ್‌ಸಿ ಸಹ ಸೂಚಿಸಿತ್ತು (ಅಕ್ಟೋಬರ್ 2017). 27ನೇ ಸಭೆಯ ನಂತರ ಸಿಎಸ್‌ಎಮ್‌ಸಿ ಅನುಮೋದಿಸಿದ 1720 ಬಿಎಲ್‌ಸಿ ಯೋಜನೆಗಳಲ್ಲಿ ಕೇವಲ 1231 ಯೋಜನೆಗಳಲ್ಲಿ (72 ಶೇಕಡಾ) ಮಾತ್ರ ಎಲ್ಲಾ ಫಲಾನುಭವಿಗಳ ಆಧಾರ್ ಲಿಂಕಿಂಗ್ ಪೂರ್ಣಗೊಂಡಿತ್ತು (ಮಾರ್ಚ್ 2021). ಉಳಿದ ಯೋಜನೆಗಳಲ್ಲಿ ಫಲಾನುಭವಿಗಳ ಆಧಾರ್ ಲಿಂಕಿಂಗ್ ಪೂರ್ಣಗೊಂಡಿರಲಿಲ್ಲ ಮತ್ತು ಪಿಎಮ್‌ಎವೈ ಎಮ್‌ಐಎಸ್ ಲಗತ್ತಿಸಲಾಗಿಲ್ಲವಾದ್ದರಿಂದ, ಭಾರತ ಸರ್ಕಾರ ತನ್ನ ಪಾಲಿನ ಮೊದಲ ಕಂತಾದ ₹569.56 ಕೋಟಿಯನ್ನು ಬಿಡುಗಡೆ ಮಾಡಲಿಲ್ಲ.

## 4.3 ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ಬಿಡುಗಡೆ ಮಾಡದಿರುವುದು

ಯೋಜನೆಯ ಬಿಎಲ್‌ಸಿ ಘಟಕದಡಿಯಲ್ಲಿ ಆರ್ಥಿಕ ನೆರವನ್ನು ಮರುಪಾವತಿ ಆಧಾರದ ಮೇಲೆ, ಅಂದರೆ ನಿರ್ಮಾಣದಲ್ಲಿ ಸಾಧಿಸಿದ ಪ್ರಗತಿಗೆ ಪ್ರತಿಯಾಗಿ, ಬಿಡುಗಡೆ ಮಾಡಲಾಗಿತ್ತು. ಹಾಗಾಗಿ ಯೋಜನೆಯಡಿಯಲ್ಲಿ

ಕೈಗೆತ್ತಿಕೊಂಡ ಮನೆಗಳನ್ನು ಪೂರ್ಣಗೊಳಿಸಲು ನೆರವನ್ನು ಸಮಯೋಚಿತವಾಗಿ ಬಿಡುಗಡೆ ಮಾಡುವುದು ನಿರ್ಣಾಯಕವಾಗಿದೆ. ನಿರ್ಮಾಣದ ಪ್ರಗತಿಯನ್ನು ಆಧರಿಸಿ ನಾಲ್ಕು ಕಂತುಗಳಲ್ಲಿ ನೇರ ಪ್ರಯೋಜನ ವರ್ಗಾವಣೆ (ಡಿಬಿಟಿ) ಮೂಲಕ ಫಲಾನುಭವಿಗಳಿಗೆ ಪಾವತಿಗಳನ್ನು ಮಾಡಲಾಗಿತ್ತು. ಫಲಾನುಭವಿಗಳು ಸ್ವೀಕರಿಸಿದ ಹಂತವಾರು ಪಾವತಿಗಳಿಗೆ[18] ಸಂಬಂಧಿಸಿದ ದತ್ತಾಂಶದ ಲೆಕ್ಕಪರಿಶೋಧನಾ ವಿಶ್ಲೇಷಣೆಯು, **ಕೋಷ್ಟಕ-4.3**ರಲ್ಲಿ ಸೂಚಿಸಿದಂತೆ, ನಿರ್ಮಾಣದಲ್ಲಿನ ಪ್ರಗತಿಗೆ ಅನುಗುಣವಾಗಿ ಆರ್ಥಿಕ ನೆರವಿನ ಕೊರತೆಯನ್ನು ತಿಳಿಯಪಡಿಸಿತು:

**ಕೋಷ್ಟಕ-4.3: 31 ಮಾರ್ಚ್ 2021ರಲ್ಲಿದ್ದಂತೆ ಬಿಎಲ್‌ಸಿ ಘಟಕದಡಿಯಲ್ಲಿ ಫಲಾನುಭವಿಗಳು ಪಡೆದ ಹಂತವಾರು ಪಾವತಿಯ ವಿವರಗಳು**

| ಪಿಎಮ್‌ಎವೈ ಎಮ್‌ಐಎಸ್ ಅನ್ವಯ ಪ್ರಗತಿಯ ಸ್ಥಿತಿ | ಕೇಂದ್ರ ನೆರವು (ಒಟ್ಟುಗೂಡಿಸಿದ ರಾಜ್ಯ ಯೋಜನೆಗಳು) | | ರಾಜ್ಯ ಯೋಜನೆಗಳು (ಒಟ್ಟುಗೂಡಿಸಿದ ರಾಜ್ಯ ಯೋಜನೆಗಳು) | | ಕೇಂದ್ರ ನೆರವು (ಒಟ್ಟುಗೂಡಿಸದ ಯೋಜನೆಗಳು) | |
|---|---|---|---|---|---|---|
| | ಮನೆಗಳ ಸಂಖ್ಯೆ | ಪಾವತಿ ಸ್ವೀಕರಿಸಿದ ಫಲಾನುಭವಿಗಳ ಸಂಖ್ಯೆ | ಮನೆಗಳ ಸಂಖ್ಯೆ | ಪಾವತಿ ಸ್ವೀಕರಿಸಿದ ಫಲಾನುಭವಿಗಳ ಸಂಖ್ಯೆ | ಮನೆಗಳ ಸಂಖ್ಯೆ | ಪಾವತಿ ಸ್ವೀಕರಿಸಿದ ಫಲಾನುಭವಿಗಳ ಸಂಖ್ಯೆ |
| ತಳಹದಿ | 4323 | 2436 | 8158 | 5352 | 12489 | 3087 |
| ಲಿಂಟಲ್ | 4089 | 2419 | 7330 | 5173 | 763 | 99 |
| ಛಾವಣಿ | 6229 | 3530 | 10179 | 7492 | 747 | 43 |
| **ಒಟ್ಟು** | **14641** | **8385** | **25667** | **18017** | **13999** | **3229** |

**ಆಧಾರ: ಆರ್‌ಜಿಹೆಚ್‌ಸಿಎಲ್ ನಿಂದ ಪಡೆದ ಮಾಹಿತಿ**

ಮೇಲಿನ ಕೋಷ್ಟಕದಿಂದ ಗಮನಿಸಿದಂತೆ ಫಲಾನುಭವಿಗಳು ನಿರ್ಮಾಣದ ನಿಗದಿತ ಪ್ರಗತಿಯನ್ನು ಸಾಧಿಸಿದ್ದರೂ ಸಹ ರಾಜ್ಯದ ಒಟ್ಟುಗೂಡಿಸಿದ ಮತ್ತು ಒಟ್ಟುಗೂಡಿಸದ ಯೋಜನೆಗಳಿಗೆ ಸಂಬಂಧಿಸಿದಂತೆ 6256 (ಶೇಕಡಾ 43) ಮತ್ತು 10770 (ಶೇಕಡಾ 77) ಪ್ರಕರಣಗಳಲ್ಲಿ ಪಾವತಿಗೆ ಕೇಂದ್ರದ ಪಾಲು ಬಾಕಿ ಉಳಿದಿತ್ತಾದರೆ ಒಟ್ಟುಗೂಡಿಸಿದ ಯೋಜನೆಗಳಲ್ಲಿ ರಾಜ್ಯದ ಪಾಲು 7650 ಪ್ರಕರಣಗಳಲ್ಲಿ (ಶೇಕಡಾ 30) ಪಾವತಿಗೆ ಬಾಕಿ ಉಳಿದಿತ್ತು. ಪಾವತಿಗಳನ್ನು ಬಿಡುಗಡೆ ಮಾಡದ ಕಾರಣ ಫಲಾನುಭವಿಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸಲಿಲ್ಲ ಮತ್ತು ತತ್ಪರಿಣಾಮವಾಗಿ ಕಾಮಗಾರಿಯು ಸ್ಥಗಿತಗೊಂಡಿತ್ತು.

ಜಂಟಿ ತಪಾಸಣೆಯ ಸಂದರ್ಭದಲ್ಲಿ ರಾಜ್ಯದ ಒಟ್ಟುಗೂಡಿಸಿದ ಬಿಎಲ್‌ಸಿ ಯೋಜನೆಗಳಡಿಯಲ್ಲಿ ತೆಗೆದುಕೊಳ್ಳಲಾದ 111 ಅಪೂರ್ಣ ಮನೆಗಳಿಗೆ ಲೆಕ್ಕಪರಿಶೋಧನೆಯು ಭೇಟಿ ನೀಡಿತು. ಭೇಟಿ ನೀಡಿದ 111 ಮನೆಗಳಲ್ಲಿ, 69 ಮತ್ತು 12 ಮನೆಗಳಿಗೆ ಸಂಬಂಧಿಸಿದಂತೆ ಭೌತಿಕ ಪ್ರಗತಿಯ ನೈಜ ಹಂತಗಳಿಗೆ ಅನುಗುಣವಾಗಿ ಕೇಂದ್ರ ಮತ್ತು ರಾಜ್ಯ ನೆರವನ್ನು ಬಿಡುಗಡೆ ಮಾಡಿರಲಿಲ್ಲ. ಕೇಂದ್ರದ ನೆರವು ಬಿಡುಗಡೆಯಾಗದ 69 ಫಲಾನುಭವಿಗಳ ಪೈಕಿ 53 ಫಲಾನುಭವಿಗಳನ್ನು ಫಲಾನುಭವಿ ಸಮೀಕ್ಷೆಯಲ್ಲಿ ಲೆಕ್ಕಪರಿಶೋಧನೆಯು ಸಂದರ್ಶಿಸಿತು. ಸರ್ಕಾರದಿಂದ ಆರ್ಥಿಕ ನೆರವು ಬಿಡುಗಡೆಯಾಗದ ಕಾರಣ ತಾವು ಪ್ರಾರಂಭಿಸಿದ ಮನೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಎಂದು ಅವರು ಪ್ರತಿಕ್ರಿಯಿಸಿದರು. ಒಟ್ಟುಗೂಡಿಸದ ಯೋಜನೆಯಡಿಯಲ್ಲಿ ಮಂಜೂರಾದ 164 ಮನೆಗಳಿಗೆ ಲೆಕ್ಕಪರಿಶೋಧನೆಯು ಜಂಟಿ ತಪಾಸಣೆ ಮಾಡಿ 124 ಫಲಾನುಭವಿಗಳ ಸಮೀಕ್ಷೆ ನಡೆಸಿತು. ಸಮೀಕ್ಷೆಯಲ್ಲಿ ಕೆಳಕಂಡ ಅಂಶಗಳು ಕಂಡುಬಂದವು:

[18] ಪೂರ್ಣಗೊಂಡಿರುವುಗಳನ್ನು ಹೊರತುಪಡಿಸಿ

- 51 ಪ್ರಕರಣಗಳಲ್ಲಿ ಕಾಮಗಾರಿಗಳು ಇನ್ನೂ ಪ್ರಾರಂಭವಾಗಬೇಕಿದೆ ಮತ್ತು 61 ಪ್ರಕರಣಗಳಲ್ಲಿ ಅಪೂರ್ಣವಾಗಿವೆ. ನಿರ್ಮಾಣ ಪೂರ್ಣಗೊಳಿಸಿದ ಕೇವಲ ಐದು ಫಲಾನುಭವಿಗಳಿಗೆ ಮಾತ್ರ ಕೇಂದ್ರದ ನೆರವು ಬಿಡುಗಡೆಯಾಗಿದೆ.
- ಸರ್ಕಾರದಿಂದ ಕೇವಲ ₹1.50 ಲಕ್ಷದ ನೆರವಿನಲ್ಲಿ ಮನೆಗಳನ್ನು ನಿರ್ಮಿಸುವುದು ಆರ್ಥಿಕವಾಗಿ ಲಾಭದಾಯಕವಲ್ಲ ಮತ್ತು ಕಾಮಗಾರಿಗಳನ್ನು ಪ್ರಾರಂಭಿಸಲು ಸಿದ್ಧರಿಲ್ಲ ಎಂದು ಸಮೀಕ್ಷೆ ನಡೆಸಿದ 37 ಫಲಾನುಭವಿಗಳು ತಿಳಿಸಿದರು.
- ಸಹಾಯಧನ ಬಿಡುಗಡೆಯಾಗದ ಕಾರಣ 43 ಫಲಾನುಭವಿಗಳು ಮನೆ ನಿರ್ಮಾಣವನ್ನು ಅರ್ಧಕ್ಕೆ ನಿಲ್ಲಿಸಿದ್ದು, ಇದ್ದ ಮನೆಗಳನ್ನು ಕೆಡವಿ ತಾತ್ಕಾಲಿಕ ಶೆಡ್‌ಗಳಲ್ಲಿ ವಾಸಿಸುತ್ತಿದ್ದಾರೆ.

ಮಾರ್ಚ್ 2021ರ ಅಂತ್ಯಕ್ಕೆ ಯೋಜನಾ ಖಾತೆಯಲ್ಲಿ ₹566.53 ಕೋಟಿ ಲಭ್ಯವಿದ್ದರೂ ಸಹ ಎಸ್‌ಎಲ್‌ಎನ್‌ಎ ಫಲಾನುಭವಿಗಳಿಗೆ ಪಾವತಿಗಳನ್ನು ಬಿಡುಗಡೆ ಮಾಡಲಿಲ್ಲ. ಸಕಾಲದಲ್ಲಿ ಪಾವತಿಗಳನ್ನು ಬಿಡುಗಡೆ ಮಾಡದ ಕಾರಣ ಫಲಾನುಭವಿಗಳಿಗೆ ಕಷ್ಟದ ಜೊತೆಗೆ ಕೆಲಸದ ಪ್ರಗತಿಯೂ ಸಹ ಸ್ಥಗಿತಗೊಳಿಸಿತು. ಮನೆಗಳ ನಿರ್ಮಾಣಕ್ಕೆ ನಿಯಮಿತವಾಗಿ ಹಣದ ಹರಿವಿನ ನಿರೀಕ್ಷೆಯಲ್ಲಿ ಅವರು ತಮ್ಮ ಹಳೆಯ ಮನೆಗಳನ್ನು ನೆಲಸಮ ಮಾಡಿದ್ದರು.

ಫಲಾನುಭವಿಗಳ ಆಯ್ಕೆ, ಡಿಪಿಆರ್ ಅನುಮೋದನೆ ಮತ್ತು ಭಾರತ ಸರ್ಕಾರದಿಂದ ಕಂತುಗಳ ಬಿಡುಗಡೆಯ ನಡುವಿನ ಸಮಯದ ಅಂತರದಿಂದಾಗಿ ವಿಳಂಬವಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021).

**ಕಂಡಿಕೆ–4.2ರಲ್ಲಿ** ಚರ್ಚಿಸಿದಂತೆ ಫಲಾನುಭವಿಗಳ ಲಗತ್ತಿಸುವಿಕೆಯಲ್ಲಿನ ಕೊರತೆಯಿಂದಾಗಿ ಭಾರತ ಸರ್ಕಾರದ ಕಂತುಗಳ ಬಿಡುಗಡೆಯಲ್ಲಿ ವಿಳಂಬವಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

## 4.4 ಅಪೂರ್ಣ ಮನೆಗಳ ಮೇಲೆ ಫಲಪ್ರದವಲ್ಲದ ವೆಚ್ಚ

ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳನ್ನು ಪೂರ್ಣಗೊಳಿಸಲು ಯೋಜನೆಯ ಮಾರ್ಗಸೂಚಿಗಳು ಯಾವುದೇ ಕಾಲಮಿತಿಯನ್ನು ನಿರ್ದಿಷ್ಟಪಡಿಸಿರಲಿಲ್ಲ. ಕಾರ್ಯಾದೇಶವನ್ನು ಜಾರಿ ಮಾಡಿದ 15 ದಿನಗಳಲ್ಲಿ ನಿರ್ಮಾಣವನ್ನು ಪ್ರಾರಂಭಿಸಬೇಕು ಮತ್ತು ಆರು ತಿಂಗಳೊಳಗೆ ಪೂರ್ಣಗೊಳಿಸಬೇಕು ಎಂದು ಎಸ್‌ಎಲ್‌ಎನ್‌ಎ ಹೊರಡಿಸಿದ ಕಾರ್ಯಾದೇಶದಲ್ಲಿ ಸೂಚಿಸಲಾಗಿತ್ತು. 2016–18ರ ಅವಧಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ₹29.22 ಕೋಟಿ ಮೊದಲ ಕಂತು ಪಡೆದ 5352 ಬಿಎಲ್‌ಸಿ ಫಲಾನುಭವಿಗಳು ಮತ್ತು ₹57.95 ಕೋಟಿ ಎರಡನೇ ಕಂತು ಪಡೆದ 5173 ಫಲಾನುಭವಿಗಳು ಮುಂದಿನ ಕಂತುಗಳನ್ನು ಪಡೆಯಲು ಇನ್ನೂ ಮುಂದೆ ಬಂದಿರಲಿಲ್ಲ (ಮಾರ್ಚ್ 2021) ಎಂದು ಪಾವತಿಯ ದತ್ತಾಂಶಗಳ ವಿಶ್ಲೇಷಣೆಯಲ್ಲಿ ತಿಳಿದುಬಂದಿತು. ಕಾರ್ಯಾದೇಶ ನೀಡಿದ ದಿನಾಂಕದಿಂದ ಮೂರರಿಂದ ಐದು ವರ್ಷಗಳು ಕಳೆದರೂ ಈ ಮನೆಗಳು ಅಪೂರ್ಣವಾಗಿಯೇ ಉಳಿದಿದ್ದರಿಂದ ₹87.17 ಕೋಟಿ ವೆಚ್ಚ ಫಲಪ್ರದವಾಗಲಿಲ್ಲ.

ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ ನೆರವನ್ನು ಬಿಡುಗಡೆ ಮಾಡದಿರುವುದಕ್ಕೆ ಫಲಾನುಭವಿಗಳ ಜೋಡಣೆಯಲ್ಲಿನ ನಿಧಾನಗತಿಯ ಪ್ರಗತಿಯಿಂದಾಗಿ ಭಾರತ ಸರ್ಕಾರದ ಕಂತುಗಳ ಬಿಡುಗಡೆಯ ವಿಳಂಬಕ್ಕೆ ಅಧ್ಯಾರೋಪಿಸಿತು (ಸೆಪ್ಟೆಂಬರ್ 2021).

ಲೆಕ್ಕಪರಿಶೋಧನೆಯು ಮನೆಗಳನ್ನು ಪೂರ್ಣಗೊಳಿಸದಿರುವುದಕ್ಕೆ ಸಂಬಂಧಿಸಿದ್ದು ಮತ್ತು ಅದು ಫಲಾನುಭವಿಗಳಿಗೆ ಸಹಾಯದ ಬಿಡುಗಡೆಯಲ್ಲಿ ವಿಳಂಬದ ಬಗ್ಗೆಯಾಗಿರದ ಕಾರಣ ಉತ್ತರವನ್ನು ಒಪ್ಪಲಾಗುವುದಿಲ್ಲ.

## 4.5 ನೇರ ಪ್ರಯೋಜನ ವರ್ಗಾವಣೆ

2016–21ರಲ್ಲಿ 95671 ಬಿಎಲ್‌ಸಿ ಫಲಾನುಭವಿಗಳ ಖಾತೆಗೆ ₹2117.03 ಕೋಟಿ ಮೊತ್ತದ ಆರ್ಥಿಕ ನೆರವನ್ನು ನೇರವಾಗಿ ವರ್ಗಾಯಿಸಲಾಗಿದೆ. ಅವರ ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್ (ಜಿಪಿಎಸ್) ಛಾಯಾಚಿತ್ರಗಳನ್ನು ಲೆಕ್ಕಪರಿಶೋಧನೆ ಮಾಡಲಾಯಿತು ಹಾಗೂ ಸರಿಯಾಗಿವೆ ಎಂದು ಕಂಡುಬಂದಿದೆ. ನೇರ ಪ್ರಯೋಜನ ವರ್ಗಾವಣೆಯನ್ನು (ಡಿಬಿಟಿ) ಆಗಸ್ಟ್ 2020ರವರೆಗೆ (ಆರ್‌ಜಿಹೆಚ್‌ಸಿಎಲ್‌ನ ಎಮ್‌ಐಎಸ್) ಮಾಹಿತಿ ತಂತ್ರಜ್ಞಾನ ವೇದಿಕೆಯ ಮೂಲಕ ಮತ್ತು ನಂತರ ಕರ್ನಾಟಕ ಸರ್ಕಾರದ ಸೆಂಟರ್ ಫಾರ್ ಇ–ಗವರ್ನೆನ್ಸ್, ಡಿಬಿಟಿ ಪ್ಲಾಟ್‌ಫಾರ್ಮ್ ಮೂಲಕ ನಡೆಸಲಾಯಿತು. ವ್ಯವಸ್ಥೆಯ ಕಾರ್ಯಾಚರಣೆಯನ್ನು ಕೆಳಗಿನ **ನಕ್ಷೆ–4.1**ರಲ್ಲಿ ನೀಡಲಾಗಿದೆ:

**ನಕ್ಷೆ–4.1: ನೇರ ಪ್ರಯೋಜನ ವರ್ಗಾವಣೆ ಪ್ರಕ್ರಿಯೆ**




ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನಾ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ:

### 4.5.1 ದೃಢೀಕರಣವಿಲ್ಲದೇ ಬಿಎಲ್‌ಸಿ ಫಲಾನುಭವಿಗಳಿಗೆ ನೇರ ಪ್ರಯೋಜನ ವರ್ಗಾವಣೆ

**ಪಿಎಮ್‌ಎವೈ ಎಮ್‌ಐಎಸ್ ದತ್ತಸಂಚಯ**

- ಸಚಿವಾಲಯ, ರಾಜ್ಯ ಸರ್ಕಾರ, ಎಸ್‌ಎಲ್‌ಎನ್‌ಎ, ಯುಎಲ್‌ಬಿಗಳು ಮತ್ತು ಫಲಾನುಭವಿಗಳ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸಲು ಪಿಎಮ್‌ಎವೈ ಎಮ್‌ಐಎಸ್‌ಅನ್ನು ಸಕ್ರಿಯಗೊಳಿಸಲಾಗಿದೆ
- ಅನುಮೋದಿತ ಯೋಜನೆಗಳಿಗೆ ಲಗತ್ತಿಸುವ ಸಮಯದಲ್ಲಿ ಫಲಾನುಭವಿಗಳ ಆಧಾರ್ ಸಂಖ್ಯೆಯ ದೃಢೀಕರಣವನ್ನು ಪರಿಶೀಲಿಸಲು ಯುಐಡಿಎಐ ಪ್ಲಾಟ್‌ಫಾರ್ಮ್‌ಗೆ ಸಂಯೋಜಿಸಲಾಗಿದೆ

ನಕಲು ಮಾಡುವುದನ್ನು ತಪ್ಪಿಸಲು ಮತ್ತು ಫಲಾನುಭವಿಗಳನ್ನು ದೃಢೀಕರಿಸಿ ಆ ಮೂಲಕ ಯೋಜನೆಗಳ ಅನುಮೋದನೆಯ ಸಮಯದಲ್ಲಿ ಅವರ ಅರ್ಹತೆಯನ್ನು ಖಚಿತಪಡಿಸಲು ಆಧಾರ್ ಸಂಖ್ಯೆ ಅಥವಾ ಉದ್ದೇಶಿತ ಫಲಾನುಭವಿಗಳ ಯಾವುದೇ ವಿಶಿಷ್ಟ ಗುರುತಿನ ವಿವರಗಳನ್ನು ದತ್ತಸಂಚಯದಲ್ಲಿ ಸಂಯೋಜಿಸುವುದನ್ನು ಪಿಎಮ್‌ಎವೈ(ಯು) ಮಾರ್ಗಸೂಚಿಗಳ ಕಂಡಿಕೆ–5.7 ಮತ್ತು 8.4, ಕಡ್ಡಾಯ ಮಾಡಿವೆ. ನೇರ ಪ್ರಯೋಜನ ವರ್ಗಾವಣೆ ಮಾಡುವ ಮೊದಲು, ಆಧಾರ್ ದೃಢೀಕರಣದ ಮೂಲಕ ಫಲಾನುಭವಿಯನ್ನು ಪಿಎಮ್‌ಎವೈ ಎಮ್‌ಐಎಸ್‌ಗೆ ಲಗತ್ತಿಸುವುದನ್ನು ಕಡ್ಡಾಯಗೊಳಿಸಲಾಗಿತ್ತು.

ಪಿಎಮ್‌ಎವೈ ಎಮ್‌ಐಎಸ್ ದತ್ತಾಂಶದೊಂದಿಗೆ ಕೇಂದ್ರ ಮತ್ತು ರಾಜ್ಯಗಳ ಪಾಲು ಬಿಡುಗಡೆಗೆ ಸಂಬಂಧಿಸಿದ ದತ್ತಾಂಶದ ಮ್ಯಾಪಿಂಗ್‌ನಲ್ಲಿ, ನೇರ ಪ್ರಯೋಜನ ವರ್ಗಾವಣೆ ಮೂಲಕ ರಾಜ್ಯ ಮತ್ತು ಕೇಂದ್ರದ ಪಾಲನ್ನು

ಬಿಡುಗಡೆ ಮಾಡಿದ 62,648 ಬಿಎಲ್‌ಸಿ ಫಲಾನುಭವಿಗಳಲ್ಲಿ 12,757 ಫಲಾನುಭವಿಗಳನ್ನು (ಶೇಕಡಾ 20) ಎಮ್‌ಐಎಸ್ ದತ್ತಸಂಚಯಕ್ಕೆ ಲಗತ್ತಿಸದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಹೀಗೆ, ಮಾರ್ಗಸೂಚಿಯಲ್ಲಿ ಸೂಚಿಸಲಾದ ದೃಢೀಕರಣ ಪ್ರಕ್ರಿಯೆಯಿಲ್ಲದೆ ಈ 12757 ಫಲಾನುಭವಿಗಳಿಗೆ ₹172.64 ಕೋಟಿ ಪಾವತಿ ಮಾಡಲಾಗಿದೆ. ಇದು ಫಲಾನುಭವಿಗಳ ಒಂದಕ್ಕಿಂತ ಹೆಚ್ಚು ಯೋಜನೆಗಳಿಗೆ ಲಗತ್ತಿಸುವಿಕೆಗೆ ಮತ್ತು ಈ ಕೆಳಗೆ ವಿವರಿಸಿದಂತೆ ಫಲಾನುಭವಿಗಳಿಗೆ ನಕಲು ಪಾವತಿಗೆ ಕಾರಣವಾಯಿತು:

#### *4.5.1.1. ಆರ್ಥಿಕ ನೆರವಿನ ಅಧಿಕ ಪಾವತಿ ₹1.30 ಕೋಟಿ*

ನೇರ ಪ್ರಯೋಜನ ವರ್ಗಾವಣೆ ಮೂಲಕ ಪಾವತಿಗಳ ದೃಢೀಕರಣ ಮತ್ತು ಬಿಡುಗಡೆಗಾಗಿ ಫಲಾನುಭವಿ ಕೋಡ್ ಗುರುತಿನ ಕ್ಷೇತ್ರವಾಗಿದೆ. ಆದ್ದರಿಂದ ನಕಲು ಪಾವತಿಗಳನ್ನು ತಡೆಯಲು ಬಹು ಫಲಾನುಭವಿ ಕೋಡ್‌ಗಳ ಉತ್ಪಾದನೆಯನ್ನು ತಡೆಯಲು ವ್ಯವಸ್ಥೆಯು ನಿಯಂತ್ರಣ ಕಾರ್ಯವಿಧಾನವನ್ನು ಹೊಂದಿರಬೇಕು.

ಒಂದೇ ಫಲಾನುಭವಿಗೆ ನಕಲಿ ಪಾವತಿಗಳನ್ನು ಸುಗಮಗೊಳಿಸಿದ ಬಹು ಫಲಾನುಭವಿ ಕೋಡ್‌ಗಳ ಉತ್ಪಾದನೆಯನ್ನು ವ್ಯವಸ್ಥೆಯು ಅನುಮತಿಸಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಉದಾಹರಣೆಗೆ, ಕೇಂದ್ರ ಮತ್ತು ರಾಜ್ಯ ನೆರವಿನ ಬಿಡುಗಡೆಗಾಗಿ ವಿವಿಧ ಫಲಾನುಭವಿ ಕೋಡ್‌ಗಳನ್ನು ರಚಿಸಲಾಗಿತ್ತು. 71 ಪ್ರಕರಣಗಳಲ್ಲಿ (**ಅನುಬಂಧ**–4.1) ಕೇಂದ್ರ ಸಹಾಯದಡಿಯಲ್ಲಿ ಪ್ರಯೋಜನಗಳನ್ನು ಮತ್ತು 40 ಪ್ರಕರಣಗಳಲ್ಲಿ (**ಅನುಬಂಧ**–4.2) ರಾಜ್ಯ ಸಹಾಯದ ಅಡಿಯಲ್ಲಿ ಪ್ರಯೋಜನಗಳನ್ನು ಒಂದೇ ಫಲಾನುಭವಿಗೆ ಎರಡು ಬಾರಿ ಬಿಡುಗಡೆ ಮಾಡಲಾಗಿದೆ ಎಂಬುದನ್ನು ಪಾವತಿಯ ದತ್ತಾಂಶದ ವಿಶ್ಲೇಷಣೆಯು ತಿಳಿಯಪಡಿಸಿತು. ಮೇಲಿನ ಫಲಾನುಭವಿಗಳಿಗೆ ಮಾಡಿದ ಹೆಚ್ಚುವರಿ ಪಾವತಿಯು ₹1.30 ಕೋಟಿಗಳಾಗಿತ್ತು. ಹೀಗೆ, ಒಂದೇ ಫಲಾನುಭವಿಗೆ ಬಹು ಫಲಾನುಭವಿ ಕೋಡ್‌ಗಳ ಉತ್ಪಾದನೆಯು ನೇರ ಪ್ರಯೋಜನ ವರ್ಗಾವಣೆ ಪಾವತಿಗಳನ್ನು ಬಿಡುಗಡೆ ಮಾಡುವ ಮೊದಲು ದೋಷಪೂರಿತ ದೃಢೀಕರಣ ನಿಯಂತ್ರಣಗಳಿಗೆ ಕಾರಣವಾಯಿತು.

ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಳ್ಳುವಾಗ ರಾಜ್ಯ ಸರ್ಕಾರವು (ಸೆಪ್ಟೆಂಬರ್ 2021) ಬಹು ಫಲಾನುಭವಿ ಕೋಡ್‌ಗಳ ಉತ್ಪಾದನೆಯನ್ನು ತಡೆಯಲು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಲ್ಲಿ ಅಗತ್ಯ ನಿಯಂತ್ರಣಗಳನ್ನು ಅಳವಡಿಸಲಾಗುವುದು ಎಂದು ತಿಳಿಸಿತು. ಆದಾಗ್ಯೂ, ಸರ್ಕಾರವು ವಿವರವಾದ ತನಿಖೆಯನ್ನು ನಡೆಸಬೇಕಾಗಿತ್ತು ಮತ್ತು ಸಂಭವಿಸಿದ ಲೋಪಗಳಿಗೆ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು.

# ಅಧ್ಯಾಯ–V

# ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ

## 5.1 ಪರಿಚಯ

ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಯನ್ನು ಭೌತಿಕ ಮೇಲ್ವಿಚಾರಣೆ, ಪಿಎಮ್ಎವೈ ಎಮ್ಐಎಸ್, ಥರ್ಡ್ ಪಾರ್ಟಿ ಕ್ವಾಲಿಟಿ ಮಾನಿಟರಿಂಗ್ ಏಜೆನ್ಸಿ (ಟಿಪಿಕ್ಯುಎಮ್ಎ), ಸಾಮಾಜಿಕ ಲೆಕ್ಕಪರಿಶೋಧನೆ, ಜಿಯೋ–ಟ್ಯಾಗಿಂಗ್, ಎಸ್ಎಲ್ಟಿಸಿ/ಸಿಎಲ್ಟಿಸಿ ಇತ್ಯಾದಿಗಳ ಮೂಲಕ ನಡೆಸಲಾಯಿತು. ಜೊತೆಗೆ, ರಾಜ್ಯ ಸರ್ಕಾರವು ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡಲು ಆರ್‌ಜಿಹೆಚ್ಎಮ್ಐಎಸ್, ಕೆಎಸ್‌ಡಿಬಿ ಯೋಜನಾ ನಿರ್ವಹಣಾ ವ್ಯವಸ್ಥೆ (ಪಿಎಮ್ಎಸ್) ಮುಂತಾದ ವಿವಿಧ ತಾಕ್ಷಣಿಕ ಮೇಲ್ವಿಚಾರಣೆಗಳನ್ನು ಜಾರಿಗೆ ತಂದಿತು. ಲೆಕ್ಕಪರಿಶೋಧನೆಯು ಮೇಲ್ವಿಚಾರಣಾ ವ್ಯವಸ್ಥೆಯಲ್ಲಿ ನ್ಯೂನತೆಗಳನ್ನು ಗಮನಿಸಿತು. ಈ ನ್ಯೂನತೆಗಳು ಅನರ್ಹ ಫಲಾನುಭವಿಗಳ ಸೇರಿಸುವಿಕೆ ಮತ್ತು ದುಪ್ಪಟ್ಟು /ಹೆಚ್ಚುವರಿ/ಮೋಸದ ಪಾವತಿಗಳಿಗೆ ಕಾರಣವಾಯಿತು. ವಿವರವಾದ ಅವಲೋಕನಗಳನ್ನು ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿದೆ.

## 5.2 ಭೌತಿಕ ಮೇಲ್ವಿಚಾರಣೆಯಲ್ಲಿ ನ್ಯೂನ್ಯತೆಗಳು ನಕಲಿ ಪಾವತಿಗಯಲ್ಲಿ ಪರಿಣಮಿಸಿತು

ಯೋಜನೆಯ ಸಿಎಲ್ಎಸ್ಎಸ್ ಘಟಕವನ್ನು ಕರ್ನಾಟಕದಲ್ಲಿ ಹುಡ್ಕೋ/ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಮೂಲಕ ಜಾರಿಗೆ ತರಲಾಯಿತು ಮತ್ತು ಈ ಸಂಸ್ಥೆಗಳನ್ನು ಕೇಂದ್ರೀಯ ನೋಡಲ್ ಏಜೆನ್ಸಿಗಳಾಗಿ (ಸಿಎನ್ಎ) ನೇಮಿಸಲಾಗಿತ್ತು. ಸಿಎಲ್ಎಸ್ಎಸ್ ಅಡಿಯಲ್ಲಿ ಫಲಾನುಭವಿಗಳ ಪಟ್ಟಿಯನ್ನು ಬ್ಯಾಂಕ್‌ಗಳ ಪರವಾಗಿ ಸಿಎನ್ಎ ಹದಿನೈದು ದಿನಗಳಿಗೊಮ್ಮೆ ಸಂಬಂಧಪಟ್ಟ ರಾಜ್ಯಗಳಿಗೆ ಕಳುಹಿಸುತ್ತದೆ. ಯಾವುದೇ ಫಲಾನುಭವಿಗೆ ದುಪ್ಪಟ್ಟು ಪ್ರಯೋಜನವು ದೊರಕದಂತೆ ಖಚಿತಪಡಿಸಿಕೊಳ್ಳಲು ಯೋಜನೆಯ ಇತರ ಮೂರು ಘಟಕಗಳಡಿಯಲ್ಲಿ ಫಲಾನುಭವಿಗಳನ್ನು ನಿರ್ಧರಿಸುವಾಗ ರಾಜ್ಯಗಳು ಈ ಪಟ್ಟಿಯನ್ನು ಪರಿಗಣಿಸಬೇಕು.

ಕರ್ನಾಟಕದಲ್ಲಿ ಸಿಎಲ್ಎಸ್ಎಸ್ ಅಡಿಯಲ್ಲಿ ಬಡ್ಡಿ ಸಹಾಯಧನ ಪ್ರಯೋಜನವನ್ನು ಪಡೆದ 471 ಫಲಾನುಭವಿಗಳು ಬಿಎಲ್‌ಸಿ (441 ಪ್ರಕರಣಗಳು) ಮತ್ತು ಎಹೆಚ್‌ಪಿ (30 ಪ್ರಕರಣಗಳು) ಘಟಕಗಳಡಿಯಲ್ಲಿಯೂ ಸಹ ಪ್ರಯೋಜನಗಳನ್ನು ಪಡೆದುಕೊಂಡಿದ್ದರು ಎಂಬುದನ್ನು ಸಿಎನ್ಎ ಸಲ್ಲಿಸಿದ ದತ್ತಾಂಶಗಳ ವಿಶ್ಲೇಷಣೆಯಲ್ಲಿ ಲೆಕ್ಕಪರಿಶೋಧನೆಯು ಗಮನಿಸಿತು. ಬಿಎಲ್‌ಸಿ ಘಟಕದಡಿಯಲ್ಲಿ 441ರಲ್ಲಿ 229 ಫಲಾನುಭವಿಗಳಿಗೆ ₹5.62 ಕೋಟಿ ಆರ್ಥಿಕ ನೆರವನ್ನು ಬಿಡುಗಡೆ ಮಾಡಲಾಗಿದೆ. ದತ್ತಾಂಶವು 18 ಅಂಕೆಗಳ ಪಿಎಮ್ಎವೈ ಫಲಾನುಭವಿ ಕೋಡನ್ನು ಹೊಂದಿಲ್ಲದಿದ್ದ ಕಾರಣ ಉಳಿದ 212 ಬಿಎಲ್‌ಸಿ ಫಲಾನುಭವಿಗಳಿಗೆ ಮಾಡಿದ ಪಾವತಿಯನ್ನು ಲೆಕ್ಕಪರಿಶೋಧನೆಯು ಪತ್ತೆಹಚ್ಚಲು ಸಾಧ್ಯವಾಗಲಿಲ್ಲ. ಬಹು ಪ್ರಯೋಜನಗಳನ್ನು ಪಡೆದಿರುವ 471ರ ಪೈಕಿ 284 ಫಲಾನುಭವಿಗಳಿಗೆ ಸಂಬಂಧಿಸಿದ ವಿವರಗಳನ್ನು ಸಿಎನ್ಎ ಎಸ್ಎಲ್ಎನ್ಎಗೆ ಒದಗಿಸಿದ ಪಾಕ್ಷಿಕ ತ:ಖ್ತೆಯಲ್ಲಿ ಸೂಚಿಸಲಾಗಿದೆ. ಆದಾಗ್ಯೂ, ಎಸ್ಎಲ್ಎನ್ಎ ಪಾಕ್ಷಿಕ ತ:ಖ್ತೆಯನ್ನು ಪರಿಶೀಲಿಸದೆ ಈ 284 ಫಲಾನುಭವಿಗಳಿಗೆ ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಪ್ರಯೋಜನಗಳನ್ನು ಒದಗಿಸಿದ್ದರ ಪರಿಣಾಮವಾಗಿ ನಕಲಿ ಕ್ಲೈಮ್‌ಗಳಾದವು.

ರಾಜ್ಯ ಸರ್ಕಾರವು ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾ (ಸೆಪ್ಟೆಂಬರ್ 2021) ಮೇಲಿನ ಫಲಾನುಭವಿಗಳಿಂದ ಸಹಾಯಧನ ಮೊತ್ತವನ್ನು ವಸೂಲು ಮಾಡಲು ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿತು. ಪಿಎಮ್ಎವೈ ಎಮ್ಐಎಸ್ ನೊಂದಿಗೆ ಸಿಎಲ್ಎಸ್ಎಸ್ ಫಲಾನುಭವಿ ದತ್ತಾಂಶದ ನೈಜ ಸಮಯದ ಏಕೀಕರಣವನ್ನು ಪ್ರಾರಂಭಿಸಲಾಗಿದೆ (ನವೆಂಬರ್ 2019) ಮತ್ತು ಇದು

ಎಹೆಚ್‌ಪಿ/ಬಿಎಲ್‌ಸಿ ಫಲಾನುಭವಿಗಳು ಸಿಎಲ್‌ಎಸ್‌ಎಸ್ ನೊಂದಿಗೆ ನಕಲಾಗುವುದನ್ನು ತಪ್ಪಿಸುತ್ತದೆ ಎಂದೂ ಸಹ ತಿಳಿಸಲಾಯಿತು.

## 5.3 ಜಿಯೋ–ಟ್ಯಾಗಿಂಗ್ ಮೂಲಕ ಮನೆಗಳ ಮೇಲ್ವಿಚಾರಣೆ

ಜಿಯೋ–ಟ್ಯಾಗ್ ಮಾಡಲಾದ ಛಾಯಾಚಿತ್ರಗಳ ಮೂಲಕ ವೈಯಕ್ತಿಕ ಮನೆಗಳ ನಿರ್ಮಾಣದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವುದು ಪಿಎಮ್‌ಎವೈ (ಯು)ನಲ್ಲಿ ಜಿಯೋ–ಟ್ಯಾಗಿಂಗ್‌ನ[19] ಪ್ರಮುಖ ಉದ್ದೇಶವಾಗಿತ್ತು. ಪಿಎಮ್‌ಎವೈ ಎಮ್‌ಐಎಸ್‌ಅನ್ನು ಬಿಎಲ್‌ಸಿ ಮತ್ತು ಎಹೆಚ್‌ಪಿ ಘಟಕಗಳಡಿಯಲ್ಲಿ ನಿರ್ಮಿಸಲಾದ ಮನೆಗಳ ಜಿಯೋ–ಟ್ಯಾಗಿಂಗ್‌ಗಾಗಿ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್‌ನ (ಎನ್‌ಆರ್‌ಎಸ್‌ಸಿ) ಭುವನ್ ಹೆಚ್‌ಎಫ್‌ಎ[20] ಮತ್ತು ನ್ಯಾಷನಲ್ ಇನ್‌ಫಾರ್ಮ್ಯಾಟಿಕ್ಸ್ ಸೆಂಟರ್‌ನ (ಎನ್‌ಐಸಿ) ಭಾರತ್ ಹೆಚ್‌ಎಫ್‌ಎ[21] ಮೊಬೈಲ್ ಅನ್ವಯಗಳೊಂದಿಗೆ ಸಂಯೋಜಿಸಲಾಗಿದೆ. ಈ ಮೊಬೈಲ್ ಅನ್ವಯಗಳು ಜಿಯೋ ಫೆನ್ಸಿಂಗ್[22], ದತ್ತಾಂಶ ದೃಢೀಕರಣ, ನಿರ್ವಹಣೆ, ಮಾಡರೇಶನ್ ಮುಂತಾದ ವಿವಿಧ ವಿಶಿಷ್ಠತೆಗಳೊಂದಿಗೆ ಸಜ್ಜುಗೊಂಡಿವೆ.

ಮೇಲಿನ ಅನ್ವಯಗಳ ಕಾರ್ಯಾಚರಣೆಯ ಮಾರ್ಗಸೂಚಿಗಳು ಕೆಳಗಿನವುಗಳನ್ನು ನಿಗದಿಪಡಿಸಿವೆ:

- ಜಿಯೋಟ್ಯಾಗ್ ಮಾಡಲಾದ ಛಾಯಾಚಿತ್ರದ ದಿಕ್ಕು ಮತ್ತು ಕೋನವು ಸಂಪೂರ್ಣ ನಿರ್ಮಾಣ ಹಂತ ಅಥವಾ ಮನೆಯ ನಿರ್ಮಾಣ ಹಂತದ ಗರಿಷ್ಠ ಭಾಗವು ಛಾಯಾಚಿತ್ರದಲ್ಲಿ ಗೋಚರಿಸುವಂತೆ ಇರಬೇಕು.
- ಹಿಂದಿನ ನಿರ್ಮಾಣ ಹಂತದ ಜಿಯೋ–ಟ್ಯಾಗ್ ಮಾಡಿದ ಅದೇ ಸ್ಥಳದಿಂದ ಎಲ್ಲಾ ಐದು[23] ನಿರ್ಮಾಣ ಹಂತಗಳ ಛಾಯಾಚಿತ್ರಗಳನ್ನು ಸರ್ವೇಯರ್‌ನಿಂದ ಸೆರೆಹಿಡಿಯಬೇಕು.
- ಎಲ್ಲ ನಿರ್ಮಾಣ ಹಂತಗಳೂ ಮನೆಗಳ ಜೊತೆಗೆ ಫಲಾನುಭವಿಯ ಛಾಯಾಚಿತ್ರವನ್ನು ಹೊಂದಿರಬೇಕು.

ಯೋಜನೆಯಡಿಯಲ್ಲಿ ಮನೆಗಳ ಜಿಯೋ–ಟ್ಯಾಗಿಂಗ್‌ನಲ್ಲಿ ಕೆಳಗಿನ ಲೋಪದೋಷಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು.

### 5.3.1 ಜಿಯೋ–ಟ್ಯಾಗಿಂಗ್ ಪ್ರಕ್ರಿಯೆಯನ್ನು ನಕಲು ಮಾಡಿದ್ದು ₹0.97 ಕೋಟಿ ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು

ಭುವನ್/ಭಾರತ್ ಅಪ್ಲಿಕೇಶನ್‌ಗಳ ಮೂಲಕ ಜಿಯೋ–ಟ್ಯಾಗ್ ಮಾಡಲಾದ ನಿರ್ಮಾಣ ಹಂತಗಳ ಆಧಾರದ ಮೇಲೆ ಫಲಾನುಭವಿಗಳಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಯೋಜನೆಯ ಮಾರ್ಗಸೂಚಿಗಳು ನಿಗದಿಪಡಿಸಿವೆ. ಎಲ್ಲಾ ಬಿಎಲ್‌ಸಿ ಮನೆಗಳನ್ನು ಕಡ್ಡಾಯವಾಗಿ ಭುವನ್‌ಎಚ್‌ಎಫ್‌ಎ ಅಪ್ಲಿಕೇಶನ್‌ನಲ್ಲಿ ಜಿಯೋ–ಟ್ಯಾಗ್ ಮಾಡಬೇಕೆಂದು ಸಿಎಸ್‌ಎಮ್‌ಸಿ ಷರತ್ತು ವಿಧಿಸಿತ್ತು (ಮೇ 2016). ಬಿಎಲ್‌ಸಿ

---

[19] ಜಿಯೋ–ಟ್ಯಾಗಿಂಗ್ ಎನ್ನುವುದು ಡಿಜಿಟಲ್ ಫೋಟೋ, ವೀಡಿಯೋ ಮುಂತಾದವುಗಳನ್ನು ವಿವಿಧ ಮಾಧ್ಯಮ ರೂಪಗಳಿಗೆ ಭೌಗೋಳಿಕ ಮಾಹಿತಿಯನ್ನು ಸೇರಿಸುವ ಅಥವಾ ಟ್ಯಾಗ್ ಮಾಡುವ ಪ್ರಕ್ರಿಯೆಯಾಗಿದೆ.

[20] ಬಿಎಲ್‌ಸಿ ಯೋಜನೆಗಳಿಗೆ ಜಿಯೋ–ಟ್ಯಾಗ್ ಮಾಡಲಾದ ವಸತಿ ಸ್ಥಳಗಳನ್ನು ದೃಶ್ಯೀಕರಿಸುವ ಎನ್‌ಆರ್‌ಎಸ್‌ಸಿಯ ಭುವನ್ ವೆಬ್ ಪೋರ್ಟಲ್‌ನೊಂದಿಗೆ ಭುವನ್ ಹೆಚ್‌ಎಫ್‌ಎ ಮೊಬೈಲ್ ಅನ್ವಯವನ್ನು ಸಂಯೋಜಿಸಲಾಗಿದೆ.

[21] ಭಾರತ್ ಹೆಚ್‌ಎಫ್‌ಎ, ಎಎಚ್‌ಪಿ/ಐಎಸ್‌ಎಸ್‌ಆರ್ ಯೋಜನೆಗಳ ಪ್ರಗತಿಯನ್ನು ಸೆರೆಹಿಡಿಯಲು ಎನ್‌ಐಸಿ ಅಭಿವೃದ್ಧಿಪಡಿಸಿದ ಮೊಬೈಲ್ ಅಪ್ಲಿಕೇಶನ್ ಆಗಿದೆ.

[22] ಜಿಯೋ–ಫೆನ್ಸಿಂಗ್ ಎನ್ನುವುದು ಜಿಯೋ–ಟ್ಯಾಗ್ ಮಾಡಲಾದ ಫೋಟೊಗಳು ಮನೆಯ ನಿಗದಿತ ಗಡಿಯೊಳಗೆ (10 ಮೀಟರ್) ಸೆರೆಹಿಡಿಯಲಾಗಿದೆ ಎಂದು ಖಚಿತಪಡಿಸಿಕೊಳ್ಳುವ ಛಾಯಾಚಿತ್ರಗಳ ಭೌಗೋಳಿಕ ದೃಢೀಕರಣದ ಪ್ರಕ್ರಿಯೆಯಾಗಿದೆ.

[23] ಇನ್ನೂ ಪ್ರಾರಂಭಿಸಿಲ್ಲ, ತಳಹದಿ, ಲಿಂಟಲ್, ಛಾವಣಿ ಮತ್ತು ಪೂರ್ಣಗೊಂಡಿದೆ

ಘಟಕದಡಿಯಲ್ಲಿ ನಿರ್ಮಿಸಲಾದ ಮನೆಗಳ ಜಿಯೋ-ಟ್ಯಾಗಿಂಗ್‌ಗಾಗಿ ಆರ್‌ಜಿಹೆಚ್‌ಸಿಎಲ್ ಭುವನ್ ಎಚ್‌ಎಫ್‌ಎ ಅಪ್ಲಿಕೇಶನ್‌ಗೆ ಬದಲಾಗಿ ಇಂದಿರಾ ಮನೆ ಅಪ್ಲಿಕೇಶನ್ ಅನ್ನು (ಸ್ವತ: ಅಭಿವೃದ್ಧಿಪಡಿಸಲಾದ ಮತ್ತು ಆರ್‌ಜಿಎಚ್‌ಓಎಮ್‌ಎಸ್ ನೊಂದಿಗೆ ಸಂಯೋಜಿಸಲಾದ) ಬಳಸುತ್ತಿದೆ. ಜಿಯೋ-ಟ್ಯಾಗ್ ಮಾಡಲಾದ ಹಂತ-ವಾರು ಮನೆಗಳ ಛಾಯಾಚಿತ್ರಗಳನ್ನು ಇಂದಿರಾ ಮನೆ ಆಪ್ ಅಪ್ಲಿಕೇಶನ್‌ನಲ್ಲಿ ಲೋಡ್ ಮಾಡಲಾಗಿತ್ತು ಮತ್ತು ಫಲಾನುಭವಿಗಳಿಗೆ ಪ್ರಯೋಜನಗಳನ್ನು ನೇರವಾಗಿ ವರ್ಗಾವಣೆ ಮಾಡಲಾಗಿತ್ತು. ಅವರ ಜಿಪಿಎಸ್ ಛಾಯಾಚಿತ್ರಗಳನ್ನು ಲೆಕ್ಕಪರಿಶೋಧನೆ ಮಾಡಲಾಗಿದೆ ಮತ್ತು ಸರಿಯಾಗಿದೆ ಎಂದು ಕಂಡುಬಂದಿದೆ.

ಪಾವತಿ ದತ್ತಾಂಶದೊಂದಿಗೆ ಜಿಯೋ-ಟ್ಯಾಗ್ ಮಾಡಲಾದ ದತ್ತಾಂಶವನ್ನು ಲೆಕ್ಕಪರಿಶೋಧನೆಯು ಮ್ಯಾಪ್ ಮಾಡಿತು ಮತ್ತು 48621 ಫಲಾನುಭವಿಗಳಿಗೆ, ಭುವನ್‌ಹೆಚ್‌ಎಫ್‌ಎ ಮತ್ತು ಇಂದಿರಾ ಮನೆ ಎರಡೂ ಅಪ್ಲಿಕೇಶನ್‌ಗಳಡಿಯಲ್ಲಿ ಜಿಯೋ-ಟ್ಯಾಗಿಂಗ್ ಮಾಡಲಾಗಿರುವುದನ್ನು ಗಮನಿಸಿತು. ಇದು ಪ್ರಕ್ರಿಯೆಯನ್ನು ನಕಲು ಮಾಡುವ ಜೊತೆಗೆ ₹0.97 ಕೋಟಿಯ[24] ತಪ್ಪಿಸಬಹುದಾಗಿದ್ದ ವೆಚ್ಚವಾಗಿ ಪರಿಣಮಿಸಿತು.

ತನ್ನ ಪಾಲಿನ ಎರಡನೇ ಕಂತನ್ನು ಬಿಡುಗಡೆ ಮಾಡಲು ಭುವನ್‌ಹೆಚ್‌ಎಫ್‌ಎ ಅಪ್ಲಿಕೇಶನ್ ಬಳಸಿ ಸೆರೆಹಿಡಿಯಲಾದ ಮನೆಗಳ ಛಾಯಾಚಿತ್ರಗಳನ್ನು ಜಿಯೋ-ಟ್ಯಾಗ್ ಮಾಡಬೇಕೆಂಬ ಭಾರತ ಸರ್ಕಾರದ ಷರತ್ತಿನಿಂದ ಜಿಯೋ-ಟ್ಯಾಗ್ ನಕಲು ಮಾಡುವಿಕೆಯ ಅಗತ್ಯತೆಯುಂಟಾಯಿತು ಎಂದು ಆರ್‌ಜಿಹೆಚ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು ಉತ್ತರಿಸಿದರು (ಜನವರಿ 2021).

ಜಿಯೋ-ಟ್ಯಾಗಿಂಗ್‌ಗೆ ಭುವನ್‌ಹೆಚ್‌ಎಫ್‌ಎ ಅಪ್ಲಿಕೇಶನ್‌ನನ್ನು ಬಳಸಬೇಕೆಂದು ಮೇ 2016ರಿಂದಲೇ ಭಾರತ ಸರ್ಕಾರದ ನಿರ್ದಿಷ್ಟ ಸೂಚನೆಗಳಿದ್ದರೂ ಸಹ ಆರ್‌ಜಿಆರ್‌ಹೆಚ್‌ಸಿಎಲ್ ಇಂದಿರಾ ಮನೆ ಅಪ್ಲಿಕೇಶನ್‌ನನ್ನು ಬಳಸಿಕೊಂಡು ಜಿಯೋ-ಟ್ಯಾಗಿಂಗ್ ಕೈಗೊಂಡಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### 5.3.2 ಕೆಎಸ್‌ಡಿಬಿ ಅನುಷ್ಠಾನಗೊಳಿಸಿದ ಯೋಜನೆಗಳಿಗೆ ಸಂಬಂಧಿಸಿದಂತೆ ಜಿಯೋ-ಟ್ಯಾಗಿಂಗ್‌ಗೆ ಸೂಚಿಸಲಾದ ತಾಂತ್ರಿಕ ವಿಶಿಷ್ಟತೆಗಳನ್ನು ಅನುಸರಿಸದಿರುವುದು

ಸಿಎಸ್‌ಎಮ್‌ಸಿ ತನ್ನ 29ನೇ ಸಭೆಯಲ್ಲಿ (ಜನವರಿ 2018) ಎಹೆಚ್‌ಪಿ ಯೋಜನೆಗಳನ್ನು ಜಿಯೋ-ಟ್ಯಾಗಿಂಗ್ ಮಾಡಲು ಭಾರತ್ ಹೆಚ್‌ಎಫ್‌ಎ ಅಪ್ಲಿಕೇಶನ್‌ನನ್ನು ಪ್ರದರ್ಶಿಸಿತು ಮತ್ತು 15 ಜನವರಿ 2018ರೊಳಗೆ ತಮ್ಮ ಯೋಜನಾ ಅಪ್ಲಿಕೇಶನ್‌ಗಳನ್ನು ಜಿಯೋ-ಟ್ಯಾಗ್ ಮಾಡಲು ಎಲ್ಲಾ ರಾಜ್ಯಗಳಿಗೆ ವಿನಂತಿಸಿತು. ಜೊತೆಗೆ, ಎಎಚ್‌ಪಿ ಯೋಜನೆಗಳಿಗೆ ಎರಡನೇ ಕಂತಿನ ಕೇಂದ್ರ ಪಾಲನ್ನು ಬಿಡುಗಡೆ ಮಾಡಲು ಕಡ್ಡಾಯವಾಗಿ ಜಿಯೋ-ಟ್ಯಾಗಿಂಗ್ ಅನ್ನು ಪೂರ್ಣಗೊಳಿಸಲು 49 ನೇ ಸಿಎಸ್‌ಎಮ್‌ಸಿ ಸೂಚಿಸಿತು (ನವೆಂಬರ್ 2019). ಕೆಎಸ್‌ಡಿಬಿಯು ಭಾರತ್ ಹೆಚ್‌ಎಫ್‌ಎ ಅಪ್ಲಿಕೇಶನ್‌ಗೆ ಬದಲಾಗಿ ಜಿಯೋ-ಟ್ಯಾಗಿಂಗ್‌ಗೆ ತಾನೇ ಅಭಿವೃದ್ಧಿಪಡಿಸಿದ ಕೆಎಸ್‌ಡಿಬಿ ಪಿಎಮ್‌ಎಸ್ ಅಪ್ಲಿಕೇಶನ್‌ನನ್ನು ಬಳಸುತ್ತಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕೆಳಗೆ ವಿವರಿಸಿದಂತೆ, ಕೆಎಸ್‌ಡಿಬಿ ಪಿಎಮ್‌ಎಸ್ ಅಪ್ಲಿಕೇಶನ್‌ನಲ್ಲಿ ಅಪ್‌ಲೋಡ್ ಆದ ಛಾಯಾಚಿತ್ರಗಳು ನಿಗದಿತ ತಾಂತ್ರಿಕ ಮಾನದಂಡಗಳನ್ನು ಪೂರೈಸಿರಲಿಲ್ಲ.

- ಛಾಯಾಚಿತ್ರಗಳು ಸಂಪೂರ್ಣ ಮನೆ/ಮನೆಯ ಗರಿಷ್ಠ ಭಾಗವನ್ನು ತೋರಿಸಿರಲಿಲ್ಲ. ಬದಲಿಗೆ, ಮನೆಯ ಒಂದು ಭಾಗವನ್ನು ಅಂದರೆ ಬಾಗಿಲಿನ ಚಿತ್ರವನ್ನು ಸೆರೆಹಿಡಿದು ಹೆಚ್ಚಿನ ಕಾರ್ಪೆಟ್ ವಿಸ್ತೀರ್ಣದ ಕಟ್ಟಡಗಳಿಗೆ ಸಂಬಂಧಿಸಿದಂತೆ ನಿರ್ಮಾಣದ ವಿವಿಧ ಹಂತಗಳಿಗಾಗಿ ಹಲವು ಬಾರಿ ಅಪ್‌ಲೋಡ್ ಮಾಡಲಾಗಿತ್ತು (**ಚಿತ್ರ 5.1**)

[24] ಪ್ರತಿ ಫಲಾನುಭವಿಗೆ ₹200ರ ದರದಲ್ಲಿ

**ಚಿತ್ರ–5.1: ನಿರ್ಮಿಸಲಾದ ಮನೆಗಳ ಪೂರ್ಣ ರಚನೆಯನ್ನು ತೋರಿಸದ ಕೆಎಸ್‌ಡಿಬಿ ಎಮ್‌ಐಎಸ್ ಅಪ್ಲಿಕೇಶನ್‌ಲ್ಲಿ ಅಪ್‌ಲೋಡ್ ಮಾಡಿರುವ ಛಾಯಾಚಿತ್ರಗಳು.**

| **ಜಂಟಿ ಭೌತಿಕ ಪರಿಶೀಲನೆಯಲ್ಲಿ ತೆಗೆದ ಛಾಯಾಚಿತ್ರಗಳು** | **ಕೆಎಸ್‌ಡಿಬಿ ಎಮ್‌ಐಎಸ್ ನಲ್ಲಿ ಅಪ್‌ಲೋಡ್ ಮಾಡಲಾದ ಛಾಯಾಚಿತ್ರಗಳು** |
|---|---|
|  |  |
|  |  |

- ಅಪ್‌ಲೋಡ್ ಮಾಡಿದ ಛಾಯಾಚಿತ್ರಗಳ ಯಾವುದೇ ಲೆಕ್ಕಪರಿಶೋಧನಾ ಪರಿಶೀಲನೆ ಅಥವಾ ತಪಾಸಣೆ ಮಾಡಲಾಗಿರಲಿಲ್ಲ.
- ಮನೆಗಳ ಜೊತೆಗೆ ಫಲಾನುಭವಿಗಳ ಛಾಯಾಚಿತ್ರಗಳನ್ನು ತೆಗೆದಿರಲಿಲ್ಲ.
- ಛಾಯಾಚಿತ್ರಗಳನ್ನು ಸ್ಥಳಗಳ ರೇಖಾಂಶ ಮತ್ತು ಅಕ್ಷಾಂಶದೊಂದಿಗೆ ವಾಟರ್‌ಮಾರ್ಕ್ ಮಾಡಲಾಗಿರಲಿಲ್ಲ.
- ನಿಗದಿಪಡಿಸಿದ್ದಂತೆ ನಿರ್ಮಾಣ ಹಂತಗಳ ಎಲ್ಲಾ ಛಾಯಾಚಿತ್ರಗಳನ್ನು ತೆಗೆದಿರಲಿಲ್ಲ. **ಚಿತ್ರ–5.2ರಲ್ಲಿ** ತೋರಿಸಿರುವಂತೆ ವಿವಿಧ ಹಂತಗಳನ್ನು ಸೂಚಿಸಲು ಒಂದೇ ಛಾಯಾಚಿತ್ರವನ್ನು ಬಳಸಲಾಗಿತ್ತು.

**ಚಿತ್ರ–5.2: ನಿರ್ಮಾಣದ ವಿವಿಧ ಹಂತಗಳಿಗೆ ಅಪ್‌ಲೋಡ್ ಮಾಡಿದ ಒಂದೇ ತರಹದ ಛಾಯಾಚಿತ್ರಗಳು**

| **ತಳಹದಿ** | **ಲಿಂಟಲ್** | **ಛಾವಣಿ** | **ಪೂರ್ಣಗೊಂಡಿರುವುದು** |
|---|---|---|---|
|  |  |  |  |
|  |  |  |  |

ಕೆಎಸ್‌ಡಿಬಿ ಪಿಎಮ್‌ಎಸ್ ಅಪ್ಲಿಕೇಶನ್‌ನಲ್ಲಿರುವ ಮೇಲಿನ ನ್ಯೂನತೆಗಳ ದೃಷ್ಟಿಯಿಂದ, ಪಿಎಮ್‌ಎವೈ ಎಮ್‌ಐಎಸ್ ಪ್ರಗತಿ ವರದಿಯಲ್ಲಿ ಸೂಚಿಸಿದಂತೆ ಕೆಎಸ್‌ಡಿಬಿ ಕೈಗೊಂಡ ಎಹೆಚ್‌ಪಿ ಯೋಜನೆಗಳ ಜಿಯೋ–ಟ್ಯಾಗಿಂಗ್ ಇನ್ನೂ ಪೂರ್ಣಗೊಳ್ಳಬೇಕಿದೆ (ಮಾರ್ಚ್ 2021). **ಕಂಡಿಕೆ–3.2.1**ರಲ್ಲಿ ಗಮನಿಸಿದಂತೆ,

ಎಹೆಚ್‌ಪಿ ಯೋಜನೆಗಳಿಗೆ ತನ್ನ ಕಂತಿನ ಎರಡನೇ ಪಾಲನ್ನು ಬಿಡುಗಡೆ ಮಾಡುವುದನ್ನು ಭಾರತ ಸರ್ಕಾರ ತಡೆಹಿಡಿದಿತ್ತು, ಇದಕ್ಕೆ ಒಂದು ಕಾರಣವೆಂದರೆ ಜಿಯೋಟ್ಯಾಗಿಂಗ್ ಅನ್ನು ಪೂರ್ಣಗೊಳಿಸದಿರುವುದು.

ಭಾರತ್ ಹೆಚ್‌ಎಫ್‌ಎ ಅಪ್ಲಿಕೇಶನ್‌ನನ್ನು ವಿಶೇಷವಾಗಿ ಗುಂಪು ವಸತಿ ಯೋಜನೆಗಳಿಗಾಗಿ ಅಭಿವೃದ್ಧಿ ಪಡಿಸಿದ್ದರಿಂದ ಮತ್ತು ಚದುರಿದ ಪ್ರತ್ಯೇಕ ಮನೆಗಳಿಗೆ ಅದು ಕೆಲಸ ಮಾಡುವುದಿಲ್ಲವಾದ್ದರಿಂದ ಸ್ಥಳದಲ್ಲೇ ಇರುವ ಚದುರಿದ ಮನೆಗಳ ಜಿಯೋ-ಟ್ಯಾಗಿಂಗ್ ಅನ್ನು ಭಾರತ್ ಹೆಚ್‌ಎಫ್‌ಎ ಅಪ್ಲಿಕೇಶನ್‌ನ ಮೂಲಕ ಕೈಗೊಳ್ಳಲು ಸಾಧ್ಯವಾಗಲಿಲ್ಲ ಎಂಬು ಸರ್ಕಾರವು ಉತ್ತರಿಸಿತು (ಸೆಪ್ಟಂಬರ್ 2021).

ಎಹೆಚ್‌ಪಿ ಘಟಕದಡಿಯಲ್ಲಿ ಕಲ್ಪಿಸಲಾದ ಗುಂಪು ವಸತಿ ಪರಿಕಲ್ಪನೆಯಿಂದ ವಿಚಲನ ಮತ್ತು ಚದುರಿದ ವೈಯಕ್ತಿಕ ಮನೆಗಳನ್ನು ಪತ್ತೆಹಚ್ಚುವಲ್ಲಿ ಭಾರತ್ ಹೆಚ್‌ಎಫ್‌ಎ ಅಪ್ಲಿಕೇಶನ್‌ನ ನಿರ್ಬಂಧವು ಪ್ರಗತಿಯನ್ನು ಮೇಲ್ವಿಚಾರಣೆ ಮಾಡುವ ಜಿಯೋ-ಟ್ಯಾಗಿಂಗ್‌ನ ಉದ್ದೇಶವನ್ನೇ ಸೋಲಿಸಿತು ಮತ್ತು ಯೋಜನೆಯನ್ನು ಕಳಪೆ ಮೇಲ್ವಿಚಾರಣೆಗಳ ಅಪಾಯಗಳಿಗೆ ಗುರಿಪಡಿಸುತ್ತದೆ ಎಂಬುದು ಲೆಕ್ಕಪರಿಶೋಧನಾ ಅಭಿಪ್ರಾಯವಾಗಿದೆ. ಕೆಎಸ್‌ಡಿಬಿ ಪಿಎಮ್‌ಎಸ್ ಅಪ್ಲಿಕೇಶನ್‌ನಲ್ಲಿರುವ ತಾಂತ್ರಿಕ ನ್ಯೂನತೆಗಳು ಮತ್ತು ಎಎಚ್‌ಪಿ ಯೋಜನೆಗಳಿಗೆ ಜಿಯೋ-ಟ್ಯಾಗಿಂಗ್ ಪೂರ್ಣಗೊಳಿಸದಿರುವ ಬಗ್ಗೆ ಉತ್ತರವು ಮೌನವಾಗಿತ್ತು.

### 5.3.3 ಜಿಯೋ-ಟ್ಯಾಗ್ ಮಾಡಲಾದ ಮನೆಗಳಿಗೆ ಮಾಡಲಾದ ಹಂತವಾರು ಪಾವತಿಗಳಲ್ಲಿ ನ್ಯೂನತೆಗಳು

ಜಿಯೋ-ಟ್ಯಾಗ್ ಮಾಡಲಾದ ಛಾಯಾಚಿತ್ರಗಳನ್ನು ಪರಿಶೀಲಿಸಿ ನಿರ್ಮಾಣದಲ್ಲಿ ಸಾಧಿಸಿದ ಪ್ರಗತಿಯನ್ನು ಆಧರಿಸಿ ಬಿಎಲ್‌ಸಿ ಫಲಾನುಭವಿಗಳಿಗೆ ಪಾವತಿಗಳನ್ನು ಮಾಡಬೇಕಾಗಿತ್ತು. 20 ಪ್ರಕರಣಗಳಲ್ಲಿ, ಫಲಾನುಭವಿಗಳು ಸಾಧಿಸಿದ ನಿರ್ಮಾಣದ ಪ್ರಗತಿಗೆ ಅನುಗುಣವಾದ ಹಂತಕ್ಕೆ ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ಆರ್ಥಿಕ ನೆರವನ್ನು ಬಿಡುಗಡೆ ಮಾಡಿರುವುದನ್ನು ಬಿಎಲ್‌ಸಿ ಮನೆಗಳ ಜಂಟಿ ಭೌತಿಕ ಪರಿಶೀಲನೆಯು ತಿಳಿಯಪಡಿಸಿತು (ವಿವರಗಳು **ಅನುಬಂಧ 5.1ರಲ್ಲಿ**). ಭೌತಿಕ ಪರಿಶೀಲನೆಯ ಮೂಲಕ ಕಂಡುಬಂದ ಪ್ರಗತಿಯ ವಾಸ್ತವಿಕ ಹಂತವು ಎಮ್‌ಐಎಸ್‌ನಲ್ಲಿ ಸೂಚಿಸಲಾದ ಪ್ರಗತಿಯ ಹಂತಕ್ಕಿಂತ ಕಡಿಮೆಯಿದ್ದಿತಾಗಿ ಹೆಚ್ಚಿನ ಆರ್ಥಿಕ ನೆರವು ದೊರೆಯಿತು. ಉದಾಹರಣೆಗೆ, 19 ಪ್ರಕರಣಗಳಲ್ಲಿ ಜಂಟಿ ಭೌತಿಕ ಪರಿಶೀಲನೆಯು ನಿರ್ಮಾಣ ಹಂತವನ್ನು 'ಛಾವಣಿ' ಎಂದು ತಿಳಿಯಪಡಿಸಿದರೆ, ಪಿಎಮ್‌ಎವೈ ಎಮ್‌ಐಎಸ್ ನಿರ್ಮಾಣ ಹಂತವು 'ಪೂರ್ಣಗೊಂಡಿದೆ' ಎಂದು ತೋರಿಸುತ್ತಿತ್ತು. ಈ ಪ್ರಕರಣಗಳು ಛಾಯಾಚಿತ್ರಗಳ ಜಿಯೋ-ಟ್ಯಾಗಿಂಗ್‌ನಲ್ಲಿ ಅಕ್ರಮಗಳನ್ನು ಸೂಚಿಸುವುದರಿಂದ ಹೆಚ್ಚಿನ ತನಿಖೆಯ ಅಗತ್ಯವಿದೆ.

**ನಕಲಿ ಜಿಯೋ-ಟ್ಯಾಗ್ ಮಾಡಲಾದ ಛಾಯಾಚಿತ್ರಗಳ ಆಧಾರದ ಮೇಲೆ ಆರ್ಥಿಕ ನೆರವಿನ ಬಿಡುಗಡೆ**

ಗದಗ-ಬೆಟಗೆರೆ ನಗರಸಭೆ ಪಿಎಂಎವೈ(ಯು) ಯೋಜನೆಯಲ್ಲಿ ವರದಿಯಾದ ಭ್ರಷ್ಟಾಚಾರದ ಕುರಿತು ತನಿಖೆ ನಡೆಸಲು ಆರ್‌ಜಿಹೆಚ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರು ಗದಗ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು (ಡಿಸಿ) ಕೋರಿದರು (ಜೂನ್ 2017), ಈ ಪ್ರಕರಣವು (ಜೂನ್ 2017) ಪತ್ರಿಕೆಯಲ್ಲಿಯು ಪ್ರಕಟವಾಗಿತು. ಗದಗ-ಬೆಟಗಿರಿ ನಗರಸಭೆಯಲ್ಲಿ 2015-17ರ ಅವಧಿಯಲ್ಲಿ ಬಿಎಲ್‌ಸಿ ಘಟಕದಡಿಯಲ್ಲಿ 3928 ವಸತಿ ಘಟಕಗಳನ್ನು ಅನುಮೋದಿಸಲಾಗಿತ್ತು ಮತ್ತು 1404 ಫಲಾನುಭವಿಗಳಿಗೆ ಆರ್ಥಿಕ ನೆರವು ಬಿಡುಗಡೆ ಮಾಡಲಾಗಿತ್ತು. ವಾಸ್ತವವಾಗಿ ಮನೆ ನಿರ್ಮಿಸದ 245 ಫಲಾನುಭವಿಗಳು ಜಿಯೋ-ಟ್ಯಾಗ್ ಮಾಡಿದ ನಕಲಿ ಫೋಟೊಗಳ ಆಧಾರದ ಮೇಲೆ ₹1.24 ಕೋಟಿ ಆರ್ಥಿಕ ನೆರವು ಬಿಡುಗಡೆ ಮಾಡಿರುವುದು ಗದಗ ಜಿಲ್ಲಾಧಿಕಾರಿಗಳು ನಡೆಸಿದ ವಿಚಾರಣೆಯಲ್ಲಿ ತಿಳಿದುಬಂದಿತು ಹಾಗೂ ಗದಗ-ಬೆಟಗಿರಿ ನಗರಸಭೆಯ ಇಬ್ಬರು ಅಧಿಕಾರಿಗಳ ವಿರುದ್ಧ ಅದಕ್ಕೆ ಅನುಕೂಲ ಮಾಡಿಕೊಟ್ಟಿರುವುದಕ್ಕಾಗಿ ಚಾರ್ಜ್‌ಶೀಟ್ ದಾಖಲಿಸಲಾಗಿದೆ (ಆಗಸ್ಟ್ 2017). ಅಧಿಕಾರಿಗಳ ವಿರುದ್ಧ ತೆಗೆದುಕೊಂಡ ಮುಂದಿನ ಕ್ರಮದ ಮತ್ತು ದುರುಪಯೋಗವಾಗಿದ್ದ ಮೊತ್ತದ ವಸೂಲಾತಿಗೆ ಸಂಬಂಧಿಸಿದ ವಿವರಗಳು ಲೆಕ್ಕಪರಿಶೋಧನೆಗೆ ಲಭ್ಯವಾಗಿಲ್ಲ.

**ಕಂಡಿಕೆ–5.3.1ರಲ್ಲಿ** ಉಲ್ಲೇಖಿಸಿದಂತೆ, ಬಿಎಲ್‌ಸಿ ಘಟಕಟದಡಿಯಲ್ಲಿ ನಿರ್ಮಿಸಲಾದ ಮನೆಗಳ ಜಿಯೋ–ಟ್ಯಾಗಿಂಗ್‌ಗಾಗಿ ಆರ್‌ಜಿಹೆಚ್‌ಸಿಎಲ್ ಇಂದಿರಾ ಮನೆ ಅಪ್ಲಿಕೇಶನ್‌ನನ್ನು ಬಳಸುತ್ತಿದೆ. ನಕಲಿ ಛಾಯಾಚಿತ್ರಗಳನ್ನು ಅಪ್‌ಲೋಡ್ ಮಾಡುವುದನ್ನು ತಡೆಯುವ ಜಿಪಿಎಸ್ ನಿರ್ದೇಶಾಂಕಗಳನ್ನು ಸೆರೆಹಿಡಿಯಲು ಅಪ್ಲಿಕೇಶನ್ ಅಂತರ್ಗತ ಜಿಯೋ–ಫೆನ್ಸಿಂಗ್ ತಂತ್ರವನ್ನು ಹೊಂದಿದೆ ಎಂದು ಆರ್‌ಜಿಹೆಚ್‌ಸಿಎಲ್ ಹೇಳಿಕೊಂಡಿದೆ. ಆದಾಗ್ಯೂ, ಮೇಲಿನ ನಿಯಂತ್ರಣಗಳನ್ನು ಉಪೇಕ್ಷಿಸಿ ಬದಲಿ ಮಾರ್ಗದಿಂದ 245 ನಕಲಿ ಛಾಯಾಚಿತ್ರಗಳನ್ನು ಸಿಸ್ಟಮ್‌ಗೆ ಅಪ್‌ಲೋಡ್ ಮಾಡಲಾಗಿತ್ತು ಮತ್ತು ಇಂದಿರಾ ಮನೆ ಅಪ್ಲಿಕೇಶನ್ ಜಿಯೋ–ಟ್ಯಾಗಿಂಗ್‌ನಲ್ಲಿನ ದೋಷಗಳನ್ನು ಸೂಚಿಸುವ ಪ್ರಯೋಜನಗಳನ್ನು ಅನರ್ಹ ಫಲಾನುಭವಿಗಳಿಗೆ ವರ್ಗಾಯಿಸಲಾಗಿತ್ತು.

ಚಾರ್ಜ್ ಶೀಟ್‌ನಲ್ಲಿ ನಮೂದಿಸಲಾದ ₹1.24 ಕೋಟಿ ಮೊತ್ತದ ಹೊರತಾಗಿ ಚಾರ್ಜ್‌ಶೀಟ್ ಹಾಕಿದ ದಿನಾಂಕದ ನಂತರವೂ ಮೇಲಿನ 245ರ ಪೈಕಿ 55 ಫಲಾನುಭವಿಗಳಿಗೆ ₹0.58 ಕೋಟಿ ಮೊತ್ತವನ್ನು ವರ್ಗಾಯಿಸಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ದುರುಪಯೋಗದಲ್ಲಿ ಭಾಗಿಯಾಗಿರುವ ಫಲಾನುಭವಿಗಳನ್ನು ನಿರ್ಬಂಧಿಸಲು ಎಸ್‌ಎಲ್‌ಎನ್‌ಎ ಯಾವುದೇ ಕ್ರಮ ಕೈಗೊಳ್ಳಲಿಲ್ಲವಾಗಿ ಅವರಿಗೆ ಯೋಜನೆಯ ಪ್ರಯೋಜನಗಳ ವಿಸ್ತರಣೆಯನ್ನು ಮುಂದುವರೆಸಲಾಗಿತ್ತು. ಮೇಲಿನ ಫಲಾನುಭವಿಗಳಿಗೆ ನಿರಂತರ ನೆರವು ಬಿಡುಗಡೆಯಾಗುತ್ತಿರುವುದಕ್ಕೆ ಹೊಣೆಗಾರಿಕೆಯನ್ನು ನಿಗದಿಪಡಿಸಲು ಎಸ್‌ಎಲ್‌ಎನ್‌ಎ ಸಹ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

## 5.4 ಟಿಪಿಕ್ಯೂಎಮ್‌ಎ ಕಾರ್ಯವೈಖರಿ

ಪಿಎಮ್‌ಎವೈ ಅಡಿಯಲ್ಲಿ ಮಂಜೂರಾದ ಯೋಜನೆಗಳ ಮೂರನೇ ವ್ಯಕ್ತಿಯ ಗುಣಮಟ್ಟದ ಮೇಲ್ವಿಚಾರಣೆಗಾಗಿ ರಾಜ್ಯ ಮಟ್ಟದ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸಲಾದ ಎಲ್ಲಾ ಪಿಎಮ್‌ಎವೈ ಯೋಜನೆಗಳ ಗುಣಮಟ್ಟವನ್ನು ಪರಿಶೀಲಿಸುವ ಮತ್ತು ಮೇಲ್ವಿಚಾರಣೆ ಮಾಡುವ ಉದ್ದೇಶಗಳೊಂದಿಗೆ ವಿಕಸನಗೊಳ್ಳಬೇಕು ಮತ್ತು ರಚನಾತ್ಮಕ ವರದಿಯನ್ನು ಒದಗಿಸಬೇಕು ಎಂದು ಪಿಎಮ್‌ಎವೈ(ಯು) ಮಾರ್ಗಸೂಚಿಗಳ ಕಂಡಿಕೆ–12.10 ನಿಗದಿಪಡಿಸುತ್ತದೆ. ಅಂತಹ ಏಜೆನ್ಸಿಗಳ ಗುಣಮಟ್ಟದ ಭರವಸೆಯ ವರದಿಯನ್ನು ಆಧರಿಸಿ ರಾಜ್ಯಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳು ಯೋಜನೆಯಡಿಯಲ್ಲಿ ಗುಣಮಟ್ಟದ ಮನೆಗಳು ಮತ್ತು ಮೂಲಸೌಕರ್ಯಗಳನ್ನು ನಿರ್ಮಿಸುವುದನ್ನು ಖಚಿತಪಡಿಸಿಕೊಳ್ಳಲು ತಡೆಗಟ್ಟುವ ಮತ್ತು ಗುಣಪಡಿಸುವ ಕ್ರಮಗಳೆರಡನ್ನೂ ತೆಗೆದುಕೊಳ್ಳಬೇಕಾಗಿತ್ತು. ಎಸ್‌ಎಲ್‌ಎನ್‌ಎ ಮೂರನೇ ವ್ಯಕ್ತಿಯ ಗುಣಮಟ್ಟದ ಮೇಲ್ವಿಚಾರಣಾ ವರದಿಯನ್ನು ಎಸ್‌ಎಲ್‌ಎಸ್‌ಎಮ್‌ಸಿಯ ಮುಂದೆ ಕ್ರಮ ತೆಗೆದುಕೊಂಡ ವರದಿಯೊಂದಿಗೆ ಮಂಡಿಸಬೇಕಿತ್ತು. ಯೋಜನೆಯಡಿಯಲ್ಲಿ ನಿರ್ಮಿಸಲಾದ ಮನೆಗಳ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ಎಸ್‌ಎಲ್‌ಎನ್‌ಎ ಆರು ಟಿಪಿಕ್ಯುಎಮ್‌ಎಗಳನ್ನು ನೇಮಿಸಿತು. ಚಾಲ್ತಿಯಲ್ಲಿರುವ 1847 ರಲ್ಲಿ 967 ಯೋಜನೆಗಳನ್ನು (ಶೇಕಡಾ 52) ಮಾರ್ಚ್ 2021ರ ಕೊನೆಯಲ್ಲಿ ಈ ಏಜೆನ್ಸಿಗಳಿಗೆ ವಹಿಸಲಾಗಿತ್ತು. ಟಿಪಿಕ್ಯುಎಮ್‌ಎ ಕಾರ್ಯವೈಖರಿಗೆ ಸಂಬಂಧಿಸಿದ ಅವಲೋಕನಗಳು ಈ ಕೆಳಗಿನಂತಿವೆ:

- ಶೇಕಡಾ 10–15ರಷ್ಟು ಪ್ರಗತಿಯನ್ನು ಸಾಧಿಸಿದ ನಂತರ ಟಿಪಿಕ್ಯೂಎಮ್‌ಎ ಮೊದಲ ತಪಾಸಣೆಯನ್ನು ಕೈಗೊಳ್ಳಬೇಕಾಗಿತ್ತು. ಆದಾಗ್ಯೂ, 218 ಬಿಎಲ್‌ಸಿ ಯೋಜನೆಗಳು ಮತ್ತು 73 ಎಹೆಚ್‌ಪಿ ಯೋಜನೆಗಳಿಗೆ ಸಂಬಂಧಿಸಿದಂತೆ, ಟಿಪಿಕ್ಯೂಎಮ್‌ಎ ಇನ್ನೂ ತಮ್ಮ ಮೊದಲ ಭೇಟಿಯನ್ನು ನೀಡಬೇಕಿದೆ (ಜುಲೈ 2021).
- ಶೇಕಡಾ 50–60ರಷ್ಟು ಪ್ರಗತಿಯನ್ನು ಸಾಧಿಸಿದ ನಂತರ ಟಿಪಿಕ್ಯೂಎಮ್‌ಎ ತನ್ನ ಎರಡನೇ ತಪಾಸಣೆಯನ್ನು ಮತ್ತು ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ ಅಂತಿಮ ಪರಿಶೀಲನೆಯನ್ನು ಕೈಗೊಳ್ಳಬೇಕಿತ್ತು. ಆದರೆ, ಪರೀಕ್ಷಾ–ತನಿಖೆ ನಡೆಸಿದ 118 ಬಿಎಲ್‌ಸಿ ಯೋಜನೆಗಳಲ್ಲಿ 79 (ಶೇಕಡಾ

67) ಮತ್ತು 47 ಎಹೆಚ್‌ಪಿ ಯೋಜನೆಗಳಲ್ಲಿ 29ರಲ್ಲಿ (ಶೇಕಡಾ 62), ಮಾರ್ಗಸೂಚಿಗಳಲ್ಲಿ ನಿಗದಿಪಡಿಸಲಾಗಿದ್ದ ಪ್ರಗತಿಯ ಹಂತದ ಪ್ರಕಾರ ಕಡ್ಡಾಯ ಭೇಟಿಗಳನ್ನು ಟಿಪಿಕ್ಯೂಎಮ್‌ಎ ಕೈಗೊಂಡಿರಲಿಲ್ಲ.

- ಟಿಪಿಕ್ಯೂಎಮ್‌ಎ ಸಲ್ಲಿಸಿದ ಗುಣಮಟ್ಟದ ಭರವಸೆ ವರದಿಯ ಮೇಲೆ ಕ್ರಮ ತೆಗೆದುಕೊಂಡ ವರದಿಯನ್ನು ಎಸ್‌ಎಲ್‌ಎನ್‌ಎ ಇನ್ನೂ ಎಸ್‌ಎಲ್‌ಎಸ್‌ಎಮ್‌ಸಿಗೆ ಸಲ್ಲಿಸಬೇಕಿತ್ತು (ಜುಲೈ 2021).

## 5.5 ಸಿಎಲ್‌ಟಿಸಿಯ ಕಾರ್ಯವೈಖರಿ

ಯೋಜನೆ, ಇಂಜಿನಿಯರಿಂಗ್, ಸಾಮಾಜಿಕ ಅರಿವು ಮೂಡಿಸುವಿಕೆ, ಹಣಕಾಸು ಯೋಜನೆ ಮುಂತಾದ ಕಾರ್ಯಾಚರಣಾ ಕ್ಷೇತ್ರಗಳಲ್ಲಿ ತಮ್ಮ ಉದ್ಯೋಗಿಗಳು/ಅಧಿಕಾರಿಗಳ ಸಾಮರ್ಥ್ಯವನ್ನು ಹೆಚ್ಚಿಸಲು 111[25] ತಜ್ಞರನ್ನು ಒಳಗೊಂಡ ಸಿಎಲ್‌ಟಿಸಿಗಳನ್ನು ಕರ್ನಾಟಕ ಸರ್ಕಾರವು 31 ಜಿಲ್ಲೆಗಳಲ್ಲಿ ಸ್ಥಾಪಿಸಿತು (ಏಪ್ರಿಲ್ 2016ರಿಂದ ಮೇ 2020).

ಆಯ್ದ ಯೋಜನೆಗಳ ಜಂಟಿ ಭೌತಿಕ ಪರಿಶೀಲನೆಯ ಸಮಯದಲ್ಲಿ, ಸಿಎಲ್‌ಟಿಸಿಗಳ ಕಾರ್ಯನಿರ್ವಹಣೆಯಲ್ಲಿ ಈ ಕೆಳಗಿನ ನ್ಯೂನತೆಗಳನ್ನು ಗಮನಿಸಲಾಯಿತು.

- ಕೊಳೆಗೇರಿಗಳ ಮ್ಯಾಪಿಂಗ್ ಮಾಡುವುದು, ಹಣಕಾಸಿನ ನೆರವನ್ನು ಖಚಿತಪಡಿಸಿಕೊಳ್ಳಲು ವಿವಿಧ ವಸತಿ ಹಣಕಾಸು ಸಂಸ್ಥೆಗಳು, ಬ್ಯಾಂಕ್‌ಗಳು, ಖಾಸಗಿ ಸಂಸ್ಥೆಗಳೊಂದಿಗೆ ಸಮನ್ವಯ, ನಗರ ಕಾರ್ಯಯೋಜನೆಗಳ ಮತ್ತು ಡಿಪಿಆರ್‌ಗಳ ಪರಿಶೀಲನೆ, ನವೀನ ಹಸಿರು ತಂತ್ರಜ್ಞಾನಗಳು/ಉತ್ತಮ ನಿರ್ಮಾಣ ಅಭ್ಯಾಸಗಳ/ವಿಪತ್ತು ನಿರೋಧಕ ನಿರ್ಮಾಣ, ಇವುಗಳ ಗುರುತಿಸುವಿಕೆ ಮತ್ತು ಅಳವಡಿಸಿಕೊಳ್ಳುವಿಕೆ ಮತ್ತು ಯೋಜನೆಯ ಸಾಮಾಜಿಕ ಅಭಿವೃದ್ಧಿ ಪ್ರಭಾವದ ಮೌಲ್ಯಮಾಪನ, ಇತ್ಯಾದಿ ಚಟುವಟಿಕೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು, ಮಾರ್ಗಸೂಚಿಗಳಲ್ಲಿ ಕಡ್ಡಾಯಗೊಳಿಸಿದಂತೆ ಸಿಎಲ್‌ಟಿಸಿಗಳು ನಿರ್ವಹಿಸಿರಲಿಲ್ಲ.
- ಮಾರ್ಗಸೂಚಿಗಳ ಅಡಿಯಲ್ಲಿ ಅಗತ್ಯವಿರುವ ಹಣಕಾಸಿನ ಸ್ವರೂಪಗಳು, ವಿಶೇಷ ತರಬೇತಿ ಸಾಮಗ್ರಿಗಳು/ಮಾಡ್ಯೂಲ್‌ಗಳು, ಲಿಂಗ ಪರಿಶೀಲನಾ ಪಟ್ಟಿಗಳು, ತರಬೇತಿ ವರದಿಗಳು ಮತ್ತು ಸಾಮರ್ಥ್ಯ ವೃದ್ಧಿ ಕಾರ್ಯಕ್ರಮ ಇತ್ಯಾದಿಗಳನ್ನು ಸಹ ಸಿಎಲ್‌ಟಿಸಿಗಳು ತಯಾರಿಸಿರಲಿಲ್ಲ.

## 5.6 ಸಾಮಾಜಿಕ ಲೆಕ್ಕಪರಿಶೋಧನೆ

ಯೋಜನೆಯಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಯೋಜನೆಯ ಮಾರ್ಗಸೂಚಿಗಳು ನಿಗದಿಪಡಿಸಿವೆ. ಅಂತಹ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ರಾಜ್ಯ/ಕೇಂದ್ರಾಡಳಿತದ ಪ್ರದೇಶದ ಸರ್ಕಾರ ಮತ್ತು ನಗರ ಸ್ಥಳೀಯ ಸಂಸ್ಥೆಗಳು ತಾಂತ್ರಿಕ ಸಂಸ್ಥೆಗಳು (ಐಐಟಿಗಳು, ಎನ್‌ಐಟಿಗಳು ಇತ್ಯಾದಿ), ವಾಸ್ತುಶಿಲ್ಪ, ವಿನ್ಯಾಸ ಸಂಸ್ಥೆಗಳು ಇತ್ಯಾದಿಗಳು ಸೇರಿದಂತೆ ವಿಶ್ವಾಸಾರ್ಹ ಸಂಸ್ಥೆಗಳ ಮೂಲಕ ನಡೆಸುತ್ತವೆ. ಯೋಜನೆಯು ಸಿಎಸ್‌ಎಮ್‌ಸಿಯ ಅನುಮೋದನೆಯೊಂದಿಗೆ ಸಾಮಾಜಿಕ ಲೆಕ್ಕಪರಿಶೋಧನೆಗಾಗಿ ಶೇಕಡಾ 100ರಷ್ಟು ಆರ್ಥಿಕ ನೆರವು ಒದಗಿಸಿದೆ. ಪಿಎಮ್‌ಎವೈ ಯೋಜನೆಯ ಸಾಮಾಜಿಕ ಲೆಕ್ಕಪರಿಶೋಧನೆಯ ಉದ್ದೇಶ, ವ್ಯಾಪ್ತಿ ಮತ್ತು ವರದಿಯನ್ನು ವಿವರಿಸುವ ಮಾರ್ಗಸೂಚಿಗಳನ್ನು ಸಹ ಭಾರತ ಸರ್ಕಾರ ಹೊರಡಿಸಿದೆ.

ಯೋಜನೆಯ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ಎಸ್‌ಎಲ್‌ಎನ್‌ಎ ಇನ್ನೂ ಕೈಗೆತ್ತಿಕೊಳ್ಳದಿರುವುದನ್ನು (ಜೂನ್ 2021) ಲೆಕ್ಕಪರಿಶೋಧನೆಯು ಗಮನಿಸಿತು. ಸಾಮಾಜಿಕ ಲೆಕ್ಕ ಪರಿಶೋಧನೆ/ಮೌಲ್ಯಮಾಪನ ಅಧ್ಯಯನಗಳ ಅನುಪಸ್ಥಿತಿಯಲ್ಲಿ ರಾಜ್ಯ ಸರ್ಕಾರಕ್ಕೆ ಅನುಷ್ಠಾನದಲ್ಲಿನ ಲೋಪಗಳ ಬಗ್ಗೆ ತಿಳಿದಿರಲಿಲ್ಲ ಮತ್ತು ಯೋಜನೆಯ ಪರಿಣಾಮವನ್ನು ನಿರ್ಣಯಿಸುವ ಸ್ಥಿತಿಯಲ್ಲಿಯೂ ಇರಲಿಲ್ಲ.

[25] 2016ರಲ್ಲಿ 19, 2017ರಲ್ಲಿ 10, 2018ರಲ್ಲಿ 64, 2019ರಲ್ಲಿ 15 ಮತ್ತು 2020ರಲ್ಲಿ 3

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯನ್ನು ತನ್ನ ಸಾಮಾಜಿಕ ಲೆಕ್ಕ ಪರಿಶೋಧನಾ ಘಟಕದ ಮೂಲಕ ಯೋಜನೆಯ ಸಾಮಾಜಿಕ ಲೆಕ್ಕಪರಿಶೋಧನೆ ನಡೆಸಲು ಆರ್‌ಜಿಹೆಚ್‌ಸಿಎಲ್ ವಿನಂತಿಸಿದೆ (ಮಾರ್ಚ್ 2020) ಮತ್ತು ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು (ಸೆಪ್ಟೆಂಬರ್ 2021).

# ಅಧ್ಯಾಯ–VI

# ಫಲಿತಾಂಶ ಮತ್ತು ಶಿಫಾರಸುಗಳು

## 6.1 ಫಲಿತಾಂಶ

ವಸತಿ ಬೇಡಿಕೆಯನ್ನು ನಿರ್ಣಯಿಸುವುದಕ್ಕೆ ಸಮೀಕ್ಷೆ ನಡೆಸಲು ಸೂಚಿಸಲಾದ ವಿಧಾನವನ್ನು ಯುಎಲ್‌ಬಿಗಳು ಅನುಸರಿಸಲಿಲ್ಲ. ಕೆಎಹೆಚ್‌ಪಿಯಲ್ಲಿ ಪ್ರಕ್ಷೇಪಿಸಲಾದ 20.35 ಲಕ್ಷ ವಸತಿರಹಿತ ಫಲಾನುಭವಿಗಳಿಗೆ ಪ್ರತಿಯಾಗಿ ಕೇವಲ 13.72 ಲಕ್ಷ ನಿರೀಕ್ಷಿತ ವಸತಿರಹಿತ ಫಲಾನುಭವಿಗಳನ್ನು ಗುರುತಿಸಿದ್ದರಿಂದ ಅಸಮರ್ಪಕ ಸಮೀಕ್ಷೆಯು ಅರ್ಹ ಫಲಾನುಭವಿಗಳನ್ನು ಹೊರಗಿಡುವ ಅಪಾಯವನ್ನು ಹೊಂದಿದೆ. ಬೇಡಿಕೆ ಸಮೀಕ್ಷೆಯನ್ನೂ ಸಹ ನಿಗದಿತ ಸಮಯದೊಳಗೆ ಪೂರ್ಣಗೊಳಿಸಲಿಲ್ಲ ಏಕೆಂದರೆ 13.72 ಲಕ್ಷ ಫಲಾನುಭವಿಗಳಲ್ಲಿ 6.72 ಲಕ್ಷ ಫಲಾನುಭವಿಗಳನ್ನು ಬೇಡಿಕೆ ಸಮೀಕ್ಷೆಯ ನಂತರ ಗುರುತಿಸಲಾಯಿತು. ಹೀಗೆ ಬೇಡಿಕೆ ಸಮೀಕ್ಷೆಯು ನಿರಂತರ ಪ್ರಕ್ರಿಯೆಯಾಗಿ ಮಾರ್ಪಟ್ಟಿದ್ದು, ಇದು ಕಾರ್ಯತಂತ್ರದ ಯೋಜನೆ, ಗುರಿಗಳನ್ನು ನಿಗದಿಪಡಿಸುವುದು ಮತ್ತು ಯೋಜನೆಯ ಗುರಿಯನ್ನು ಸಾಧಿಸಲು ಸಂಪನ್ಮೂಲಗಳ ಹಂಚಿಕೆಯ ಮೇಲೆ ಪರಿಣಾಮ ಬೀರಿತ್ತು.

2472 ಯೋಜನೆಗಳ ಅಡಿಯಲ್ಲಿ ಅನುಮೋದಿಸಲಾದ 5.17 ಲಕ್ಷ ಫಲಾನುಭವಿಗಳ ಪೈಕಿ ಕೇವಲ 3.43 ಲಕ್ಷ ಫಲಾನುಭವಿಗಳನ್ನು ಆಧಾರ್ ಸಂಖ್ಯೆಯಂತಹ ವಿಶಿಷ್ಟ ಗುರುತನ್ನು ಬಳಸಿಕೊಂಡು ಸರಿಯಾದ ಮೌಲ್ಯೀಕರಣದ ನಂತರ ಲಗತ್ತಿಸಲಾಗಿದೆ. ಇದರ ಪರಿಣಾಮವಾಗಿ ಬಿಎಲ್‌ಸಿ ಘಟಕದ ಅಡಿಯಲ್ಲಿ ಜೋಡಣೆಯದ 206 ಫಲಾನುಭವಿಗಳು ಊರ್ಜಿತಗೊಳಿಸದೆ ಎಹೆಚ್‌ಪಿ ಘಟಕದ ಅಡಿಯಲ್ಲಿ ಪ್ರಯೋಜನಗಳನ್ನು ಪಡೆದರು. ಜೋಡಣೆ ಸಮಯದಲ್ಲಿ ಪತಿ/ಪತ್ನಿಯ ವಿವರಗಳನ್ನು ಮೌಲ್ಯೀಕರಿಸದಿರುವುದು 21 ಬಿಎಲ್‌ಸಿ ಫಲಾನುಭವಿಗಳ ಪತಿ/ಪತ್ನಿಯರು ಎಹೆಚ್‌ಪಿ ಘಟಕದ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯುವುದಕ್ಕೆ ಕಾರಣವಾಯಿತು. ಅನುಮೋದಿತ ಡಿಪಿಆರ್ ಅಡಿಯಲ್ಲಿ ಫಲಾನುಭವಿಗಳನ್ನು ಮತ್ತು ಯೋಜನೆಯ ಪ್ರಯೋಜನಗಳನ್ನು ಸ್ವೀಕರಿಸಿದ ಪಟ್ಟಿಯೊಂದಿಗೆ ಹೋಲಿಸಿದರೆ ಅನುಮೋದಿತ ಡಿಪಿಆರ್‌ಗಳಲ್ಲಿನ ಕೇವಲ 12 ಪ್ರತಿಶತದಷ್ಟು ಮೂಲ ಫಲಾನುಭವಿಗಳಿಗೆ ಯೋಜನೆಯಡಿಯಲ್ಲಿ ಪ್ರಯೋಜನಗಳನ್ನು ಒದಗಿಸಲಾಗಿದೆ ಮತ್ತು 44 ಪ್ರತಿಶತದಷ್ಟು ಜನರು ಬೇಡಿಕೆ ಸಮೀಕ್ಷೆಯ ಮೂಲಕ ಪಡೆದ ನಿರೀಕ್ಷಿತ ಫಲಾನುಭವಿಗಳ ಪಟ್ಟಿಯ ಭಾಗವಾಗಿಲ್ಲ ಎಂದು ತಿಳಿದುಬಂದಿದೆ. ನಿಗದಿತ ಕಾರ್ಯವಿಧಾನವನ್ನು ಕಡೆಗಣಿಸುವುದರ ಮೂಲಕ ಅಂತಹ ಫಲಾನುಭವಿಗಳ ಆಯ್ಕೆಯು ಅನರ್ಹ ಫಲಾನುಭವಿಗಳಾದ ಮೂರು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ವಾರ್ಷಿಕ ಆದಾಯ ಹೊಂದಿರುವವರು, ಪಕ್ಕಾ ಮನೆಗಳನ್ನು ಹೊಂದಿರುವವರು ಇತ್ಯಾದಿಗಳಿಗೆ ಯೋಜನೆಯ ಪ್ರಯೋಜನಗಳನ್ನು ವಿಸ್ತರಿಸಲು ಕಾರಣವಾಯಿತು. ಜಂಟಿ ಪರಿಶೀಲನಾ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಪಿಎಂಎವೈ (ಯು) ಅಡಿಯಲ್ಲಿ ನಿರ್ಮಿಸಲಾದ ಶೇಕಡಾ 41 ರಷ್ಟು ಮನೆಗಳು 30 ಚದರ

ಮೀಟರ್‌ಗಿಂತಲೂ ಹೆಚ್ಚು ಕಾರ್ಪೆಟ್ ವಿಸ್ತೀರ್ಣವನ್ನು ಹೊಂದಿರುವ ದುಬಾರಿ ಬಹುಮಹಡಿ ಕಟ್ಟಡಗಳು ಫಲಾನುಭವಿಗಳ ಆಯ್ಕೆಯಲ್ಲಿನ ಅಕ್ರಮಗಳನ್ನು ಒತ್ತಿಹೇಳುತ್ತವೆ..

ಕಾರ್ಯತಂತ್ರ ಯೋಜನಾ ದಾಖಲೆಯಾಗಿದ್ದ ಹೆಚ್‌ಎಫ್‌ಎಪಿಒಎಯನ್ನು ಯೋಜನೆಯ ಪ್ರಾರಂಭವಾದ 5 ವರ್ಷಗಳ ನಂತರ 2020 ರಲ್ಲಿ ಅಂತಿಮಗೊಳಿಸಲಾಯಿತು. ಕೈಗೆಟಕುವ ದರದ ವಸತಿ ಕ್ಷೇತ್ರದ ಬೆಳವಣಿಗೆಯನ್ನು ಸುಗಮಗೊಳಿಸುವಲ್ಲಿ ಆಡಳಿತಾತ್ಮಕ ಮತ್ತು ನಿಯಂತ್ರಕ ಅಡಚಣೆಗಳನ್ನು ನಿವಾರಿಸಲು ಸೂಚಿಸಲಾದ ಕಡ್ಡಾಯ ಸುಧಾರಣೆಗಳನ್ನು ರಾಜ್ಯ ಸರ್ಕಾರವು ಇನ್ನೂ ಸಂಪೂರ್ಣವಾಗಿ ಅನುಸರಿಸಬೇಕಾಗಿದೆ (ಸೆಪ್ಟೆಂಬರ್ 2021).

ಎಹೆಚ್‌ಪಿ ಯೋಜನೆಗಳಲ್ಲಿ, ನಿಗದಿತ ಷರತ್ತುಗಳನ್ನು ಪೂರೈಸದ ಕಾರಣ ಭಾರತ ಸರ್ಕಾರವು ₹1003.55 ಕೋಟಿ ಮೊತ್ತವನ್ನು ತಡೆಹಿಡಿಯಿತು ಮತ್ತು ₹8360.78 ಕೋಟಿ ಮೊತ್ತದ ಫಲಾನುಭವಿ ವಂತಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಪಾಲಿನ ಕಡಿಮೆ ಸಂಗ್ರಹಣೆಯಿಂದಾಗಿ ಆರ್ಥಿಕ ಸಂಪನ್ಮೂಲಗಳನ್ನು ಒಟ್ಟುಗೂಡಿಸುವಲ್ಲಿ ಕೊರತೆಯುಂಟಾಯಿತು. ಎಎಚ್‌ಪಿ ಘಟಕದಡಿಯಲ್ಲಿ ಮೂಲಸೌಕರ್ಯ ಸೌಲಭ್ಯಗಳೊಂದಿಗೆ ಗುಂಪು ವಸತಿ ಒದಗಿಸುವ ಯೋಜನೆಯ ಉದ್ದೇಶವು ಈಡೇರಲಿಲ್ಲ ಏಕೆಂದರೆ ಕೆಎಸ್‌ಡಿಬಿ ತೆಗೆದುಕೊಂಡ ಮನೆಗಳಲ್ಲಿ ಕೇವಲ ಶೇಕಡಾ 14ರಷ್ಟು ಮನೆಗಳು ಮಾತ್ರ ಗುಂಪು ವಸತಿಗಳಾಗಿದ್ದವು ಮತ್ತು ಉಳಿದ ಮನೆಗಳನ್ನು ಚದುರಿದ ರೀತಿಯಲ್ಲಿ ಪ್ರತ್ಯೇಕವಾಗಿ ನಿರ್ಮಿಸಲಾಗಿತ್ತು. ಇದರಿಂದ ಗುತ್ತಿಗೆದಾರರು ಟೆಂಡರ್ ಒಪ್ಪಂದದಂತೆ ಕಾಮಗಾರಿ ಕೈಗೊಳ್ಳುವ ಬದಲು ಸ್ವಂತ ಮನೆ ನಿರ್ಮಿಸಿಕೊಂಡ ಫಲಾನುಭವಿಗಳಿಗೆ ಹಣ ಮತ್ತು ಸಾಮಗ್ರಿಗಳ ಬಿಡುಗಡೆ ಮಾಡುವ ಮೂಲಕ ಅಕ್ರಮ ಮಾಡಲು ಅನುಕೂಲವಾಯಿತು. ಎಹೆಚ್‌ಪಿ ಯೋಜನೆಗಳನ್ನು ನಾಗರಿಕ ಮೂಲಸೌಕರ್ಯಗಳಾದ ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ರಸ್ತೆಗಳು, ವಿದ್ಯುತ್, ಇತ್ಯಾದಿಗಳನ್ನು ಒದಗಿಸದೆ ಕೈಗೆತ್ತಿಕೊಳ್ಳಲಾಗಿತ್ತು.

ಯೋಜನೆಗಳಿಗೆ ಫಲಾನುಭವಿಗಳ ಲಗತ್ತಿಸುವಿಕೆಯಲ್ಲಿನ ಕೊರತೆಯಿಂದಾಗಿ ಭಾರತ ಸರ್ಕಾರವು ಬಿಎಲ್‌ಸಿ ಯೋಜನೆಯಡಿಯಲ್ಲಿ ₹569.56 ಕೋಟಿ ಮೊತ್ತದ ಮೊದಲ ಕಂತಿನ ಬಿಡುಗಡೆಯನ್ನು ತಡೆಹಿಡಿದಿತ್ತು. ನಿರ್ಮಾಣದಲ್ಲಿ ನಿಗದಿತ ಪ್ರಗತಿಯನ್ನು ಸಾಧಿಸಿದ್ದರೂ ಬಿಎಲ್‌ಸಿ ಫಲಾನುಭವಿಗಳಿಗೆ ಪಾವತಿ ಬಿಡುಗಡೆಯಲ್ಲಿ ವಿಳಂಬವಾದ ಪರಿಣಾಮ ಕಾಮಗಾರಿಗಳು ಸ್ಥಗಿತಗೊಂಡಿದ್ದು, ನಿರ್ಮಾಣಕ್ಕಾಗಿ ಹಣ ಬಿಡುಗಡೆಯ ನಿರೀಕ್ಷೆಯಲ್ಲಿ ತಮ್ಮ ಅಸ್ತಿತ್ವದಲ್ಲಿದ್ದ ಮನೆಗಳನ್ನು ನೆಲಸಮ ಮಾಡಿದ ಫಲಾನುಭವಿಗಳಿಗೆ ತೊಂದರೆಯಾಗಿತ್ತು. ಮೊದಲನೇ ಮತ್ತು ಎರಡನೇ ಕಂತುಗಳಾಗಿ ₹87.16 ಕೋಟಿ ಮೊತ್ತದ ಆರ್ಥಿಕ ನೆರವನ್ನು ಪಡೆದಿದ್ದ ಬಿಎಲ್‌ಸಿ ಫಲಾನುಭವಿಗಳು ಉಳಿದ ಕಂತುಗಳನ್ನು ಎರಡರಿಂದ ನಾಲ್ಕು ವರ್ಷಗಳು ಕಳೆದರೂ ಇನ್ನೂ (ಮಾರ್ಚ್ 2021) ಕ್ಲೈಮ್ ಮಾಡಿರಲಿಲ್ಲವಾದ್ದರಿಂದ ಮನೆಗಳು ಅಪೂರ್ಣವಾಗಿ ಉಳಿದು ಅವುಗಳ ಮೇಲಿನ ವೆಚ್ಚವು ಫಲಪ್ರದವಾಗಲಿಲ್ಲ. ವಿಶಿಷ್ಟ ಗುರುತಿನ ಸಂಖ್ಯೆ ಮೂಲಕ ನಿಗದಿತ ದೃಢೀಕರಣವನ್ನು ಮಾಡದೇ 62,648 ಬಿಎಲ್‌ಸಿ ಫಲಾನುಭವಿಗಳಲ್ಲಿ 12,757 ಫಲಾನುಭವಿಗಳಿಗೆ ₹172.64 ಕೋಟಿ ಮೊತ್ತದ ಪಾವತಿಗಳನ್ನು ಮಾಡಿದ್ದರ ಪರಿಣಾಮವಾಗಿ ನಕಲು ಪಾವತಿಗಳಾಗಿದ್ದವು. 111

ಪ್ರಕರಣಗಳಲ್ಲಿ ಬಹು ಫಲಾನುಭವಿ ಕೋಡ್‌ಗಳನ್ನು ರಚಿಸಲಾಗಿತ್ತು ಮತ್ತು ಅಂತಹ ಫಲಾನುಭವಿಗಳಿಗೆ ₹1.30 ಕೋಟಿ ಮೊತ್ತದ ಎರಡು ಪಾವತಿಗಳನ್ನು ಮಾಡಲಾಗಿತ್ತು.

ಸಿಎಲ್‌ಎಸ್‌ಎಸ್ ಘಟಕದಡಿಯಲ್ಲಿ ಮಾಡಿದ ಪಾವತಿಗಳ ಭೌತಿಕ ಮೇಲ್ವಿಚಾರಣೆಯಲ್ಲಿನ ಲೋಪಗಳ ಪರಿಣಾಮವಾಗಿ ಸಿಎಲ್‌ಎಸ್‌ಎಸ್ ಅಡಿಯಲ್ಲಿ ನೆರವನ್ನು ಪಡೆದಿದ್ದ 471 ಫಲಾನುಭವಿಗಳು ಬಿಎಲ್‌ಸಿ ಮತ್ತು ಎಹೆಚ್‌ಪಿ ಘಟಕಗಳಡಿಲ್ಲಿಯೂ ಸಹ ನೆರವನ್ನು ಪಡೆಯುವಲ್ಲಿ ಪರಿಣಮಿಸಿತು. ಬಿಎಲ್‌ಸಿ ಫಲಾನುಭವಿಗಳ ಜಿಯೋ-ಟ್ಯಾಗಿಂಗ್ ಅನ್ನು ನಿಗದಿಪಡಸಿದ್ದ ಭುವನ್ ಅಪ್ಲಿಕೇಶನ್ ಮೂಲಕ ಕೈಗೊಳ್ಳದಿದ್ದುದು ₹0.97 ಕೋಟಿ ವೆಚ್ಚದಲ್ಲಿ ಪ್ರಕ್ರಿಯೆಯ ಅನಗತ್ಯ ನಕಲು ಮಾಡುವುದರಲ್ಲಿ ಪರಿಣಮಿಸಿತು. ಕೆಎಸ್‌ಡಿಬಿಯಿಂದ ಕೈಗೆತ್ತಿಕೊಂಡ ಎಹೆಚ್‌ಪಿ ಯೋಜನೆಗಳ ಜಿಯೋ-ಟ್ಯಾಗಿಂಗ್ ಅನ್ನು ನಿಗದಿಪಡಿಸಿದ್ದ ಭಾರತ್ ಅಪ್ಲಿಕೇಶನ್ನ ಬದಲಿಗೆ ತಾಂತ್ರಿಕ ವಿಶೇಷಣಗಳನ್ನು ಪೂರೈಸಲು ವಿಫಲವಾಗಿದ್ದ ಕೆಎಸ್‌ಡಿಬಿ ಪಿಎಮ್‌ಎಸ್ ಅಪ್ಲಿಕೇಶನ್ ಮೂಲಕ ಕೈಗೊಳ್ಳಲಾಯಿತು. ಸಾಮಾಜಿಕ ಲೆಕ್ಕ ಪರಿಶೋಧನೆ/ಮೌಲ್ಯಮಾಪನ ಅಧ್ಯಯನಗಳ ಅನುಪಸ್ಥಿತಿಯ ಜೊತೆಗೆ ಟಿಪಿಕ್ಯೂಎಮ್‌ಎ ಮತ್ತು ಸಿಎಲ್‌ಟಿಸಿಯ ಕಾರ್ಯನಿರ್ವಹಣೆಯಲ್ಲಿನ ನ್ಯೂನತೆಗಳು ಯೋಜನೆಯ ಮೇಲ್ವಿಚಾರಣೆಯನ್ನು ನಿಷ್ಪರಿಣಾಮಕಾರಿಯನ್ನಾಗಿಸಿತು.

ಮಾರ್ಚ್ 2021ರಲ್ಲಿದ್ದಂತೆ, ಬೇಡಿಕೆ ಸಮೀಕ್ಷೆಯ ಮೂಲಕ ಗುರುತಿಸಲಾದ 13,71,592 ನಿರೀಕ್ಷಿತ ಫಲಾನುಭವಿಗಳಲ್ಲಿ 5,17,531 ಫಲಾನುಭವಿಗಳಿಗೆ (ಶೇಕಡಾ 38) ಮಾತ್ರ ಯೋಜನೆಗಳನ್ನು ಕೈಗೆತ್ತಕೊಳ್ಳಲಾಗಿತ್ತು. ಮಾರ್ಚ್ 2021ರಲ್ಲಿದ್ದಂತೆ ಅನುಮೋದಿತ 5,17,531 ವಸತಿ ಘಟಕಗಳಿಗೆ ಪ್ರತಿಯಾಗಿ 88,395 ವಸತಿ ಘಟಕಗಳನ್ನು (ಶೇಕಡಾ 17) ಮಾತ್ರ ಪೂರ್ಣಗೊಳಿಸಲಾಗಿತ್ತು. 3,28,499 ವಸತಿ ಘಟಕಗಳ (63 ಶೇಕಡಾ) ನಿರ್ಮಾಣವು ಇನ್ನೂ (ಮಾರ್ಚ್ 2021) ಪ್ರಾರಂಭವಾಗಬೇಕಿದ್ದು, ಇದು 2022ರ ವೇಳೆಗೆ 'ಎಲ್ಲರಿಗೂ ವಸತಿ' ಎನ್ನುವ ಯೋಜನೆಯ ಗುರಿಯನ್ನು ಸಾಧಿಸುವುದು ಕಷ್ಟವೆಂಬುದನ್ನು ಸೂಚಿಸುತ್ತಿತ್ತು.

## 6.2 ಶಿಫಾರಸುಗಳು

**ರಾಜ್ಯ ಸರ್ಕಾರ**

- **ರಾಜ್ಯದಲ್ಲಿ ವಸತಿ ಬೇಡಿಕೆಯನ್ನು ದೃಢಪಡಿಸಿಕೊಳ್ಳಲು ರಾಜ್ಯ ಸರ್ಕಾರವು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಗುರಿಯಾದ 2022ರೊಳಗೆ ಮನೆಗಳನ್ನು ಪೂರ್ಣಗೊಳಿಸಲು ಗುರಿಗಳನ್ನು ನಿಗದಿಪಡಿಸುವತ್ತ ಗಮನಹರಿಸಬೇಕು.**
- **ಯೋಜನೆಯ ಗುರಿಗಳನ್ನು ಸಾಧಿಸಲು ಗುರಿಗಳನ್ನು ಮತ್ತು ಸಂಪನ್ಮೂಲಗಳನ್ನು ನಿಗದಿಪಡಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿವಿಧ ಅನುಷ್ಠಾನ ಸಂಸ್ಥೆಗಳು ನಿಗದಿತ ಕಾಲಮಿತಿಯೊಳಗೆ ಕಾರ್ಯತಂತ್ರದ ಯೋಜನೆ ಮತ್ತು ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದನ್ನು ರಾಜ್ಯ ಸರ್ಕಾರ ಖಚಿತಪಡಿಸಿಕೊಳ್ಳಬೇಕು.**

- ಕೇಂದ್ರದ ನೆರವಿನ ಬಿಡುಗಡೆಗೆ ಸೂಚಿಸಲಾದ ಷರತ್ತುಗಳಿಗೆ ರಾಜ್ಯ ಸರ್ಕಾರವು ಬದ್ಧವಾಗಿರಬೇಕು ಮತ್ತು ಯೋಜನೆಯಡಿಯಲ್ಲಿ ಯೋಜನೆಗಳನ್ನು ಅನುಮೋದಿಸುವ ಮೊದಲು ಫಲಾನುಭವಿಗಳ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಪಾಲಿನ ವಂತಿಗೆಯ ಬಗ್ಗೆ ಒಪ್ಪಿಗೆಯನ್ನು ಪಡೆಯಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಕೈಗೆಟಕುವ ದರದ ವಸತಿ ವಲಯದಲ್ಲಿ ಖಾಸಗಿ ವಲಯದ ಸಹಭಾಗಿತ್ವವನ್ನು ಉತ್ತೇಜಿಸಲು ಸೂಚಿಸಲಾದ ಕಡ್ಡಾಯ ಸುಧಾರಣಾ ಷರತ್ತುಗಳನ್ನು ರಾಜ್ಯ ಸರ್ಕಾರವು ಪೂರ್ಣಗೊಳಿಸಬೇಕು.
- ಎಹೆಚ್‌ಪಿ ಘಟಕದಡಿಯಲ್ಲಿ ಅನುಮೋದಿಸಲಾದ ಯೋಜನೆಗಳು ಯೋಜನಾ ಮಾರ್ಗಸೂಚಿಗಳ ಅಡಿಯಲ್ಲಿ ರೂಪಿಸಲಾದ ಗುಂಪು ವಸತಿ ಪರಿಕಲ್ಪನೆಗೆ ಅನುಗುಣವಾಗಿರುವುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು.

ನೋಡಲ್ ಮತ್ತು ಅನುಷ್ಠಾನ ಏಜೆನ್ಸಿಗಳು

- ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು ಯೋಜನೆಗಳಿಗೆ ಎಲ್ಲಾ ಅನುಮೋದಿತ ಫಲಾನುಭವಿಗಳನ್ನು ಲಗತ್ತಿಸಲು ತುರ್ತು ಕ್ರಮ ಕೈಗೊಳ್ಳಬೇಕು ಮತ್ತು ಲಗತ್ತಿಸುವ ಪ್ರಕ್ರಿಯೆ ಪೂರ್ಣಗೊಂಡ ನಂತರವೇ ಯೋಜನೆಯಡಿಯ ಪ್ರಯೋಜನಗಳನ್ನು ಫಲಾನುಭವಿಗಳಿಗೆ ಒದಗಿಸುವುದನ್ನು ಖಚಿತಪಡಿಸಿಕೊಳ್ಳಬೇಕು.
- ವೆಚ್ಚದ ಹೆಚ್ಚಳವನ್ನು ತಪ್ಪಿಸಲು ಮತ್ತು ಫಲಾನುಭವಿಗಳ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಅನುಷ್ಠಾನ ಸಂಸ್ಥೆಗಳು ಅನುಮೋದಿತ ಯೋಜನೆಗಳು ಪ್ರಾರಂಭವಾಗುವಲ್ಲಿನ ವಿಳಂಬಗಳನ್ನು ತಪ್ಪಿಸಬೇಕು.
- ಫಲಾನುಭವಿಗಳಿಗೆ ತೊಂದರೆಯಾಗುವುದನ್ನು ತಪ್ಪಿಸಲು ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು ನಿರ್ಮಾಣದ ಪ್ರಗತಿಗೆ ಅನುಗುಣವಾಗಿ ಬಿಎಲ್‌ಸಿ ಫಲಾನುಭವಿಗಳಿಗೆ ಪಾವತಿಗಳನ್ನು ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು.
- ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು ಡಿಬಿಟಿ ಅಡಿಯಲ್ಲಿ ನಕಲು ಪಾವತಿಗಳ ಜವಾಬ್ದಾರಿಯನ್ನು ನಿಗದಿಪಡಿಸಬೇಕು ಮತ್ತು ಭವಿಷ್ಯದಲ್ಲಿ ಅಂತಹ ನಿದರ್ಶನಗಳನ್ನು ತಪ್ಪಿಸಲು ಬಹು ಫಲಾನುಭವಿ ಕೋಡ್‌ಗಳನ್ನು ಉತ್ಪಾದಿಸುವುದನ್ನು ತಪ್ಪಿಸಲು ನಿಯಂತ್ರಣ ಕಾರ್ಯವಿಧಾನವು ಜಾರಿಯಲ್ಲಿದೆ ಎಂದು ಖಚಿತಪಡಿಸಿಕೊಳ್ಳಬೇಕು.
- ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಫಲಾನುಭವಿಗಳು ನಕಲು ಮಾಡುವ ಸಾಧ್ಯತೆಗಳನ್ನು ತಡೆಗಟ್ಟಲು ಸಿಎಲ್‌ಎಸ್‌ಎಸ್ ಫಲಾನುಭವಿಗಳ ಪಟ್ಟಿಯ ನಿಗದಿತ ಪರಿಶೀಲನೆಯನ್ನು ನಡೆಸಬೇಕು.
- ಎಸ್‌ಎಲ್‌ಎನ್‌ಎ ಮತ್ತು ಕೆಎಸ್‌ಡಿಬಿಗಳು ಪೂರ್ಣಗೊಂಡಿರುವ ಎಲ್ಲಾ ಯೋಜನೆಗಳನ್ನು ಜಿಯೋ-ಟ್ಯಾಗ್ ಮಾಡಲು ಭಾರತ ಸರ್ಕಾರವು ಸೂಚಿಸಿದ ಪ್ರಮಾಣಿತ ಕಾರ್ಯವಿಧಾನಗಳನ್ನು ಅನುಸರಿಸಬೇಕು.

- **ಮಾರ್ಗಸೂಚಿಯಲ್ಲಿ ಸೂಚಿಸಲಾದ ಯೋಜನೆಯ ಸಾಮಾಜಿಕ ಲೆಕ್ಕಪರಿಶೋಧನೆಯನ್ನು ತೆಗೆದುಕೊಳ್ಳಬೇಕು ಮತ್ತು ಟಿಪಿಕ್ಯೂಎಮ್‌ಎ ಹಾಗೂ ಎಸ್‌ಎಲ್‌ಟಿಸಿಗಳ ಮೂಲಕ ಮೇಲ್ವಿಚಾರಣೆಯನ್ನು ಬಲಪಡಿಸಬೇಕು.**



**ಬೆಂಗಳೂರು** | **(ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)**
**ದಿನಾಂಕ** | **ಮಹಾಲೇಖಾಪಾಲರು (ಆಡಿಟ್–II)**

**ಮೇಲೆರುಜು ಮಾಡಲಾಗಿದೆ**



**ನವದೆಹಲಿ** | **(ಗಿರೀಶ್ ಚಂದ್ರ ಮುರ್ಮು)**
**ದಿನಾಂಕ** | **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

## ಅನುಬಂಧ–1.1

(ಉಲ್ಲೇಖ: ಕಂಡಿಕೆ–1.4, ಪುಟ–3)

### ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಗೆ ಆಯ್ಕೆ ಮಾಡಿದ ಮಾದರಿಗಳ ವಿವರಗಳು

| ವಿಭಾಗ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆ | ಎಹೆಚ್‌ಪಿ | ಬಿಎಲ್‌ಸಿ | ಒಟ್ಟು ಯೋಜನೆಗಳು |
|---|---|---|---|---|---|
| ಕಲಬುರಗಿ | ಕೊಪ್ಪಳ | ಕೊಪ್ಪಳ | 1 | 4 | 5 |
| | ಬಳ್ಳಾರಿ | ಬಳ್ಳಾರಿ | 1 | 4 | 5 |
| | | ಹರಪನಹಳ್ಳಿ | 1 | 2 | 3 |
| | | ಕಮಲಾಪುರ | 1 | 2 | 3 |
| | | ತೆಕ್ಕಲಕೋಟ | 1 | 5 | 6 |
| ಬೆಳಗಾವಿ | ಬೆಳಗಾವಿ | ಬೆಳಗಾವಿ | 1 | 3 | 4 |
| | | ಚಿಕ್ಕೋಡಿ | 1 | 3 | 4 |
| | | ಗೋಕಾಕ | 1 | 2 | 3 |
| | | ಕುಡಚಿ | 1 | 4 | 5 |
| | | ರಾಮದುರ್ಗ | 1 | 5 | 6 |
| | ವಿಜಯಪುರ | ಬಸವನ ಬಾಗೇವಾಡಿ | 1 | 3 | 4 |
| | | ಇಂಡಿ | 1 | 4 | 5 |
| | | ಮುದ್ದೇಬಿಹಾಳ | 1 | 4 | 5 |
| | | ವಿಜಯಪುರ | 2 | 5 | 7 |
| ಮೈಸೂರು | ಚಿಕ್ಕಮಗಳೂರು | ಚಿಕ್ಕಮಗಳೂರು | 1 | 2 | 3 |
| | | ಕಡೂರು | 1 | 3 | 4 |
| | | ತರೀಕೆರೆ | 1 | 3 | 4 |
| | ದಕ್ಷಿಣ ಕನ್ನಡ | ಮಂಗಳೂರು | 1 | 6 | 7 |
| | ಮಂಡ್ಯ | ಮದ್ದೂರು | 1 | 4 | 5 |
| | | ಮಳವಳ್ಳಿ | 1 | 4 | 5 |
| | | ಮಂಡ್ಯ | 1 | 5 | 6 |
| | | ನಾಗಮಂಗಲ | 1 | 2 | 3 |
| ಬೆಂಗಳೂರು | ಬೆಂಗಳೂರು ನಗರ | ಆನೇಕಲ್ | 1 | 3 | 4 |
| | | ಬಿಬಿಎಮ್‌ಪಿ | 11 | 2 | 13 |
| | ಶಿವಮೊಗ್ಗ | ಭದ್ರಾವತಿ | 1 | 3 | 4 |
| | | ಸಾಗರ | 1 | 3 | 4 |
| | | ಶಿರಾಳಕೊಪ್ಪ | 1 | 3 | 4 |
| | | ಶಿವಮೊಗ್ಗ | 1 | 2 | 3 |
| | | ಸೊರಬ | 1 | 2 | 3 |
| | ತುಮಕೂರು | ಕೊರಟಗೆರೆ | 1 | 3 | 4 |
| | | ಕುಣಿಗಲ್ | 1 | 3 | 4 |
| | | ಮಧುಗಿರಿ | 1 | 4 | 5 |
| | | ಪಾವಗಡ | 1 | 2 | 3 |
| | | ಸಿರಾ | 1 | 3 | 4 |
| | | ತುಮಕೂರು | 1 | 4 | 5 |
| | | ತುರುವೇಕೆರೆ | 1 | 2 | 3 |
| **ಒಟ್ಟು** | **10** | **36** | **47** | **118** | **165** |

## ಅನುಬಂಧ–2.1

### (ಉಲ್ಲೇಖ: ಕಂಡಿಕೆ–2.2.1, ಪುಟ–9)

### ಎಹೆಚ್‌ಪಿ ಮತ್ತು ಬಿಎಲ್‌ಸಿ ಘಟಕಗಳಡಿಯಲ್ಲಿ ಪ್ರಯೋಜನಗಳನ್ನು ಪಡೆದ ಫಲಾನುಭವಿಗಳ ಪಟ್ಟಿ

| ಕ್ರಮ ಸಂಖ್ಯೆ | ಕೆಎಸ್‌ಡಿಬಿ ಎಹೆಚ್‌ಬಿ ಯೋಜನೆ | ಡಿಯುಗಳ ಸಂಖ್ಯೆ | ಕೊಳೆಗೇರಿಯ ಹೆಸರು | ಎಹೆಚ್‌ಪಿ ಯೋಜನೆಯ ಸ್ಥಿತಿ | ಫಲಾನುಭವಿಯ ಹೆಸರು | ನಗರ ಸ್ಥಳೀಯ ಸಂಸ್ಥೆ | ಬಿಎಲ್‌ಸಿ ಅಡಿ ಪ್ರಗತಿ | ಬಿಎಲ್‌ಸಿ ಅಡಿ ಪಡೆದ ಪ್ರಯೋಜನಗಳು (₹) |
|---|---|---|---|---|---|---|---|---|
| 1 | ಚಿಕ್ಕೋಡಿ | 449 | ಭೀಮನಗರ್ | ಛಾವಣಿ ಹಾಕಲಾಗಿದೆ | ಅರವಿಂದ ಕೆ ಭಂಡಾರ್‌ಕರ್ | ಚಿಕ್ಕೋಡಿ | ಪೂರ್ಣಗೊಂಡಿದೆ | 329800 |
| 2 | ಚಿಕ್ಕೋಡಿ | 449 | ಭೀಮನಗರ್ | ಛಾವಣಿ ಹಾಕಲಾಗಿದೆ | ಭಾರತಿ ಭಾರತ್ ಶೆಟ್ಟಣ್ಣನವರ್ | ಚಿಕ್ಕೋಡಿ | ಪೂರ್ಣಗೊಂಡಿದೆ | 329800 |
| 3 | ಚಿಕ್ಕೋಡಿ | 449 | ಭೀಮನಗರ್ | ಛಾವಣಿ ಹಾಕಲಾಗಿದೆ | ಭೀಮಸೇನ ಅರವಿಂದ್ ಬಂಢಾರ್‌ಕರ್ | ಚಿಕ್ಕೋಡಿ | ಪೂರ್ಣಗೊಂಡಿದೆ | 329800 |
| 4 | ಚಿಕ್ಕೋಡಿ | 449 | ಮಾತಾಂಗಿಕೇರಿ | ಲಿಂಟಲ್ | ಪುಲಾಬಾಯಿ ಕಾಂಬ್ಲೆ | ಚಿಕ್ಕೋಡಿ | ಪೂರ್ಣಗೊಂಡಿದೆ | 329800 |
| 5 | ಚಿಕ್ಕೋಡಿ | 449 | ಮಾತಾಂಗಿಕೇರಿ | ಛಾವಣಿ ಹಾಕಲಾಗಿದೆ | ಶಾಣವ್ವ ಬಸಪ್ಪ ಭಜಂತ್ರಿ | ಚಿಕ್ಕೋಡಿ | ಪೂರ್ಣಗೊಂಡಿದೆ | 329800 |
| 6 | ಚಿಕ್ಕೋಡಿ | 449 | ಮಾತಾಂಗಿಕೇರಿ | ಮೇಲುಪಾಯ | ಸೇವಂತ ತಂಗಡಿ | ಚಿಕ್ಕೋಡಿ | ಪೂರ್ಣಗೊಂಡಿದೆ | 329800 |
| 7 | ಚಿಕ್ಕೋಡಿ | 449 | ಭೀಮನಗರ | ಲಿಂಟಲ್ | ವಿಜಯ ಕುಮಾರ್ ಮೇಘಣ್ಣನವರ್ | ಚಿಕ್ಕೋಡಿ | ಪೂರ್ಣಗೊಂಡಿದೆ | 329800 |
| 8 | ಚಿಕ್ಕೋಡಿ | 449 | ಭೀಮನಗರ | ಛಾವಣಿ ಹಾಕಲಾಗಿದೆ | ಯಮನಪ್ಪ ಶೆಟ್ಟಣ್ಣನವರ್ | ಚಿಕ್ಕೋಡಿ | ಪೂರ್ಣಗೊಂಡಿದೆ | 199800 |
| 9 | ಇಂಡಿ | 250 | ಗೋರಿಪಟ್ಟಿ ತಾಂಡ | ಛಾವಣಿ ಹಾಕಲಾಗಿದೆ | ಜ್ಯೋತಿ ಧನಿಕುಮಾರ್ ರಾಥೋಡ್ | ಇಂಡಿ | ಪೂರ್ಣಗೊಂಡಿದೆ | 112300 |
| 10 | ಇಂಡಿ | 250 | ಗೋರಿಪಟ್ಟಿ ತಾಂಡ ಸ್ಲಮ್ | ಛಾವಣಿ ಹಾಕಲಾಗಿದೆ | ಕಾಜಪ್ಪ ಬಿ ಸಿಂಗೇಗೋಲ್ | ಇಂಡಿ | ಪೂರ್ಣಗೊಂಡಿದೆ | 224800 |
| 11 | ಇಂಡಿ | 250 | ಕುಂಬಾರ ಓಣಿ ಸ್ಲಮ್ | ಲಿಂಟಲ್ | ರುಕ್ಮಭಾಯಿ ಚಂದ್ರಕಾಂತ್ ಜಾದವ್ | ಇಂಡಿ | ತಳಪಾಯ | 49800 |
| 12 | ಕಡೂರು | 404 | ಅಂಬೇಡ್ಕರ್ ನಗರ | ಮೇಲುಪಾಯ | ಕರಿಯಮ್ಮ | ಕಡೂರು | ತಳಪಾಯ | 44801 |
| 13 | ಕುಣಿಗಲ್ | 500 | ಕೆಆರ್‌ಎಸ್ ಅಗ್ರಹಾರ | ಲಿಂಟಲ್ | ಲಕ್ಷಮ್ಮ | ಕುಣಿಗಲ್ | ಪೂರ್ಣಗೊಂಡಿದೆ | 179800 |
| 14 | ಕುಣಿಗಲ್ | 500 | ಕೆಆರ್‌ಎಸ್ ಅಗ್ರಹಾರ | ಪೂರ್ಣಗೊಳ್ಳುತ್ತಿದೆ | ಎಮ್ ಎಸ್ ಲಲಿತ | ಕುಣಿಗಲ್ | ತಳಪಾಯ | 82300 |
| 15 | ಕುಣಿಗಲ್ | 500 | ವನಂಬಾಡಿ | ಪೂರ್ಣಗೊಳ್ಳುತ್ತಿದೆ | ಸಂತೋಷ್ ಕುಮಾರ್ | ಕುಣಿಗಲ್ | ಛಾವಣಿ | 134800 |
| 16 | ಮದ್ದೂರು | 250 | ಮುಸ್ಲಿಮ್ ಬ್ಲಾಕ್ | ಮೇಲುಪಾಯ | ನಂಜಮ್ಮ | ಮದ್ದೂರು | ಪೂರ್ಣಗೊಂಡಿದೆ | 299800 |
| 17 | ಮದ್ದೂರು | 250 | ಮುಸ್ಲಿಮ್ ಬ್ಲಾಕ್ | ಮೇಲುಪಾಯ | ರಿಜ್ವಾನ್ ಭಾನು | ಮದ್ದೂರು | ಪೂರ್ಣಗೊಂಡಿದೆ | 269800 |
| 18 | ಮಧುಗಿರಿ | 450 | ಬೆಂಕೀಪುರ | ಛಾವಣಿ ಹಾಕಲಾಗಿದೆ | ದೇವೀರಮ್ಮ | ಮಧುಗಿರಿ | ಛಾವಣಿ | 134800 |
| 19 | ಮಧುಗಿರಿ | 450 | ಬೆಂಕೀಪುರ | ಪೂರ್ಣಗೊಂಡಿದೆ | ನಾಗರತ್ನಮ್ಮ | ಮಧುಗಿರಿ | ಪೂರ್ಣಗೊಂಡಿದೆ | 329800 |
| 20 | ಮಳವಳ್ಳಿ | 500 | ಉಮ್ಮತ್ತೂರಯ್ಯ ಬಡಾವಣೆ | ಮೇಲುಪಾಯ | ಶಾರದ | ಮಳವಳ್ಳಿ | ಪೂರ್ಣಗೊಂಡಿದೆ | 269800 |
| 21 | ಮಳವಳ್ಳಿ | 500 | ಎ ಜೆ ಕಾಲೋನಿ | ಮೇಲುಪಾಯ | ತಾಯಮ್ಮ | ಮಳವಳ್ಳಿ | ಪೂರ್ಣಗೊಂಡಿದೆ | 329800 |
| 22 | ಪಾವಗಡ | 300 | ಕದಮಲಕೆರೆ | ಛಾವಣಿ ಹಾಕಲಾಗಿದೆ | ಭದ್ರಪ್ಪ | ಪಾವಗಡ | ಪೂರ್ಣಗೊಂಡಿದೆ | 329800 |
| 23 | ಪಾವಗಡ | 300 | ಆಚಾರ್ ಬೀದಿ | ಛಾವಣಿ ಹಾಕಲಾಗಿದೆ | ಲಲಿತಮ್ಮ | ಪಾವಗಡ | ಪೂರ್ಣಗೊಂಡಿದೆ | 329800 |
| 24 | ರಾಮದುರ್ಗ | 600 | | ಛಾವಣಿ ಹಾಕಲಾಗಿದೆ | ಇರವ ಮಾರುತಿ ಹೊಸಮನಿ | ರಾಮದುರ್ಗ | ಲಿಂಟಲ್ | 112300 |
| 25 | ರಾಮದುರ್ಗ | 600 | ವಿಠಲಪೇಟೆ ನಾರಾಯಣಪೇಟೆ | ಪೂರ್ಣಗೊಂಡಿದೆ | ಮಾರುತಿ ಕೇಶಪ್ಪ ಭಜಂತ್ರಿ | ರಾಮದುರ್ಗ | ಛಾವಣಿ | 262300 |
| 26 | ರಾಮದುರ್ಗ | 600 | ಈಟಿ ಓಣಿ | ಪೂರ್ಣಗೊಂಡಿದೆ | ಯಲ್ಲವ್ವ ಮುರಗೋಡ್ | ರಾಮದುರ್ಗ | ಪೂರ್ಣಗೊಂಡಿದೆ | 262300 |

## ಅನುಬಂಧ–2.1 (ಮುಂದುವರಿದಿದೆ…..)

| ಕ್ರಮ ಸಂಖ್ಯೆ | ಕೆಎಸ್‌ಡಿಬಿ ಎಹೆಚ್‌ಬಿ ಯೋಜನೆ | ಡಿಯುಗಳ ಸಂಖ್ಯೆ | ಕೊಳೆಗೇರಿಯ ಹೆಸರು | ಎಹೆಚ್‌ಪಿ ಯೋಜನೆಯ ಸ್ಥಿತಿ | ಫಲಾನುಭವಿಯ ಹೆಸರು | ನಗರ ಸ್ಥಳೀಯ ಸಂಸ್ಥೆ | ಬಿಎಲ್‌ಸಿ ಅಡಿ ಪ್ರಗತಿ | ಬಿಎಲ್‌ಸಿ ಅಡಿ ಪಡೆದ ಪ್ರಯೋಜನಗಳು (₹) |
|---|---|---|---|---|---|---|---|---|
| 27 | ಸಿರಾ | 1008 | ಕಲ್ಲುಕೋಟೆ ಸರ್ವೆ ನಂ 103/2P | ಮೇಲುಪಾಯ | ರೇಷ್ಮ ಭಾನು | ಸಿರಾ | ಛಾವಣಿ | 119800 |
| 28 | ಸಿರಾ | 1008 | ಕಲ್ಲುಕೋಟೆ ಸರ್ವೆ ನಂ 103/2P | ಮೇಲುಪಾಯ | ರಾಧ | ಸಿರಾ | ಪೂರ್ಣಗೊಂಡಿದೆ | 329800 |
| 29 | ಸಾಗರ | 1588 | ಹೊಸ ಜಿ ಪಿ ನಗರ | ಛಾವಣಿ ಹಾಕಲಾಗಿದೆ | ಮಂಜುಳ | ಸಾಗರ | ಪೂರ್ಣಗೊಂಡಿದೆ | 299800 |
| 30 | ಸಾಗರ | 1588 | ಆನಲೇಕೊಪ್ಪ ಸರ್ವೆ ನಂ.7 | ಛಾವಣಿ ಹಾಕಲಾಗಿದೆ | ರಾಧ | ಸಾಗರ | ಪೂರ್ಣಗೊಂಡಿದೆ | 299800 |
| 31 | ಗೋಕಾಕ್ | 600 | ಹೊಸಪೇಟ್ ಗಲ್ಲಿ | ಪೂರ್ಣಗೊಂಡಿದೆ | ರಾಮಪ್ಪ ಬಂಡಿ | ಗೋಕಾಕ್ | ಪೂರ್ಣಗೊಂಡಿದೆ | 119803 |
| 32 | ಗೋಕಾಕ್ | 600 | ಹೊಸಪೇಟ್ ಗಲ್ಲಿ | ಪೂರ್ಣಗೊಂಡಿದೆ | ಮಲ್ಲವ್ವ ಬಿ ಮೇದಾರ್ | ಗೋಕಾಕ್ | ಪೂರ್ಣಗೊಂಡಿದೆ | 329800 |
| 33 | ಗೋಕಾಕ್ | 600 | ವಡ್ಡರಗಲ್ಲಿ | ಪೂರ್ಣಗೊಂಡಿದೆ | ಶೈಲಾ ಕುಂಡರ್ಗಿ | ಗೋಕಾಕ್ | ಪೂರ್ಣಗೊಂಡಿದೆ | 179801 |
| 34 | ಗೋಕಾಕ್ | 600 | ಹರಿಜನ ಕೇರೆ | ಛಾವಣಿ ಹಾಕಲಾಗಿದೆ | ರಾಮಪ್ಪ ಹೆಚ್ ಬೆಳಗಾವಿ | ಗೋಕಾಕ್ | ಪೂರ್ಣಗೊಂಡಿದೆ | 269800 |
| 35 | ಶಿವಮೊಗ್ಗ | 1590 | ಶಾಂತಿ ನಗರ | ಪೂರ್ಣಗೊಂಡಿದೆ | ಎಸ್ ಕುಮಾರ್ | ಶಿವಮೊಗ್ಗ | ಪೂರ್ಣಗೊಂಡಿದೆ | 329800 |
| 36 | ಕಡೂರು | 404 | ನರಬೋವಿ ಕಾಲೋನಿ | ಪೂರ್ಣಗೊಂಡಿದೆ | ರತ್ನಮ್ಮ | ಕಡೂರು | ಲಿಂಟಲ್ | 164800 |
| 37 | ಮಳವಳ್ಳಿ | 500 | ಉಮ್ಮತ್ತೂರಯ್ಯ ಬಡಾವಣೆ | ಲಿಂಟಲ್ | ಎಮ್ ಸೌಮ್ಯ | ಮಳವಳ್ಳಿ | ಛಾವಣಿ | 74800 |
| 38 | ಮಳವಳ್ಳಿ | 500 | ಎ ಜೆ ಕಾಲೋನಿ | ಲಿಂಟಲ್ | ಶಿವಮ್ಮ | ಮಳವಳ್ಳಿ | ಪೂರ್ಣಗೊಂಡಿದೆ | 299800 |
| **ಬಿಎಲ್‌ಸಿಯಡಿ ಪಾವತಿಸಿದ ಒಟ್ಟು ಪ್ರಯೋಜನಗಳು** | | | | | | | | **9084905** |

ಆಧಾರ: ಆರ್‌ಜಿಹೆಚ್‌ಸಿಎಲ್ ನೀಡಿದ ದತ್ತಾಂಶದಿಂದ ಪಡೆದ ಮಾಹಿತಿ

**ಅನುಬಂಧ–2.2**

**(ಉಲ್ಲೇಖ: ಕಂಡಿಕೆ–2.2.1, ಪುಟ–9)**

**ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸಿದ ಎಹೆಚ್‌ಪಿ ಯೋಜನೆಗಳಡಿಯಲ್ಲಿ ಬಹು ಪ್ರಯೋಜನಗಳನ್ನು ಪಡೆದ ಫಲಾನುಭವಿಗಳ ಪಟ್ಟಿ**

| ಕ್ರಮ ಸಂಖ್ಯೆ | ಹೆಸರು | ಯೋಜನೆ | ಡಿಯುಗಳ ಸಂಖ್ಯೆ | ಕೆಎಸ್‌ಡಿಬಿ ಪ್ರಗತಿ ವರದಿಯಲ್ಲಿನ ಕ್ರಮ ಸಂಖ್ಯೆ | ಕೆಎಸ್‌ಡಿಬಿ ಪ್ರಗತಿ ವರದಿಯ ಅನ್ವಯ ಐಡಿ ಸಂಖ್ಯೆ | ಕೊಳೆಗೇರಿ ಹೆಸರು |
|---|---|---|---|---|---|---|
| 1 | ಟಿ ಎನ್ ಅಮರನಾಥ್ | ಬಿಬಿಎಮ್‌ಪಿ 895 ಡಿಯುಗಳು | 2 | 513, 262 | 180001, 65511 | ಪ್ರಗತಿಪುರ |
| 2 | ಮುಬೀನ | ಬಿಬಿಎಮ್‌ಪಿ 895 ಡಿಯುಗಳು | 3 | 560,59, 581 | 183929, 65582, 184060 | ಸರಬಂಡೆಪಾಳ್ಯ 2 ಡಿಯುಗಳು, ಹರಿ ಕಾಲೋನಿ 1 ಡಿಯು |
| 3 | ಮನೋಜ್‌ಕುಮಾರ್ | ಕುಣಿಗಲ್ 500 ಡಿಯುಗಳು | 2 | 181,186 | 54429,54434 | ಕೆಆರ್‌ಎಸ್ ಅಗ್ರಹಾರ |
| 4 | ಗಣಪತಿ | ಸಾಗರ 1588 ಡಿಯುಗಳು | 2 | 189,174 | 10052,10037 | ಆನಲೇಕೊಪ್ಪ ಸರ್ವೆ ನಂ.07 |
| 5 | ನಾಗಮ್ಮ | ಶಿವಮೊಗ್ಗ 1590 ಡಿಯುಗಳು | 2 | 23,692 | 2564,173221 | ಚಿಕ್ಕಮಟ್ಟಿ ಹಂತ–2 |
| 6 | ಪ್ರೇಮ | ಚಿಕ್ಕಮಗಳೂರು 280 ಡಿಯುಗಳು | 2 | 5,71 | 45075,12070 | ತಮಿಳ್ ಮತ್ತು ಭೋವಿ ಕಾಲೋನಿ |
| 7 | ರೂಪ ಹೆಚ್ | ಬಿಬಿಎಮ್‌ಪಿ 933 ಡಿಯುಗಳು | 2 | 470,504 | 66052,68094 | ಸ್ವತಂತ್ರಪಾಳ್ಯ |
| 8 | ನಾಗರಾಜು | ಬಿಬಿಎಮ್‌ಪಿ 768 ಡಿಯುಗಳು | 2 | 679,546 | 36487,36354 | ರಾಮಮೂರ್ತಿ ನಗರ, ಅಂಬೇಡ್ಕರ್ ನಗರ |
| 9 | ಇಂದ್ರಾಬೀ | ತುರುವೇಕೆರೆ 200 ಡಿಯುಗಳು | 2 | 65,56 | 61091,61082 | ದೇವೇಗೌಡ ಬಡಾವಣೆ |
| 10 | ಅಮೀನ್‌ಸಾಬಿ ಪೀರ್‌ಜಾಡೆ | ವಿಜಯಪುರ 1028 ಡಿಯುಗಳು | 2 | 159,227 | 30125,30193 | ಸರ್ವೆ ನಂ.1057/ಎ (ಗುನ್ನಾಪುರ ರಸ್ತೆ) & ಸರ್ವೆ ನಂ. 110 (ಇಂಡಿ ರಸ್ತೆ) |
| 11 | ಅಶೋಕ್ ಭೂತನಾಲ್ | ವಿಜಯಪುರ 1028 ಡಿಯುಗಳು | 2 | 793,457 | 81602,30423 | ಪೇಟೆ ಬವದಿ ಕೊಳೆಗೇರಿ |
| 12 | ಕುಮುದ | ಬಿಬಿಎಮ್‌ಪಿ 933 ಡಿಯುಗಳು | 2 | 469,503 | 66051,68093 | ಸ್ವತಂತ್ರಪಾಳ್ಯ |
| 13 | ರಂಗಮ್ಮ | ಮಧುಗಿರಿ 450 ಡಿಯುಗಳು | 2 | 40,23 | 23144,23127 | ಬೆಂಕಿಪುರ ಮತ್ತು ಭೋವಿ ಕಾಲೋನಿ |
| 14 | ಪದ್ಮ | ಬಿಬಿಎಮ್‌ಪಿ 768 ಡಿಯುಗಳು | 2 | 549, 687 | 36357,36495 | ರಾಮಮೂರ್ತಿನಗರ, ಅಂಬೇಡ್ಕರನಗರ |
| 15 | ಮಂಜು. ಎಂ | ಬಿಬಿಎಮ್‌ಪಿ 759 ಡಿಯುಗಳು | 2 | 8,28 | 39361,62014 | ಎ ಕೆ ಕಾಲೋನಿ |
| 16 | ಬಬಿತ ಟಿ ಗಾಯಕ್‌ವಾಡ್ | ವಿಜಯಪುರ 1028 ಡಿಯುಗಳು | 2 | 84,575 | 30050,68024 | ಸರ್ವೆ ನಂ.1057/ಎ (ಗುನ್ನಾಪುರ ರಸ್ತೆ) & ಸರ್ವೆ ನಂ. 110 (ಇಂಡಿ ರಸ್ತೆ) |
| 17 | ವೆಳ್ಳಿಯಮ್ಮ | ಬಿಬಿಎಮ್‌ಪಿ 933 ಡಿಯುಗಳು | 2 | 224,272 | 18293,18341 | ಸ್ವತಂತ್ರಪಾಳ್ಯ |
| 18 | ರವಿ | ಚಿಕ್ಕಮಗಳೂರು 280 ಡಿಯುಗಳು | 2 | 82,50 | 12081,12049 | ತಮಿಳ್ ಮತ್ತು ಭೋವಿ ಕಾಲೋನಿ |
| 19 | ಮುನಿಸ್ವಾಮಿ | ಚಿಕ್ಕಮಗಳೂರು 280 ಡಿಯುಗಳು | 2 | 121,64 | 173564,12063 | ತಮಿಳ್ ಮತ್ತು ಭೋವಿ ಕಾಲೋನಿ |
| 20 | ಮೆಹಬೂಬ್ | ಬಿಬಿಎಮ್‌ಪಿ 895 ಡಿಯುಗಳು | 2 | 290,324 | 52806,52869 | ಕಾವೇರಿ ನಗರ |
| 21 | ಜಯಮ್ಮ | ಬಿಬಿಎಮ್‌ಪಿ 933 ಡಿಯುಗಳು | 2 | 471,501 | 66053,68089 | ಸ್ವತಂತ್ರಪಾಳ್ಯ |
| 22 | ಶಂಕರಪ್ಪ | ಶಿವಮೊಗ್ಗ 1590 ಡಿಯುಗಳು | 2 | 690,21 | 173219,2562 | ಚಿಕ್ಕಮಟ್ಟಿ ಹಂತ–2 |
| 23 | ಟಿ ಎಸ್ ಶಂಕರ್ | ತರೀಕೆರೆ 250 ಡಿಯುಗಳು | 2 | 25,29 | 11040,78628 | ನಾಗಪ್ಪ ಕಾಲೋನಿ ಮತ್ತು ವಾಸಪ್ಪ ಕಾಲೋನಿ |
| 24 | ಪ್ರಕ್ರುದ್ದೀನ ಸಾಬ್ | ಮಧುಗಿರಿ 450 ಡಿಯುಗಳು | 2 | 392,44 | 172786,23148 | ಬಂಕೀಪುರ |
| 25 | ಲತ | ಬಿಬಿಎಮ್‌ಪಿ 762 ಡಿಯುಗಳು | 2 | 497,496 | 56070,56079 | ಲಿಂಗರಾಜಪುರಮ್ ಎ ಬ್ಲಾಕ್ |
| 26 | ಗಾಯಿತ್ರಿ | ಬಿಬಿಎಮ್‌ಪಿ 1008 ಡಿಯುಗಳು | 2 | 264,959 | 18786,171943 | ರಾಜೇಂದ್ರನಗರ |
| 27 | ಸುಶೀಲಾಬಾಯಿ ಕಂಬಾರ್ | ವಿಜಯಪುರ 1028 ಡಿಯುಗಳು | 2 | 302,303 | 30268,30269 | ಕುಂಬಾರ ಓಣಿ ಸ್ಲಮ್ |
| 28 | ಶ್ರುತಿ | ಚಿಕ್ಕಮಗಳೂರು 280 ಡಿಯುಗಳು | 2 | 8,78 | 45077,12077 | ತಮಿಳ್ ಮತ್ತು ಭೋವಿ ಕಾಲೋನಿ |

## ಅನುಬಂಧ–2.2 (ಮುಂದುವರಿದಿದೆ....)

| ಕ್ರಮ ಸಂಖ್ಯೆ | ಹೆಸರು | ಯೋಜನೆ | ಡಿಯುಗಳ ಸಂಖ್ಯೆ | ಕೆಎಸ್‌ಡಿಬಿ ಪ್ರಗತಿ ವರದಿಯಲ್ಲಿನ ಕ್ರಮ ಸಂಖ್ಯೆ | ಕೆಎಸ್‌ಡಿಬಿ ಪ್ರಗತಿ ವರದಿಯ ಅನ್ವಯ ಐಡಿ ಸಂಖ್ಯೆ | ಕೊಳೆಗೇರಿ ಹೆಸರು |
|---|---|---|---|---|---|---|
| 29 | ಎನ್ ರಾಮಂಜನೇಯಮ | ಬಿಬಿಎಮ್‌ಪಿ 933 ಡಿಯುಗಳು | 2 | 304,589 | 18373,91108 | ಸ್ವತಂತ್ರಪಾಳ್ಯ |
| 30 | ಮಲ್ಲಿಕಾರ್ಜುನ | ಬಿಬಿಎಮ್‌ಪಿ 768 ಡಿಯುಗಳು | 2 | 513,591 | 36321,36399 | ರಾಮಮೂರ್ತಿನಗರ, ಅಂಬೇಡ್ಕರ್‌ನಗರ |
| 31 | ರಮೇಶ್ ಟಿ.ಜಿ | ತರೀಕೆರೆ 250 ಡಿಯುಗಳು | 2 | 114,31 | 173405,11046 | ನಾಗಪ್ಪ ಪಾಳ್ಯ |
| 32 | ಗಂಗಮ್ಮ | ಬಿಬಿಎಮ್‌ಪಿ | 2 | 481,652 | 36289,36460 | ರಾಮಮೂರ್ತಿನಗರ, ಅಂಬೇಡ್ಕರ್‌ನಗರ |
| 33 | ಚಂದ್ರಕಾಲ್ ಎಸ್ ಗಣೂರ್ | ವಿಜಯಪುರ 1028 ಡಿಯುಗಳು | 2 | 766,665 | 81574,68294 | ಶಿಕರ್‌ಖಾನಾ ಕೊಳೆಗೇರಿ ಮತ್ತು ಸರ್ವೆ ನಂ.1057/ಎ (ಗುನ್ನಾಪುರ ರಸ್ತೆ) & ಸರ್ವೆ ನಂ. 110 (ಇಂಡಿ ರಸ್ತೆ) |
| 34 | ಶಕುಂತಲ | ಬಿಬಿಎಮ್‌ಪಿ 933 ಡಿಯುಗಳು | 2 | 455,301 | 66015,18370 | ಸ್ವತಂತ್ರಪಾಳ್ಯ |
| 35 | ಪೆಂಚಾಲಮ್ಮ | ಬಿಬಿಎಮ್‌ಪಿ 1008 ಡಿಯುಗಳು | 2 | 674,791 | 51616,62595 | ರಾಜೇಂದ್ರನಗರ |
| 36 | ಪೀರ್‌ಸಾಬ್ ಕುಡುದರಹಾಲ್ | ತೆಕ್ಕಲಕೋಟೆ 268 ಡಿಯುಗಳು | 2 | 247,215 | 69067,31160 | ಮೆಬೂಸ್‌ಬಾನಿ ಓಣಿ |
| 37 | ಉಮಾಲಕ್ಷ್ಮಿ | ಬಿಬಿಎಮ್‌ಪಿ 1008 ಡಿಯುಗಳು | 2 | 704,934 | 51646,171918 | ಎಕೆ ಭೋವಿ ಕಾಲೋನಿ |
| 38 | ಈಶ್ವರಪ್ಪ | ತರೀಕೆರೆ 250 ಡಿಯುಗಳು | 2 | 34,57 | 11049,78637 | ನಾಗಪ್ಪ ಕಾಲೋನಿ |
| 39 | ಚಿನ್ನಮ್ಮ | ಬಿಬಿಎಮ್‌ಪಿ | 2 | 93,174 | 40096,39527 | ಎಲ್‌ಬಿಎಸ್ ನಗರ ಮತ್ತು ವೆಂಕಟಲ |
| 40 | ರಂಗಮ್ಮ | ಬಿಬಿಎಮ್‌ಪಿ | 2 | 84,26 | 58045,26319 | ಸಂಜೀವಿನಿ ನಗರ |
| 41 | ಮಂಜುನಾಥ್ ಜಿ ಶೇತ್ | ಶಿವಮೊಗ್ಗ 1590 ಡಿಯುಗಳು | 2 | 139,9 | 2673,51194 | ಇಂದಿರಾ ಬಡಾವಣೆ |
| 42 | ಶೀಬಾ | ಬಿಬಿಎಮ್‌ಪಿ | 2 | 146,21 | 17852,179967 | ಲಿಂಗರಾಜಪುರಂ ಬಿ ಬ್ಲಾಕ್ |
| 43 | ಬಿ.ಎಲ್.ರಾಜೇಶ್ | ಬಿಬಿಎಮ್‌ಪಿ | 2 | 468,502 | 66050,68091 | ಸ್ವತಂತ್ರಪಾಳ್ಯ |
| 44 | ಮಲ್ಲಿಕ ಪಿ | ಬಿಬಿಎಮ್‌ಪಿ | 2 | 582,712 | 51524,62516 | ರಾಜೇಂದ್ರನಗರ |
| 45 | ರೇಣುಕ ರಮೇಶ್ ಜಲವಾಡಿ | ವಿಜಯಪುರ 1028 ಡಿಯುಗಳು | 2 | 472,284 | 68101,30250 | ಸರ್ವೆ ನಂ.110 (ಇಂಡಿ ರಸ್ತೆ) ಮತ್ತು ಶಿಖರ್ ಖಾನಾ ಕೊಳೆಗೇರಿ |
| 46 | ವಿಜಯ ಎಮ್ | ಬಿಬಿಎಮ್‌ಪಿ 933 ಡಿಯುಗಳು | 2 | 456,314 | 66016,18383 | ಸ್ವತಂತ್ರಪಾಳ್ಯ |
| 47 | ಮಾದಮ್ಮ | ಬಿಬಿಎಮ್‌ಪಿ 1008 ಡಿಯುಗಳು | 2 | 518,524 | 19040,19046 | ಸಿದ್ಧಾರ್ಥ ಕಾಲೋನಿ |
| 48 | ಪುಟ್ಟಮ್ಮ | ಬಿಬಿಎಮ್‌ಪಿ 768 ಡಿಯುಗಳು | 3 | 514,536, 655 | 36322,36344,36463 | ರಾಮಮೂರ್ತಿ ನಗರ ಮತ್ತು ಅಂಬೇಡ್ಕರ್‌ನಗರ |
| 49 | ವೀರೇಶ್ | ಶಿರಾಳಕೊಪ್ಪ 250 ಡಿಯುಗಳು | 2 | 7,21 | 57160,57169 | ಪಂಪ್ ಹೌಸ್ |
| 50 | ಗೌರಮ್ಮ | ಮಳವಳ್ಳಿ 500 ಡಿಯುಗಳು | 2 | 348,430 | 60832,72435 | ಉಮ್ಮತ್ತೂರಯ್ಯ ಬಡಾವಣೆ |
| 51 | ತಸೀನಾ ಬಾನು | ಬಿಬಿಎಮ್‌ಪಿ 895 ಡಿಯುಗಳು | 2 | 183,255 | 65600,65437 | ಸರಬಂಡೆಪಾಳ್ಯ ಮತ್ತು ಹರಿ ಕಾಲೋನಿ |
| 52 | ರತ್ನಮ್ಮ | ಬಿಬಿಎಮ್‌ಪಿ 762 ಡಿಯುಗಳು | 2 | 437,254 | 56010,17960 | ಸತ್ಯನಗರ |
| 53 | ರೇಷ್ಮ ಎ ಅರಬ | ವಿಜಯಪುರ 1028 ಡಿಯುಗಳು | 2 | 476,69 | 68105,30035 | ಸರ್ವೆ ನಂ.1057/A (ಗುನ್ನಾಪುರ ರಸ್ತೆ) & ಸರ್ವೆ ನಂ.110 (ಇಂಡಿ ರಸ್ತೆ) |
| 54 | ಸುವರ್ಣ ತಿಲಗುಲ್ | ವಿಜಯಪುರ 1028 ಡಿಯುಗಳು | 2 | 113,226 | 30079,30192 | ಸರ್ವೆ ನಂ.1057/A (ಗುನ್ನಾಪುರ ರಸ್ತೆ) & ಸರ್ವೆ ನಂ.110 (ಇಂಡಿ ರಸ್ತೆ) |
| 55 | ಪ್ರಸನ್ನ | ಮಳವಳ್ಳಿ 500 ಡಿಯುಗಳು | 2 | 253,267 | 60737,60751 | ಎ ಜೆ ಕಾಲೋನಿ |
| 56 | ಎನ್ ಕುಮಾರ್ | ಬಿಬಿಎಮ್‌ಪಿ 1008 ಡಿಯುಗಳು | 2 | 337,586 | 18859,51528 | ರಾಜೇಂದ್ರನಗರ |

## ಅನುಬಂಧ–2.2 (ಮುಂದುವರಿದಿದೆ....)

| ಕ್ರಮ ಸಂಖ್ಯೆ | ಹೆಸರು | ಯೋಜನೆ | ಡಿಯುಗಳ ಸಂಖ್ಯೆ | ಕೆಎಸ್‌ಡಿಬಿ ಪ್ರಗತಿ ವರದಿಯಲ್ಲಿನ ಕ್ರಮ ಸಂಖ್ಯೆ | ಕೆಎಸ್‌ಡಿಬಿ ಪ್ರಗತಿ ವರದಿಯ ಅನ್ವಯ ಐಡಿ ಸಂಖ್ಯೆ | ಕೊಳೆಗೇರಿ ಹೆಸರು |
|---|---|---|---|---|---|---|
| 57 | ಎಮ್ ಲಕ್ಷ್ಮ | ಬಿಬಿಎಮ್‌ಪಿ 1008 ಡಿಯುಗಳು | 2 | 938,818 | 171922,62622 | ಭೋವಿ ಕಾಲೋನಿ |
| 58 | ಸಿಂಗಾರಿ | ಶಿವಮೊಗ್ಗ 1590 ಡಿಯುಗಳು | 2 | 756,154 | 174858,2685 | ಕುಂಬಾರಗುಂಡಿ ಎಸ್ ಎಮ್ ಜಿ |
| 59 | ಆನಂದನ್ ಎನ್ | ಬಿಬಿಎಮ್‌ಪಿ 933 ಡಿಯುಗಳು | 2 | 472,505 | 66054,68096 | ಸ್ವತಂತ್ರಪಾಳ್ಯ |
| 60 | ಮೌಲ ಆಲಿ, ಹಾಜಿಲಾಲ್ ಸಾಬ್, ಶಹರ್ ಫ್ಲದೆ | ವಿಜಯಪುರ 1028 ಡಿಯುಗಳು | 2 | 453,794 | 30419,81603 | ಪೇಟೆ ಬವದಿ ಕೊಳೆಗೇರಿ |
| 61 | ಚಂದ್ರಮ್ಮ | ಬಿಬಿಎಮ್‌ಪಿ 768 ಡಿಯುಗಳು | 2 | 689,640 | 36497,36448 | ರಾಮಮೂರ್ತಿನಗರ, ಅಂಬೇಡ್ಕರ್‌ನಗರ |
| 62 | ಎನ್ ಶಾಂತಮ್ಮ | ಬಿಬಿಎಮ್‌ಪಿ 895 ಡಿಯುಗಳು | 2 | 313,297 | 183703,65524 | ಪ್ರಗತಿಪುರ |
| 63 | ಉಮೇಶ್ | ಬಿಬಿಎಮ್‌ಪಿ 762 ಡಿಯುಗಳು | 2 | 574,575 | 56147,58806 | ಲಿಂಗರಾಜಪುರಮ್ ಬಿ ಬ್ಲಾಕ್ |
| 64 | ಪದ್ಮ | ಬಿಬಿಎಮ್‌ಪಿ 1008 ಡಿಯುಗಳು | 2 | 707,820 | 51649,62624 | ಎ ಕೆ ಭೋವಿ ಕಾಲೋನಿ |
| 65 | ರಿಹಾನಾ ತಾಜ್ | ನಾಗಮಂಗಲ 250 ಡಿಯುಗಳು | 2 | 216,96 | 175127,56867 | ಎ ಡಿ ಕಾಲೋನಿ ಮತ್ತು ತಾಲ್ಲೂಕು ಕಛೇರಿ ಹಿಂಬಾಗ |
| 66 | ಮಧುಲ್ಯತಿ | ಪಾವಗಡ 300 ಡಿಯುಗಳು | 2 | 102,22 | 49533,5251 | ಆಫ್ ಬಂಡೆ ಮತ್ತು ಕಡಮಲಕೆರೆ |
| 67 | ಗೀತ | ಬಿಬಿಎಮ್‌ಪಿ 768 ಡಿಯುಗಳು | 2 | 535,656 | 36343,36464 | ರಾಮಮೂರ್ತಿನಗರ, ಅಂಬೇಡ್ಕರ್‌ನಗರ |
| 68 | ಜಿ ಕೆ ನಾಗರಾಜ್ | ಶಿವಮೊಗ್ಗ 1590 ಡಿಯುಗಳು | 2 | 691,22 | 173220,2563 | ಚಿಕ್ಕಮಟ್ಟಿ ಹಂತ–2 |
| 69 | ಲಕ್ಷ್ಮಿದೇವಿ | ಪಾವಗಡ 300 ಡಿಯುಗಳು | 2 | 23,128 | 5252,49559 | ಆಫ್ ಬಂಡೆ ಮತ್ತು ಕಡಮಲಕೆರೆ |
| 70 | ಜಿ.ವೆಂಕಟೇಶ್ | ಬಿಬಿಎಮ್‌ಪಿ 933 ಡಿಯುಗಳು | 2 | 278,9 | 18347,18078 | ಸ್ವತಂತ್ರಪಾಳ್ಯ |
| 71 | ಪಾಪಮ್ಮ | ಪಾವಗಡ 300 ಡಿಯುಗಳು | 2 | 119,140 | 49550,49571 | ಕಡಮಲಕೆರೆ |
| 72 | ಸರಸ್ವತಿ | ಬಿಬಿಎಮ್‌ಪಿ 762 ಡಿಯುಗಳು | 2 | 396,412 | 51409,51425 | ಸತ್ಯನಗರ |
| 73 | ನಾಗರಾಜ | ಬಿಬಿಎಮ್‌ಪಿ 895 ಡಿಯುಗಳು | 2 | 72,204 | 65473,65605 | ಪ್ರಗತಿಪುರ ಮತ್ತು ಸರಬಂಡೇಪಾಳ್ಯ |
| 74 | ಸಲೀಮ್ ಶಾ ಸಿಎಸ್ | ಬಿಬಿಎಮ್‌ಪಿ 895 ಡಿಯುಗಳು | 2 | 261,376 | 52796,76906 | ಸರಬಂಡೇಪಾಳ್ಯ |
| 75 | ದುರ್ಗವ್ವ, ಲಕ್ಷ್ಮಣ ರೋಹಿನಾಲ್ | ವಿಜಯಪುರ1028 ಡಿಯುಗಳು | 2 | 238,578 | 30204,68208 | ಸರ್ವೆ ನಂ.1057/A (ಗುನ್ನಾಪುರ್ ರಸ್ತೆ) & ಸರ್ವೆ ನಂ.110 (ಇಂಡಿ ರಸ್ತೆ) |
| 76 | ಶಾಂತಾ ಜಿ ಮರಲ್ | ವಿಜಯಪುರ 1028 ಡಿಯುಗಳು | 2 | 765,666 | 81573,68295 | ಶಿಖರ್ ಖಾನಾ ಕೊಳೆಗೇರಿ ಮತ್ತು ಸರ್ವೆ ನಂ.1057/ಎ (ಗುನ್ನಾಪುರ್ ರಸ್ತೆ) & ಸರ್ವೆ ನಂ.110 (ಇಂಡಿ ರಸ್ತೆ) |
| 77 | ಮಲ್ಲಿಕ | ಬಿಬಿಎಮ್‌ಪಿ 762 ಡಿಯುಗಳು | 2 | 33,195 | 14347,175794 | ಲಿಂಗರಾಜಪುರಮ್ ಎ ಬ್ಲಾಕ್ |
| 78 | ಹನಮೇಶ್ | ಕೊಪ್ಪಳ 337 ಡಿಯುಗಳು | 2 | 329,141 | 171756,44737 | ದೇವರಾಜ್ ಅರಸ್ ಕಾಲೋನಿ |
| 79 | ಕುಮಾರ್ ಜಿ | ಬಿಬಿಎಮ್‌ಪಿ 1008 ಡಿಯುಗಳು | 2 | 819,939 | 62623,171923 | ಭೋವಿ ಕಾಲೋನಿ |
| 80 | ಹಂಸ | ಶಿವಮೊಗ್ಗ 1590 ಡಿಯುಗಳು | 2 | 689,19 | 173142,2560 | ಚಿಕ್ಕಮಟ್ಟಿ ಹಂತ–2 |
| 81 | ಮರಿಯಮ್ಮ | ಬಿಬಿಎಮ್‌ಪಿ 768 ಡಿಯುಗಳು | 2 | 627,515 | 36435,36323 | ರಾಮಮೂರ್ತಿನಗರ, ಅಂಬೇಡ್ಕರ್‌ನಗರ |
| 82 | ರೇಶ್ಮ ತಾಜ್ | ಬಿಬಿಎಮ್‌ಪಿ 933 ಡಿಯುಗಳು | 2 | 408,585 | 18477,80320 | ಗೋಪಾಲಪುರ |
| 83 | ವೆಂಕಟೇಶ್ | ಬಿಬಿಎಮ್‌ಪಿ 768 ಡಿಯುಗಳು | 2 | 676,582 | 36484,36390 | ರಾಮಮೂರ್ತಿನಗರ, ಅಂಬೇಡ್ಕರ್‌ನಗರ |
| 84 | ಪಾರ್ವತಮ್ಮ | ಚಿಕ್ಕಮಗಳೂರು 280 ಡಿಯುಗಳು | 2 | 16,122 | 12015,173565 | ಲ್ಯಾಂಡಿ ತಲಾಬ್ |
| 85 | ರತ್ನಮ್ಮ | ಬಿಬಿಎಮ್‌ಪಿ 933 ಡಿಯುಗಳು | 2 | 316,457 | 18385,66017 | ಸ್ವತಂತ್ರಪಾಳ್ಯ |
| 86 | ವೆಂಕಟೇಶ್ | ಬಿಬಿಎಮ್‌ಪಿ 1008 ಡಿಯುಗಳು | 2 | 790,675 | 62594,51617 | ರಾಜೇಂದ್ರನಗರ |

ಆಧಾರ: ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ನೀಡಿದ ದತ್ತಾಂಶದಿಂದ ಪಡೆದ ಮಾಹಿತಿ

## ಅನುಬಂಧ–2.3
### (ಉಲ್ಲೇಖ: ಕಂಡಿಕೆ–2.2.2, ಪುಟ–10)
### ವಿವಿಧ ಘಟಕಗಳಡಿಯಲ್ಲಿ ಪತಿ/ಪತ್ನಿಯರಿಬ್ಬರೂ ಪ್ರಯೋಜನಗಳನ್ನು ಪಡೆದ ವಿವರಗಳು

| ಕ್ರಮ ಸಂಖ್ಯೆ | ಬಿಎಲ್‌ಸಿ ಅಡಿಯ ಫಲಾನುಭವಿಯ ಹೆಸರು | ರಾಜ್ಯ ಫಲಾನುಭವಿ ಕೋಡ್ | ಪತಿ ಅಥವಾ ಪತ್ನಿ ಹೆಸರು | ಪತಿ ಅಥವಾ ಪತ್ನಿ ಪ್ರಯೋಜನವನ್ನು ಪಡೆದ ಎಹೆಚ್‌ಪಿ ಯೋಜನೆಯ ಹೆಸರು |
|---|---|---|---|---|
| 1 | ಅನುಸೂಯ ಪುಂಡಲೀಕ ಘೋರ್ಪಡೆ | 724603 | ಪುಂಡಲೀಕ ಘೋರ್ಪಡೆ | ವಿಜಯಪುರ 1800 ಡಿಯು |
| 2 | ಕಸ್ತೂರಿ ವಾಲಿಕರ್ | 735851 | ಲಕ್ಷಣ್ ವಾಲಿಕರ್ | ವಿಜಯಪುರ 1800 ಡಿಯು |
| 3 | ಪರ್ವಿನ್ ಜಾನ್‌ವೇಕರ್ | 735990 | ಬಿಲಾಲ್ ಜಾನ್‌ವೇಕರ್ | ವಿಜಯಪುರ 1028 ಡಿಯು |
| 4 | ರೂಪ ಗಣಪತಿ ಭಂಡಾರಿ | 580191 | ಗಣಪತಿ ಆರ್ ಭಂಡಾರಿ | ವಿಜಯಪುರ 1800 ಡಿಯು |
| 5 | ನಸೀರಾಬಾನು ಖಾನ್ | 580567 | ಅಫ್ಜಲ್‌ಖಾನ್ ಎಮ್ ಖಾನ್ | ವಿಜಯಪುರ 1800 ಡಿಯು |
| 6 | ಇಂದುಮತಿ ಸುರೇಶ ಮನೆ | 580563 | ಸುರೇಶ್ ಮನೆ | ವಿಜಯಪುರ 1800 ಡಿಯು |
| 7 | ರೇವು ವಾಲಿಕೇರಿ | 735641 | ಸುಜಾತ ವಾಲಿಕರ್ | ವಿಜಯಪುರ 1800 ಡಿಯು |
| 8 | ಮಿಲಿಂದ್ರ ಭಂಡಾರಿ | 735855 | ಚಂದ್ರಶೇನಿ ಮಿಲಿಂದ್ರ ಭಂಡಾರಿ | ವಿಜಯಪುರ 1800 ಡಿಯು |
| 9 | ಭಾರತಿ ಯಶ್ವಂತ ಮನೆ | 588341 | ಯಶ್ವಂತ್ ಆರ್ ಮಾನೆ | ವಿಜಯಪುರ 1800 ಡಿಯು |
| 10 | ಅನಿಲ್ ನಾಮದೇವ್ ಚೌಹಾಣ್ | 724525 | ದೇಜಾನೆ ಅನಿಲ್ ಚೌಹಾಣ್ | ವಿಜಯಪುರ 1800 ಡಿಯು |
| 11 | ಕರೀಮ್ ಅಬ್ದುಲ್ ಖಾದರ್ ಅಹ್ಮದ್ ನಗರ್ | 588957 | ಹಸೀನ ಕೆ ಅಹ್ಮದ್‌ನಗರ್ | ವಿಜಯಪುರ 1028 ಡಿಯು |
| 12 | ರಿಯಾನ್ ಕಂಕಲೆ | 735055 | ಮೌಲ್ವಿ ಭಾಷಾಸ್ ಕಂಕಲೆ | ವಿಜಯಪುರ 1800 ಡಿಯು |
| 13 | ಸುನೀತಾ ಸಂತೋಷ್ ಚೌಹಾಣ್ | 601592 | ಸಂತೋಷ್ ಮೇಘು ಚೌಹಾಣ್ | ವಿಜಯಪುರ 1800 ಡಿಯು |
| 14 | ಸುರಭೀ ಮಹಾದೇವ ಚೌಹಾಣ್ | 624580 | ಮಹಾದೇವ ರೇವು ಚೌಹಾಣ್ | ವಿಜಯಪುರ 1800 ಡಿಯು |
| 15 | ಕಾಶೀಭಾಯಿ ಜಯರಾಮ್ ಚೌಹಾಣ್ | 586231 | ಜಯರಾಮ್ ಜಿವಲ್ ಚೌಹಾಣ್ | ವಿಜಯಪುರ 1800 ಡಿಯು |
| 16 | ಪುರಾಬಾಯಿ ಅಶೋಕ್ ರಾಥೋಡ್ | 601776 | ಅಶೋಕ್ ಸೇವು ರಾಥೋಡ್ | ವಿಜಯಪುರ 1800 ಡಿಯು |
